ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಅಕ್ಟೋಬರ್ 5 ಶನಿವಾರ 2024 | ₹4

ಸಂಪುಟ: 45 | ಸಂಚಿಕೆ: 170 | ಪುಟಗಳು: 12

45

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

ಕುಸ್ತಿ ಅಖಾಡದಲ್ಲಿ ಪೈಲ್ವಾನರ ಪಟ್ಟು-ಪ್ರತಿ ಪಟ್ಟು; ನೆರೆದಿದ್ದವರಿಗೆ ರೋಚಕ ಅನುಭವ



ಮೈಸೂರು, ಅ.4(ಎಂಕೆ)– ದಸರಾ ಕುಸ್ತಿ ಅಖಾಡದಲ್ಲಿ ಪೈಲ್ವಾನರ ಕಾಳಗ ರಂಗೇರುತ್ತಿದ್ದು, ಕುಸ್ತಿ ಪ್ರೇಮಿಗಳಿಗೆ ರಸದೌತಣ ದೊರೆಯುತ್ತಿದೆ..!

ನಗರದ ದೊಡ್ಡಕೆರೆ ಮೈದಾನ ಆವರಣದ ಶ್ರೀ ಡಿ.ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ದಸರಾ ನಾಡ ಕುಸ್ತಿ ಪಂದ್ಯಾವಳಿಯಲ್ಲಿ ಶುಕ್ರವಾರ ನಡೆದ 34 ಜೊತೆ ಕುಸ್ತಿ ಪಂದ್ಯಗಳು ನೋಡುಗರಲ್ಲಿ ಕ್ರೀಡೋತ್ಸಾಹ ಹೆಚ್ಚಿಸಿತು.

ಆರಂಭದಲ್ಲಿ ಪೈಸಿದ್ದು ವಿರುದ್ಧ ಪೈದೀಕ್ಷಿತ್ 15 ನಿಮಿಷದಲ್ಲಿ ಗೆಲುವು ಸಾಧಿಸಿದರೆ, ಪೈದರ್ಶನ್ ವಿರುದ್ಧ ಪೈಹೆಚ್.ಸಿ.ಸೂರಜ್ 5.30 ನಿಮಿಷದಲ್ಲಿ ಚಿತ್ ಮಾಡುವ ಮೂಲಕ ಗೆಲುವಿನ ನಗೆ ಬೀರಿದರು. ಹಾಗೆಯೇ ಪೈ.ರಾಯನ್ ಸೂರ್ ಇಮ್ರಾನ್ ವಿರುದ್ಧ ಪೈ.ಸಿ.ಚೇತನ್, ಪೈ.ಧನುಷ್‌ಗೌಡ ವಿರುದ್ಧ ಪೈ.ವೊಹಮ್ಮದ್ ತಾಹಿರ್ ರಣ ರೋಚಕ ಜಯ ಪಡೆದರು.

ಹಾಗೆಯೇ ಪೈ.ಎಂ.ಆರ್.ಸರ್ವಣ್‌ಕುಮಾರ್ ವಿರುದ್ಧ ಪೈ.ಮುಬಾರಕ್ ಪಾಷ, ಪೈ.ಹೆಚ್. ನಾರಾಯಣ್ ವಿರುದ್ಧ ಪೈ.ಎನ್.ಆರ್. ಸುಹಾಸ್‌ಗೌಡ, ಪೈ.ಶ್ರೀನಿವಾಸ್ ವಿರುದ್ಧ ಪೈ.ಮೊಹಮ್ಮದ್ ಅಜಾನ್ ಖಾನ್, ಪೈ.ಮಹದೇವಸ್ವಾಮಿ ವಿರುದ್ಧ ಪೈ.ಸುಯೇಂದರ್‌ಗೌಡ, ಪೈ.ಆರ್.ನಿತಿನ್ ವಿರುದ್ಧ ಪೈ.ಎನ್.ವಿಕಾಸ್, ಪೈ.ಎನ್.ಗಗನ್ ವಿರುದ್ಧ ಪೈ.ಆರ್. ಚರಣ್ ಜಯಭೇರಿ ಬಾರಿಸಿದರು. ಉಳಿದ ಪಂದ್ಯಗಳು ಸಮಬಲದಲ್ಲಿ ಅಂತ್ಯಕಂಡವು.

40 ಸೆಕೆಂಡ್‌ನಲ್ಲಿ ಗೆಲುವು: ಈ ನಡುವೆ ಅಖಾಡಕ್ಕಿಳಿದ ಪೈ.ಪುನೀತ್ ವಿರುದ್ಧ ಪೈ.ಎಸ್. ರವಿಕುಮಾರ್ ಕೇವಲ 40 ಸೆಕೆಂಡ್‌ನಲ್ಲಿ ಜಯ ಸಾಧಿಸಿದರು. ಅಖಾಡಕ್ಕಿಳಿದು ತೊಡೆ ತಟ್ಟು ವಷ್ಟರಲ್ಲೇ ಎದುರಾಳಿಯನ್ನು ನೆಲಕ್ಕೆ ಕೆಡವಿದ ಪೈ.ಎಸ್.ರವಿ ಕುಮಾರ್ ಕ್ಷಣಾರ್ಧದಲ್ಲಿ ಜಯ ದಾಖಲಿಸಿದರು.

ವಸ್ತು ಪ್ರದರ್ಶನದಲ್ಲಿ ಮತ್ತೆ ಮಹನೀಯರ ನಾಮಫಲಕ ಅಳವಡಿಸಿದ ಪ್ರಾಧಿಕಾರ

ಮಹನೀಯರ ನಾಮಫಲಕ ತೆರವು ವಿರೋಧಿಸಿ ಪ್ರತಿಭಟನೆ ನಡೆದಿತ್ತು



ದಸರಾ ವಸ್ತು ಪ್ರದರ್ಶನ ಆವರಣದಲ್ಲಿ ನೂತನವಾಗಿ ಅಳವಡಿಸಿರುವ ನಾಮಫಲಕ

ಮೈಸೂರು, ಅ.4(ಜಿಎ)–ಮೈಸೂರು ದಸರಾ ವಸ್ತು ಪ್ರದರ್ಶನದ ಆವರಣದಲ್ಲಿ ಮಹನೀಯರ ನಾಮಫಲಕಗಳನ್ನು ತೆರವುಗೊಳಿಸಿ ಕನ್ನಡಪರ ಸಂಘಟನೆಗಳ ಕೆಂಗಣ್ಣಿಗೆ ಗುರಿಯಾಗಿದ್ದ ವಸ್ತು ಪ್ರದರ್ಶನ ಪ್ರಾಧಿಕಾರ ಮತ್ತೆ ಮಹನೀಯರ ನಾಮಫಲಕವನ್ನು ನೂತನವಾಗಿ ಅಳವಡಿಸಿದೆ.

ಮೈಸೂರಿನ ವಸ್ತುಪ್ರದರ್ಶನದ ಆವರಣದಲ್ಲಿ ಕನ್ನಡ ನಾಡು-ನುಡಿ ಪರಂಪರೆಗೆ ಕೊಡುಗೆಗಳನ್ನು ನೀಡಿದ ಮಹನೀಯರನ್ನು ಸ್ಮರಿಸುವ ನಾಮಫಲಕಗಳನ್ನು ತೆರವುಗೊಳಿಸಿರುವುದಕ್ಕೆ ಸಾಕಷ್ಟು ವಿರೋಧ ವ್ಯಕ್ತವಾಗಿತ್ತು. ಈ ವೇಳೆ ಪ್ರಾಧಿಕಾರ ಅಧ್ಯಕ್ಷ ಅಯೂಬ್ ಖಾನ್ ಪ್ರತಿಭಟನಾಕಾರರ ಜೊತೆ ಮಾತನಾಡಿ ಸಂಜೆಯೊಳಗೆ ನಾಮಫಲಕಗಳನ್ನು ಪಾರಂಪರಿಕ ಶೈಲಿಯ ಮಾದರಿಯಲ್ಲಿ ಅಳವಡಿಸುವುದಾಗಿ ಭರವಸೆ ನೀಡಿದ್ದರು.

ಭರವಸೆಯಂತೆ ದಸರಾ ವಸ್ತುಪ್ರದರ್ಶನ ಉದ್ಘಾಟನೆಯಾಗುವುದಕ್ಕಿಂತ ಮುಂಚಿತವಾಗಿ ಉತ್ತಮ ದರ್ಜೆಯ ನಾಮಫಲಕಗಳನ್ನು ಅಳವಡಿಸಿದ್ದಾರೆ.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ 'ದಸರೆಯ ಮೊದಲ ದಿನವೇ ಘಜನಿ ಮಹಮದ್ ಸಂಸ್ಕೃತಿ ಮೆರೆದ ಕಾಂಗ್ರೆಸ್ ಸರ್ಕಾರ ಹಿಂದೂ ದೇವಾಲಯಗಳನ್ನು ಧ್ವಂಸ ಗೊಳಿಸಿದ ಕುಖ್ಯಾತಿಯ ಘಜ್ನಿ ಮಹಮದ್‌ನ ಸಂಸ್ಕೃತಿಯನ್ನು ನಾಡ ಹಬ್ಬ ದಸರೆಯ ಸಂದರ್ಭದಲ್ಲಿ ಮೆರೆದು ಕನ್ನಡ ನಾಡಿನ ಮಹನೀಯರನ್ನು ಅವಮಾನಿಸಿದೆ, ಇದು ನಾಡಹಬ್ಬಕ್ಕೆ ಬಳಿದ ಕಪ್ಪು ಮಸಿಯಾಗಿದೆ' ಎಂದು ತಮ್ಮ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದರು.

ನಾನು ಮೈಸೂರಿನ ಮೇಯರ್ ಆಗಿ ಸೇವೆ ಸಲ್ಲಿಸಿರುವವನು. ನನಗೆ ನಾಡು, ನುಡಿಯ ಬಗ್ಗೆ ಸಾಕಷ್ಟು ಗೌರವವಿದೆ. ಉನ್ನತ ದರ್ಜೆಯ ನಾಮಫಲಕಗಳನ್ನು ಪಾರಂಪರಿಕ ಶೈಲಿಯ ಮಾದರಿಯಲ್ಲಿ ಎಲ್ಲಾ ಮಹನೀಯರ ನಾಮಫಲಕಗಳನ್ನು ಅಳವಡಿಸಲು ಸಿದ್ಧಪಡಿಸಲಾಗುತ್ತಿತು ಎಂದು ಪ್ರಾಧಿಕಾರ ಅಧ್ಯಕ್ಷ ಅಯೂಬ್ ಖಾನ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ವಸ್ತುಪ್ರದರ್ಶನದ ಆವರಣದಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ. ಅದನ್ನು ಬಿಟ್ಟು ಈ ವಿಷಯನ್ನು ಇಟ್ಟುಕೊಂಡು ಈ ರೀತಿ ಮಾಡಿರುವುದು ನೋಡಿದರೆ, ಅಲ್ಪಸಂಖ್ಯಾತ ವ್ಯಕ್ತಿ ಪ್ರಾಧಿಕಾರ ಅಧ್ಯಕ್ಷನಾಗಿರುವುದು ಬಿಜೆಪಿಯ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಸಹಿಸದೇ ಈ ರೀತಿ ಬರೆದುಕೊಂಡಿದ್ದಾರೆ ಎಂದು ಕಿಡಿಕಾರಿದರು.

ಅ.27, ಬೆಂಗಳೂರಿನ ಫ್ರೀಡಂ ಪಾರ್ಕಿನಲ್ಲಿ ಮದ್ಯ ವರ್ತಕರ ಬೃಹತ್ ಪ್ರತಿಭಟನೆ



ಮೈಸೂರಿನ ಕುವೆಂಪುನಗರದಲ್ಲಿರುವ ಮದ್ಯ ವರ್ತಕರ ಸಂಘದ ಆವರಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಸಂಘದ ನೂತನ ಅಧ್ಯಕ್ಷ ಗುರುಸ್ವಾಮಿ ಮಾತನಾಡಿದರು.

ಮೈಸೂರು, ಅ.4(ಜಿಎ)–ಮದ್ಯ ವರ್ತಕರ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಅ.27ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಮದ್ಯ ವರ್ತಕರು ಬೃಹತ್ ಪ್ರತಿಭಟನೆ ನಡೆಸಲಿದ್ದಾರೆ ಎಂದು ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಮದ್ಯ ವರ್ತಕರ ಸಂಘ ತಿಳಿಸಿದೆ.

ಮೈಸೂರಿನ ಕುವೆಂಪುನಗರದಲ್ಲಿರುವ ಸಂಘದ ಆವರಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಸಂಘದ ನೂತನ ಅಧ್ಯಕ್ಷ ಗುರುಸ್ವಾಮಿ ಮಾತನಾಡಿ, ಈ ಹಿಂದೆ ನಮ್ಮ ಲಾಭಾಂಶ ಶೇ.20ರಷ್ಟಿತ್ತು. ಆದರೆ, ಸರ್ಕಾರ ಈಗ ಲಾಭಂಶವನ್ನು ಶೇ.10ಕ್ಕೆ ಇಳಿಸಿದೆ. ಲಾಭಂಶವನ್ನು ಕನಿಷ್ಠ ಶೇ.15ಕ್ಕೆ ಏರಿಸಬೇಕು. ರಾಜ್ಯ ಸರ್ಕಾರಕ್ಕೆ ಅತಿ ಹೆಚ್ಚು ಆದಾಯ ಬರೋದೆ ನಮ್ಮಿಂದ. ಆದರೆ ನಮ್ಮ ಬೇಡಿಕೆಗಳನ್ನು ಕಡೆಗಣಿಸಲಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ನಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳಲು ಕಳೆದ 3 ತಿಂಗಳಿಂದ ಪ್ರಯತ್ನಿಸುತ್ತಿದ್ದರು ಅನುಮತಿ ನೀಡುತ್ತಿಲ್ಲ. ಸರ್ಕಾರ ಮತ್ತು ಅಧಿಕಾರಿಗಳು ನಮ್ಮ ಸಮಸ್ಯೆಗಳಿಗೆ ಪ್ರತಿಕ್ರಿಯಿಸುತ್ತಿಲ್ಲ ಎಂದು ತಿಳಿಸಿದರು.

ಅಧಿಕಾರಿಗಳಿಂದ ಮದ್ಯದಂಗಡಿ ಮಾಲೀಕರ ಮೇಲೆ ಆಗುತ್ತಿರುವ ಕಿರುಕುಳ ತಪ್ಪಿಸಬೇಕು. ನೂತನ ಸಿಎಲ್7 ಪರವಾನಿಗೆ ನಿಯಮಕ್ಕೆ ಕಡಿವಾಣ ಹಾಕಬೇಕು. ಈ ಕುರಿತು ರಾಜ್ಯದಾದ್ಯಂತ ಬಾರ್ ಮಾಲೀಕರ ಸಂಘಟನೆಗೆ ರಾಜ್ಯ ಪ್ರವಾಸ ಮಾಡುತ್ತೇವೆ. ಈ ಹಿನ್ನೆಲೆಯಲ್ಲಿ ಮೈಸೂರಲ್ಲಿ ಅ.25 ರಂದು ವಿಭಾಗೀಯ ಸಭೆ ನಡೆಯಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಸಂಘದ ಉಪಾಧ್ಯಕ್ಷರಾದ ಪರಮೇಶ್, ಭಾಸ್ಕರ್‌ಗೌಡ, ಕಾರ್ಯದರ್ಶಿ ಆರ್. ಲಕ್ಷ್ಮಣ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರಿನ ಪ್ರೇಕ್ಷಣೀಯ ಸ್ಥಳಗಳಿಗೆ ಪ್ಯಾಕೇಜ್ ಟೂರ್ ವ್ಯವಸ್ಥೆ

ಮೈಸೂರು,ಅ.4–ದಸರಾ ಮಹೋತ್ಸವ 2024 ರ ಅಂಗವಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವತಿಯಿಂದ ಅ.3 ರಿಂದ 15 ರವರೆಗೆ ಪ್ರವಾಸಿಗರ ಅನುಕೂಲಕ್ಕಾಗಿ ಮೈಸೂರಿನ ಸುತ್ತ-ಮುತ್ತಲಿನ ಪ್ರೇಕ್ಷಣೀಯ ಸ್ಥಳಗಳನ್ನು ವೀಕ್ಷಿಸಲು ಪ್ಯಾಕೇಜ್ ಟೂರ್‌ಗಳ ವ್ಯವಸ್ಥೆ ಮಾಡಲಾಗಿದೆ.

'ಗಿರಿ ದರ್ಶಿನಿ': ಪ್ಯಾಕೇಜ್ ಟೂರ್‌ನಲ್ಲಿ ಬಂಡೀಪುರ, ಗೋಪಾಲ ಸ್ವಾಮಿ ಬೆಟ್ಟ, ಬಿಳಿಗಿರಿರಂಗನ ಬೆಟ್ಟ, ನಂಜನಗೂಡು ಮತ್ತು ಚಾಮುಂಡಿ ಬೆಟ್ಟವನ್ನು ವೀಕ್ಷಿಸಬಹುದಾಗಿದ್ದು, ವಯಸ್ಕರಿಗೆ ರೂ.400, ಮಕ್ಕಳಿಗೆ ರೂ.250 ಪ್ರಯಾಣ ದರವಾಗಿರುತ್ತದೆ.

'ಜಲ ದರ್ಶಿನಿ': ಪ್ಯಾಕೇಜ್ ಟೂರ್‌ನಲ್ಲಿ ಗೋಲ್ಡನ್ ಟೆಂಪಲ್, ದುಬಾರೆ ಅರಣ್ಯ, ನಿಸರ್ಗಧಾಮ, ಅಬ್ಬಿಫಾಲ್ಸ್ ರಾಜಸೀಟ್, ಹಾರಂಗಿ ಜಲಾಶಯ ಹಾಗೂ ಕೆ.ಆರ್.ಎಸ್ ಅನ್ನು ವೀಕ್ಷಿಸಬಹುದು. ವಯಸ್ಕರಿಗೆ ರೂ.450 ಮತ್ತು ಮಕ್ಕಳಿಗೆ ರೂ.300 ಪ್ರಯಾಣ ದರ.

'ದೇವ ದರ್ಶಿನಿ': ಪ್ಯಾಕೇಜ್ ಟೂರ್‌ನಲ್ಲಿ ನಂಜನಗೂಡು, ತಲಕಾಡು, ಬ್ಲಫ್, ಮೂಡುಕುತೊರೆ, ಸೋಮನಾಥಪುರ, ಶ್ರೀರಂಗಪಟ್ಟಣ ಹಾಗೂ ಕೆ.ಆರ್.ಎಸ್ ಅನ್ನು ವೀಕ್ಷಿಸಬಹುದು. ವಯಸ್ಕರಿಗೆ ರೂ.300 ಮತ್ತು ಮಕ್ಕಳಿಗೆ ರೂ.200 ಪ್ರಯಾಣದರ.

ಪ್ಯಾಕೇಜ್ ಟೂರ್‌ಗಳಿಗೆ ಪ್ರವಾಸಿಗರು ನಿಗಮದ ಮೈಸೂರು ಕೇಂದ್ರೀಯ ಬಸ್ ನಿಲ್ದಾಣ ಮತ್ತು ಕೆ.ಎಸ್.ಆರ್.ಟಿ.ಸಿ ಖಾಸಗಿ ಅವತಾರ್ ಬುಕಿಂಗ್ ಕೌಂಟರ್ ಹಾಗೂ www.ksrtc.karnataka.gov.in ನ ಮೂಲಕ ಮುಂಗಡ ಆಸನವನ್ನು ಕಾಯ್ದಿರಿಸಬಹುದಾಗಿರುತ್ತದೆ ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವಿಭಾಗಿಯ ನಿಯಂತ್ರಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

05.10.2024 ಶನಿವಾರ, ಮಳೆ ನಕ್ಷತ್ರ: ಹಸ್ತ, 27.09.2024 ರಿಂದ 09.10.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಯುಜ ಮಾಸ, ಶುಕ್ಲ ಪಕ್ಷ,
ತಿಥಿ: ತದಿಗೆ, ನಕ್ಷತ್ರ: ಸ್ವಾತಿ, ರಾಹುಕಾಲ : ಬೆಳಗ್ಗೆ 9 ರಿಂದ 10.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಗುದಗತ ರೋಗಗಳಾದ ಪೈಲ್ಸ್, ಮೂಲವ್ಯಾಧಿ, ಫಿಸ್ತುಲಾ, ಭಗಂದರ, ನಾಡಿವ್ರಣ, ಫಿಶರ್ ತೊಂದರೆಗಳಿಗೆ ಉಚಿತ ತಪಾಸಣೆ ಮತ್ತು ಸಲಹಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿ ಪುರ ರಸ್ತೆ, ಬೆಳಗ್ಗೆ 9 ರಿಂದ.

■ **ಎನ್‌ಐಇ ಪ್ರಥಮ ದರ್ಜೆ ಕಾಲೇಜು:** ಕ್ಲೈಮೇಟ್ ಫ್ರೆಸ್ಕೋ ಕಾರ್ಯಾಗಾರ, ಸಂಪನ್ಮೂಲ ವ್ಯಕ್ತಿ: ಫೆಸಿಲಿಟೇಟರ್ ಮತ್ತು ಗ್ಲೋಬಲ್ ಪ್ರೊಸೆಸ್ ಎಂಜಿನಿಯರ್ ರಾಜೇಂದ್ರಕುಮಾರ್, ಅಧ್ಯಕ್ಷತೆ: ಎನ್‌ಐಇ ಪ್ರಿನ್ಸಿಪಾಲ್ ಡಾ.ಆರ್.ಗೋಪಾಲಕೃಷ್ಣೇ ಅರಸ್, ಸ್ಥಳ: ಎನ್‌ಐಇ ಗ್ರಂಥಾಲಯ ಆವರಣ, ಬೆಳಗ್ಗೆ 9.30 ರಿಂದ.

■ **ಪಿರಮಿಡ್ ಸ್ಪಿರಿಚ್ಯುಯಲ್ ಸೊಸೈಟಿ ಮೂವ್‌ಮೆಂಟ್, ಕಾವೇರಿ ಪಿರಮಿಡ್ ಧ್ಯಾನ ಕೇಂದ್ರ:** ಮೈಸೂರು ಧ್ಯಾನ ದಸರಾ ಕಾರ್ಯಕ್ರಮ, ಸಾಮೂಹಿಕ ಸಂಗೀತ ನಾದ ಧ್ಯಾನ, ದಸರಾ ಹಬ್ಬದ ಮಹತ್ವ, ಮುಖ್ಯ ಅತಿಥಿಗಳ ಸಂದೇಶ, ಸಾಂಸ್ಕೃತಿಕ ಕಾರ್ಯಕ್ರಮಗಳು, ಹಿರಿಯ ಪಿಎಸ್‌ಎಸ್‌ಎಂ ಮಾಸ್ಟರ್‌ಗಳ ಸಂದೇಶಗಳು, ಸ್ಥಳ: ಶ್ರೀ ಹೊಸಮಠದ ನಟರಾಜ ಪ್ರತಿಷ್ಠಾನ, ಬೆಳಗ್ಗೆ 8.30 ರಿಂದ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್, ಬೆಳಗ್ಗೆ 10ರಿಂದ ಸಂಜೆ 7 ರವರೆಗೆ.

■ **ಮೈಸೂರು ಸೈನ್ಸ್ ಫೌಂಡೇಷನ್, ಬಿಎಸ್‌ಎಸ್ ವಿದ್ಯೋದಯ :** ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ದೂರದರ್ಶಕ ತಯಾರಿಕೆ ಕಾರ್ಯಾಗಾರ ಕಾಸ್ಮೋಸ್–2024, ಸ್ಥಳ: ಬಿಎಸ್‌ಎಸ್ ವಿದ್ಯೋದಯ ಶಾಲೆ ಆವರಣ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10 ರಿಂದ.

■ **ಮೈಸೂರು ಮೃಗಾಲಯ:** 70ನೇ ವನ್ಯಜೀವಿ ಸಪ್ತಾಹ–2024ರ ಅಂಗವಾಗಿ ಮೈಸೂರು ಮೃಗಾಲಯದಲ್ಲಿ ಮನೆಯಲ್ಲಿ ಸುಸ್ಥಿರ ತೋಟಗಾರಿಕೆ ಹಾಗೂ ಕಾರಂಜಿ ಕೆರೆಯಲ್ಲಿ ಸಂಜೆ ಕಾಲ್ನಡಿಗೆ ಕಾರ್ಯಕ್ರಮ, ಸ್ಥಳ: ಮೃಗಾಲಯದ ಆವರಣ, ಬೆಳಗ್ಗೆ 10ಕ್ಕೆ.

■ **ಕೆ.ಎಸ್. ರಾಘವೇಂದ್ರ:** ಪೇಪರ್ ಪಲ್ಪ್ ಉಪಯೋಗಿಸಿ ಕೈಯಿಂದ ಮಾಡಿದ ಬೊಂಬೆಗಳ ಮೂಲಕ ದಶಾವತಾರ ಒಳಗೊಂಡ ಶ್ರೀ ಬಾಲಕೃಷ್ಣ ಲೀಲೆ ಪ್ರಸಂಗಗಳ ಪ್ರದರ್ಶನ, ಸ್ಥಳ: ಇಂಚರ ಕಲಾಕ್ಷೇತ್ರ, ವಿಜಯನಗರ 2ನೇ ಹಂತ, ಬೆಳಗ್ಗೆ 10 ರಿಂದ.

■ **ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ಫೋಟೋ ಜರ್ನಲಿಸ್ಟ್ ಅಸೋಸಿಯೇಷನ್ :** ದಸರಾ ಮಹೋತ್ಸವ–2024 ಅಂಗವಾಗಿ ಪತ್ರಿಕಾ ಛಾಯಾಗ್ರಾಹಕರ ಛಾಯಾಚಿತ್ರ ಪ್ರದರ್ಶನ, ಸ್ಥಳ: ಸುಚಿತ್ರ ಕಲಾ ಗ್ಯಾಲರಿ, ಕಲಾಮಂದಿರ, ಬೆಳಗ್ಗೆ 10 ರಿಂದ.

■ **ಸ್ವರ್ಣ ನೃಸಿಂಹ ದತ್ತಸಾಯಿ ಪೀಠಿಕ ಸೇವಾ ಟ್ರಸ್ಟ್ :** ಶರನ್ನವರಾತ್ರಿ ವೈಭವ–2024, ಬೆಳಗ್ಗೆ 10 ಗಂಟೆಗೆ ಸ್ವಯಂವರ ಪಾರ್ವತಿ ಹೋಮ, ಸ್ಥಳ: ಶ್ರೀ ವೇಂಕಟಾರ್ಜುನ ಧ್ಯಾನ ಮಂದಿರ, ಹಾರೋಹಳ್ಳಿ ಗ್ರಾಮ, ಸಂಜೆ 6 ಗಂಟೆಗೆ ಲಲಿತಾ ಸಹಸ್ರನಾಮ ಪಾರಾಯಣ, ಸಾಂಸ್ಕೃತಿಕ ಕಾರ್ಯಕ್ರಮ, ಶ್ರೀಸುಮುಖ್‌ರಿಂದ ಸಂಗೀತ, ಸ್ಥಳ: ಗುರುನಿವಾಸ, ಸೋನಾರ್ ಬೀದಿ, ನಾರಾಯಣಶಾಸ್ತ್ರಿ ರಸ್ತೆ.

■ **ಭವಾನಿ ಅಸೋಸಿಯೇಟ್ಸ್ :** ಜಿಎಸ್‌ಟಿಯಲ್ಲಿ ಇತ್ತೀಚಿನ ಬದಲಾವಣೆಗಳು, ಇನ್‌ವಾಯ್ಸ್ ಮ್ಯಾನೇಜ್‌ಮೆಂಟ್ ಸಿಸ್ಟಮ್ (ಐಎಂಎಸ್) ಮತ್ತು ರಿವರ್ಸ್ ಚಾರ್ಜ್ ಮೆಕ್ಯಾನಿಸಂ (ಆರ್‌ಸಿಎಂ) ಕುರಿತು ವಿಚಾರ ಸಂಕಿರಣ, ಪ್ರಾಸ್ತಾವಿಕ ಭಾಷಣ: ಚಾರ್ಟರ್ಡ್ ಅಕೌಂಟೆಂಟ್ ಬಿ.ಎಸ್.ರವಿಕುಮಾರ್, ವಕೀಲ ಮತ್ತು ಇಂಡೈರೆಕ್ಟ್ ಟ್ಯಾಕ್ಸ್ ಕನ್ಸಲ್ಟೆಂಟ್ ಬಿ.ಸಿ. ಭಟ್, ಸ್ಥಳ: ರೋಟರಿ ಚಿಲ್ಡ್ರನ್ಸ್ ಲೈಬ್ರರಿ–ಡಿ.ಜಿಲ ಹಾಲ್, ಬೆಳಗ್ಗೆ 10ಕ್ಕೆ

■ **ದಸರಾ ರಾಷ್ಟ್ರೀಯ ಸಮ್ಮೇಳನ ಉಪಸಮಿತಿ, ಜಿಲ್ಲಾಡಳಿತ, ಮೈಸೂರು ವಿಶ್ವವಿದ್ಯಾನಿಲಯ, ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ :** ಸಂವಿಧಾನ ಅಂಗೀಕಾರದ ಅಮೃತ ಮಹೋತ್ಸವದ ಅಂಗವಾಗಿ ಪ್ರಭುತ್ವ ಮತ್ತು ಸಂವಿಧಾನದ ಆಶಯ ಕುರಿತು ರಾಷ್ಟ್ರೀಯ ಸಮ್ಮೇಳನ, ಘನ ಉಪಸ್ಥಿತರು : ಮುಖ್ಯಮಂತ್ರಿ ಸಿದ್ದರಾಮಯ್ಯ, ಉದ್ಘಾಟನೆ : ಹಿರಿಯ ಪತ್ರಕರ್ತ ಮನೋಜ್ ಮಿತ್ತ, ಮುಖ್ಯ ಅತಿಥಿಗಳು : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಉನ್ನತ ಶಿಕ್ಷಣ ಪರಿಷತ್ ಉಪಾಧ್ಯಕ್ಷ ಪ್ರೊ. ಎಸ್.ಆರ್. ನಿರಂಜನ, ಉಪಸ್ಥಿತರು : ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ, ಪಶು ಸಂಗೋಪನಾ ಸಚಿವ ಕೆ. ವೆಂಕಟೇಶ್, ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸುನೀಲ್ ಬೋಸ್, ಶಾಸಕರಾದ ಜಿ.ಟಿ. ದೇವೇಗೌಡ, ಅನಿಲ್ ಚಿಕ್ಕಮಾದು, ತನ್ವೀರ್ ಸೇಠ್, ಎಚ್.ವಿಶ್ವನಾಥ್, ಮಧು ಜಿ. ಮಾದೇಗೌಡ, ದರ್ಶನ್ ಧ್ರುವನಾರಾಯಣ, ಜಿ.ಡಿ. ಹರೀಶ್‌ಗೌಡ, ಟಿ.ಎಸ್. ಶ್ರೀವತ್ಸ, ಡಾ. ಯತೀಂದ್ರ ಸಿದ್ದರಾಮಯ್ಯ, ಡಾ. ಡಿ. ತಿಮ್ಮಯ್ಯ, ಡಿ. ರವಿಶಂಕರ್, ಸಿ.ಎನ್. ಮಂಜೇಗೌಡ, ವಿವೇಕಾನಂದ, ಅಧ್ಯಕ್ಷತೆ : ಶಾಸಕ ಕೆ. ಹರೀಶ್‌ಗೌಡ, ಸ್ಥಳ: ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣ, ಸೆನೆಟ್ ಭವನ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಮೈಸೂರು ಆರ್ಟ್ ಗ್ಯಾಲರಿ:** ಸಾಧಕರೊಂದಿಗೆ ಸಂವಾದ–99–100, ತಿಂಗಳ ಸಾಧಕರು ಮಕ್ಕಳ ಮನೆಯ ಡಿ.ಕೆ.ಸೋಮಶೇಖರಮೂರ್ತಿ ಮತ್ತು ಸರಳಜೀವಿ ಸಂತೋಷ ಕೌಲಗಿ, ಮುಖ್ಯ ಅತಿಥಿಗಳು: ಅರಿವು ವಿದ್ಯಾಸಂಸ್ಥೆ ಕಾರ್ಯದರ್ಶಿ ಸಿ.ಎಸ್.ಜನಾರ್ಧನ್, ಅಧ್ಯಕ್ಷತೆ: ಮೈಸೂರು ಆರ್ಟ್ ಗ್ಯಾಲರಿ ಸ್ಥಾಪಕ ಅಧ್ಯಕ್ಷ ಎಲ್. ಶಿವಲಿಂಗಪ್ಪ, ವಿಶೇಷ ಆಹ್ವಾನಿತರು: ಎಂ.ಬಿ.ಜಯಮಹದೇವ ಪ್ರಸಾದ್, ಎಸ್.ಮೀನಾ, ಎಂ.ಎಸ್. ಸೋಮಶೇಖರ್ ಮಂದಗೆರೆ, ಟಿ.ಆರ್. ರವೀಶ್, ಸ್ಥಳ: ಮೈಸೂರು ಆರ್ಟ್ ಗ್ಯಾಲರಿ, ಬೆಳಗ್ಗೆ 11ಕ್ಕೆ.

■ **ಚಿನ್ಮಯ ಮಿಷನ್ :** ಶರನ್ನವರಾತ್ರಿ ಕಾರ್ಯಕ್ರಮ, ಪ್ರತಿದಿನ ಬೆಳಗ್ಗೆ 11.30 ರಿಂದ ಸ್ವಾಮಿನಿ ಕಾಶಿಕನಂದ ಅವರಿಂದ ಲಲಿತ ಸಹಸ್ರನಾಮದಲ್ಲಿ ಬರುವ ದೇವಿಯ ಕೆಲವು ನಾಮಾವಳಿಗಳು ಕುರಿತು ವಿಶೇಷ ಪ್ರವಚನ, ಸ್ಥಳ: ಚಿನ್ಮಯ ಮಿಷನ್, ಶ್ರೀ ಧತ್ತ ಸನ್ನಿಧಿ, ಗೋಕುಲಂ 3ನೇ ಹಂತ.

■ **ಕಲಾಸುರುಚಿ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ – 848, ಕಥೆ ಹೇಳುವವರು: ನಾಗರಾಜ್ ಬೀಜಗನಹಳ್ಳಿ, ರಾಜ್ಯಶಾಸ್ತ್ರ ಉಪನ್ಯಾಸಕರು ಹಾಗೂ ಸ್ಫೂರ್ತಿದಾಯಕ ಭಾಷಣಕಾರರು, ಸರ್ಕಾರಿ ಪ.ಪೂ. ಕಾಲೇಜು, ಸಾಲಿಗ್ರಾಮ, ಸ್ಥಳ: ಸುರುಚಿ ರಂಗಮನೆ, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ

■ **ಚಂಪಕ ಎಜುಕೇಶನಲ್ ಅಂಡ್ ಕಲ್ಚರಲ್ ಟ್ರಸ್ಟ್ :** ಚಂಪಕ ರಾಷ್ಟ್ರೀಯ ಕಲಾ ಉತ್ಸವ ಶೀರ್ಷಿಕೆಯಡಿ ಮಾಸಿಕ ಕಾರ್ಯಕ್ರಮ, ಚಂಪಕ ಅಕಾಡೆಮಿಯ ಸಂಸ್ಥಾಪಕರಾದ ವಿದುಷಿ ಡಾ। ನಾಗಲಕ್ಷ್ಮಿ ನಾಗರಾಜನ್ ಅವರು "ವಚನ ಸೌರಭ" ವಚನ ಸಾಹಿತ್ಯವನ್ನು ಆಧರಿಸಿದ ಭರತನಾಟ್ಯ ಪ್ರದರ್ಶನ; ನರ್ತನ ಕೀರ್ತನ ಪ್ರದರ್ಶಕ ಕಲೆಗಳ ಕೇಂದ್ರದ ನಿರ್ದೇಶಕರಾದ ವಿದುಷಿ ಡಾ.ಸೌಂದರ್ಯ ಶ್ರೀವತ್ಸ ಅವರ ಶಿಷ್ಯಂದರಿಂದ ಭರತನಾಟ್ಯ ಕಾರ್ಯಕ್ರಮ; ಬೆಂಗಳೂರಿನ ಸಾಧನಾ ನೃತ್ಯ ಕೇಂದ್ರದ ಕಲಾ ನಿರ್ದೇಶಕರಾದ ಶ್ರೀಮತಿ ಭಾವನ ಮತ್ತು ಶಿಷ್ಯಂದಿರಿಂದ ಭರತನಾಟ್ಯ ಕಾರ್ಯಕ್ರಮ, ಮುಖ್ಯ ಅತಿಥಿಗಳು: ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಮ.ಗು.ಸದಾನಂದಯ್ಯ, ಸ್ಥಳ: ಚಂಪಕ ಅಕಾಡೆಮಿ ಸಭಾಂಗಣ, ರಾಮಕೃಷ್ಣನಗರ, ಸಂಜೆ 4.30ಕ್ಕೆ

■ **ಶೃಂಗೇರಿ ಶ್ರೀ ಶಂಕರ ಮಠ, ಅಭಿನವ ಶಂಕರಾಲಯ :** ಶ್ರೀ ಶಾರದಾಶರನ್ನವರಾತ್ರೋತ್ಸವ–2024, ಮಹಾಪೂಜೆ, ವಿವಿಧ ಹೋಮಗಳು, ಪುರಾಣೋಕ್ತ, ಶ್ರೀ ಕೌಮಾರಿ (ಮಯೂರವಾಹಿನಿ), ರುದ್ರೈಕಾದಶಿನೀ ಹೋಮ, ಸ್ಥಳ: ಶೃಂಗೇರಿ ಶ್ರೀ ಶಂಕರ ಮಠ, ಅಭಿನವ ಶಂಕರಾಲಯ, ಫೋರ್ಟ್ ಮೊಹಲ್ಲಾ.

■ **ರಂಗಾಯಣ :** ದಸರಾ ಮಹೋತ್ಸವದ ಅಂಗವಾಗಿ ನವರಾತ್ರಿ ಜನಪದ ರಂಗ ಉತ್ಸವ, ಶ್ರೀ ರಾಜಾರಾಮ ತೊಗಲುಗೊಂಬೆ ಮೇಳ, ಹೂವಿನಹಳ್ಳಿ ಕಾವಲು, ಹಾಸನ ಜಿಲ್ಲೆ ಅವರಿಂದ ಮಾಯಾವಿ ಇಂದ್ರಜಿತ್ ನಾಟಕ ಪ್ರದರ್ಶನ, ಸ್ಥಳ: ರಂಗಾಯಣದ ವನರಂಗ, ಸಂಜೆ 6.30ಕ್ಕೆ.

■ **ಶ್ರೀ ಶ್ರೀ ಸುಬ್ಬರಾಯದಾಸರ ಪ್ರಸನ್ನ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನ :** ನವರಾತ್ರಿ ಬ್ರಹ್ಮೋತ್ಸವ, ಬೆಳಗ್ಗೆ 8 ಗಂಟೆಗೆ ಉತ್ಸವ, ಕಂಕಣ ಬಂಧನ ಸಾಯಂಕಾಲ ಅಂಕುರಾರ್ಪಣ ಉತ್ಸವ, ಸ್ಥಳ: ದೇವಸ್ಥಾನ, ದೇವರಾಜ ಮೊಹಲ್ಲಾ.

■ **ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನಂ ಚಾರಿಟಬಲ್ ಟ್ರಸ್ಟ್ :** ಶರನ್ನವರಾತ್ರಿ ಉತ್ಸವ, ಬೆಳಗ್ಗೆ 9 ಗಂಟೆಗೆ ಶ್ರೀ ಗಾಯತ್ರಿ ಹೋಮ, ಚಂದ್ರಘಂಟ ಅಲಂಕಾರ, ಸ್ಥಳ: ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನ.

■ **ಶ್ರೀ ಉತ್ತರಾದಿ ಮಠ, ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ:** ಶರನ್ನವರಾತ್ರಿ ಪ್ರಯುಕ್ತ ಪಂಡಿತ್ ಶ್ರೀ ಪ್ರಭಂಜನಾಚಾರ್ಯ ವಿದ್ಯಾಪತಿ ಅವರಿಂದ ಶ್ರೀನಿವಾಸ ಕಲ್ಯಾಣ ಪ್ರವಚನ, ಸ್ಥಳ: ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ, ಶ್ರೀ ಉತ್ತರಾದಿ ಮಠ, ಸಂಜೆ 5.30 ರಿಂದ.

■ **ಶ್ರೀ ಮುಕ್ಕಣ್ಣೇಶ್ವರ ಸ್ವಾಮಿ ದೇವಸ್ಥಾನ :** ನವರಾತ್ರಿ ಪೂಜಾ ಕಾರ್ಯಕ್ರಮ, ಸಂಜೆ 5.30ಕ್ಕೆ ಭಜನೆ, ಸಂಜೆ 7.30 ರಿಂದ ಶ್ರೀ ರವಿಕಾಂತಾನಂದ ಸ್ವಾಮಿಯವರಿಂದ ಪ್ರವಚನ, ಸ್ಥಳ: ಶ್ರೀ ಮುಕ್ಕಣ್ಣೇಶ್ವರ ಸ್ವಾಮಿ ದೇವಸ್ಥಾನ, ಅಶೋಕ ರಸ್ತೆ.

■ **ಕಲಾಂದಿಕಾ ಕಲಾ ಅಕಾಡೆಮಿ:** ವಿದುಷಿ ವಿನಯ ನಾರಾಯಣನ್ ಮತ್ತು ವಿದುಷಿ ಲಕ್ಷ್ಮಿ ಗಿರೀಶ್ ಅವರಿಂದ ಮೋಹಿನಿಯಾಟ್ಟಂ, ಮುಖ್ಯ ಅತಿಥಿಗಳು: ಮಾಜಿ ಎಂಎಲ್‌ಸಿ ಡಿ.ಮಾದೇಗೌಡ, ಗೌರವ ಅತಿಥಿಗಳು: ಕರ್ನಾಟಕ ಕಲಾಶ್ರೀ ಡಾ.ಶೀಲಾ ಶ್ರೀಧರ್, ಸ್ಥಳ: ಕಲಾನಿಧಿಕಾ ಕಲಾ ಅಕಾಡೆಮಿ, ಸರಸ್ವತಿಪುರಂ, ಸಂಜೆ 6ಕ್ಕೆ.

■ **ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್:** 28ನೇ ವರ್ಷದ ಶರನ್ನವರಾತ್ರಿ ಮಹೋತ್ಸವ, ಬೆಳಗ್ಗೆ 8.30ಕ್ಕೆ ಮಹಾಭಿಷೇಕ, ಶ್ರೀ ಚಂದ್ರಘಂಟಾ, ಶ್ರೀಜಾತವೇದ ದುರ್ಗಾ ಪೂಜಾ, ಸಪ್ತಶತಿ ಪಾರಾಯಣ, ಲಲಿತೋಪಾಖ್ಯಾನ ಪಾರಾಯಣ, ಶ್ರೀಚಕ್ರಾರ್ಚನೆ, ಸಂಜೆ 5.30ಕ್ಕೆ ಶ್ರೀ ಮಹಾವಿಷ್ಣು ದಶಾವತಾರಹೋಮ, ಮಹಾ ಧನ್ವಂತರಿ ಹೋಮ, ಸ್ಥಳ: ತ್ರಯೀನ್ಯಾಸ್, ಜಯಲಕ್ಷ್ಮಿಪುರಂ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ದಸರಾ ಗೀತಾರಾಧನ, 6.30 ದಸರಾದಲ್ಲಿ ಇಂದು– ಪ್ರಸ್ತುತಿ : ಜಾಂಪಣ್ಣ ಆಶೀಹಾಳ್, 6.35 ಮತ್ತು ಸಂಜೆ 6.10 CFTRI ಶೋಧ – ಅನುಶೋಧ, ಪ್ರಾಯೋಜಿತ ಬಾನುಲಿ ಸರಣಿ, ಪ್ರಾಯೋಜಕರು : CSIR, CFTRI, Mysuru, 6.40 ಅರಿವಿನ ಶಿಖರ : ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಹಂಸಿನಿ. ಎಸ್. ಕುಮಾರ್, ವ್ಯಾಖ್ಯಾನ–ಡಾ. ಹೆಚ್.ಎನ್. ಮಂಜುರಾಜ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಹಾದಿಯಲ್ಲಿ ಕಂಡ ಮುಖ–ಬಾನುಲಿ ಸರಣಿ, ಪ್ರಸ್ತುತಿ: ಅಬ್ದುಲ್ ರಶೀದ್, 9.05 ಚಾಮುಂಡಿ ಹಬ್ಬ–ದಸರಾ ಸಂಭ್ರಮ, ಜನಪದರ ನಾಲಿಗೆಯಲ್ಲಿ ಮೈಸೂರು ದೇವತೆ, ರಚನೆ: ಡಾ. ಪಿ.ಕೆ. ರಾಜಶೇಖರ್, ಪ್ರಸ್ತುತಿ: ಡಾ. ಮೈಸೂರು ಉಮೇಶ್, 9.35 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ– ದಸರಾ ಪ್ರಯುಕ್ತ ಮುತ್ತುಸ್ವಾಮಿ ದೀಕ್ಷಿತರ ನವಾವರಣ ಕೃತಿಗಳನ್ನೊಳಗೊಂಡ ವಿಶೇಷ ಸಂಗೀತ ಸರಣಿ–ನಮೋ ಜಗತ್ತಾರಿಣಿ, ನಿರ್ಮಾಣ–ಮೈಸೂರು. ಎಸ್.ರಾಜಲಕ್ಷ್ಮೀ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ 'ನಮ್ಮೂರ್ ಹೆಸರು', ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.30 ಆಯುಷ್‌ವಾಣಿ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ಆಯುಷ್ ಇಲಾಖೆ, ಕರ್ನಾಟಕ ಸರ್ಕಾರ, 12.35 ದೇವರನಾಮ–ವೀಣಾ. ಎನ್. ಮೂರ್ತಿ, 12.45 ಜನಪದ ಸಂಗೀತ, 1.20 ಭಾವಗೀತೆಗಳು–ವಿಶ್ವನಾಥ್. ಸಿ, 2.40 ಏಳುತಲೆ ನೆನೆದೇವು – ದಸರಾ ಸಂದರ್ಭದಲ್ಲಿ ಜನಪದ ಶಕ್ತಿ ದೇವತೆಯನ್ನು ಕುರಿತ ವಿಶೇಷ ರೂಪಕ ಮಾಲಿಕೆ, ಪ್ರಸ್ತುತಿ : ಡಾ. ಮೈಸೂರು ಉಮೇಶ್, 3.00 ಹಳ್ಳಿ ಹಾಡು, 3.30 ಮಕ್ಕಳ ಮಂಟಪ: ಮೈಸೂರಿನ ಸಿದ್ಧಾರ್ಥ ಲೇಔಟ್‌ನಲ್ಲಿರುವ ಶಾಂತಲಾ ವಿದ್ಯಾಪೀಠ ಶಾಲೆಯ ಮಕ್ಕಳಿಂದ ದಸರಾ ಕುರಿತ ಕಾರ್ಯಕ್ರಮ, 4.00 ನಾಟಕ, 4.30 ನೆನಪಿನಂಗಳ (ಧ್ವನಿ ಭಂಡಾರದಿಂದ), 6.50 ಕೃಷಿರಂಗ: ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ಸಮಗ್ರ ಕೃಷಿಯ ಪ್ರಾಮುಖ್ಯತೆ ಕುರಿತು ಸಂವಾದ. ಭಾಗವಹಿಸುತ್ತಾರೆ: ಶ್ರೀರಂಗಪಟ್ಟಣ ತಾಲೂಕು ಪಾಲಹಳ್ಳಿಯ ಕೃಷಿಕ ದಂಪತಿ ಪಿ.ಎನ್. ರಮೇಶ್ ಹಾಗೂ ಶಾಂತಮ್ಮ. ಪ್ರಸ್ತುತಿ: ಎನ್.ಕೇಶವಮೂರ್ತಿ, 8.00 ಯುವವಾಣಿ, 8.30 ಅರಮನೆ ಸಂಗೀತ ವೈಭವ–ಸಂಗೀತ ರೂಪಕ, 9.30 ಸವಿನೆನಪು–ಹಳೆಯ ಕನ್ನಡ ಚಿತಗೀತೆಗಳು, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ: ಪಂ.ಪ್ರಶಾಂತ್ ಮಲ್ಲಿಕ್ ಮತ್ತು ಪಂ.ನಿಶಾಂತ್ ಮಲ್ಲಿಕ್–ದ್ರುಪದ್ ಧಮರ್

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 5 ಶನಿವಾರ 2024

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871


ಸಂಪುಟ: 45 | ಸಂಚಿಕೆ: 170 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

SHOE WORLD
ESTD. 1998
Best Brands at Your Feet...
RAMASWAMY CIRCLE, MYSURU. PH: 2424252


COUNT DOWN
7 DAYS TO DASARA

DGF JEWELLERS
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಹಣಕೊಟ್ಟು ಬಿಡಿಸಿ, ಗುಣಮಟ್ಟವನ್ನು ಪರೀಕ್ಷಿಸಿ ಅದರ ಆಧಾರದ ಮೇಲೆ ಉಳಿದ ಹಣ ತಕ್ಷಣ ಕೊಡುತ್ತೇವೆ.
(Terms & Condition Applicable)
ಒಂದು ಗ್ರಾಂ ಚಿನ್ನಕ್ಕೆ 7700
8884171888










MUDA APPROVED
Festival Offers
₹20 Lakhs Only
(20 x 30 Site)
HERITAGE CITY
Uttanahalli, Mysuru
PRM/KA/RERA/1268/PR/160124/006555
READY FOR REGISTRATION
Available Plots 20x30 & 30x40
9964697567
7259788295

SITE FOR SALE
Muda approved #249,
ಪಶ್ಚಿಮ ಮುಖ, ವಿಶ್ವಪ್ರಜ್ಞ ಬಡಾವಣೆ,
#1031, ಉತ್ತರ ಮುಖ,
ಸುವರ್ಣನಗರ, ಮರಟಿಕ್ಯಾತನಹಳ್ಳಿ,
ರೂ.35 ಲಕ್ಷ. ಸಂಪರ್ಕಿಸಿ
8880787811

SITE FOR SALE
30X55.37
(1661 Sft)
East Facing Pragathi Dreams Layout, Near Paper Mill Circle Near KBL Silicon City
62 Lakhs, Near Infosys, L&T
Call: Direct Owner
9686778885

NAMMANE
Constructions Pvt. Ltd
SITES FOR SALE
At Prime Locations in Mysore
20X30, 30X40, 30X50
Newly Built House For Sale
At Prime Locations In Mysore
30X40, 40X60
CONSTRUCTIONS | INTERIORS
9019923183
8095996669



NOT GETTING YOUR
STAR OF MYSORE & ಮೈಸೂರು ಮಿತ್ರ
Call: 98452-96447 / 99003-82840





RERA No.: PRM/KA/RERA/1268/378/PR/190723/006077



ನಕ್ಕರೆ ಅದೇ ಸ್ವರ್ಗ

ಅಪ್ಪ : ರಿಸಲ್ಟ್ ಏನೋ ಇದು ಕೇವಲ 40 ಪರ್ಸೆಂಟ್ ಬಂದಿದೆ.
ಮಗ : ಇಲ್ಲಪ್ಪಾ ಶೇ.80ರಷ್ಟು ಬಂದಿದೆ, 40 ಮಾತ್ರ ಕಾಣಿಸ್ತಾ ಇದೆ.
ಅಪ್ಪ : ಉಳಿದ 40 ಪರ್ಸೆಂಟ್ ಎಲ್ಲಿ ಹೋಯಿತು?
ಮಗ : ಆಧಾರ್ ಕಾರ್ಡ್ ಲಿಂಕ್ ಮಾಡಿದ ಬ್ಯಾಂಕ್ ಖಾತೆಗೆ ಜಮಾ ಮಾಡ್ತಿನಿ ಅಂತ ಹೇಳಿದ್ದಾರೆ.

ಮೈಸೂರು ಮಿತ್ರ

ಶನಿವಾರ, 5 ಅಕ್ಟೋಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಕಾಲ ಎಂದಿಗೂ ಹಿಂದೆ ತಿರುಗುವುದಿಲ್ಲ. ಆದರೆ ಅದರ ದುರುಪಯೋಗ ಮಾಡಿಕೊಂಡವರನ್ನು ಹಿಂದೆ ತಿರುಗಿ ನೋಡುವಂತೆ ಮಾಡುತ್ತದೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಡಿಕೆಕಾಯಿಯನ್ನು ಚೀಲದೊಳಗೆ ಹಾಕಬಹುದು, ಮರ ಆದ ನಂತರ ಹಾಕಬಹುದೇ?

ನಿಮ್ಮ ಪತ್ರಗಳು

■ ಪಾದಚಾರಿಗಳು, ವಾಹನ ಓಡಾಡುವಲ್ಲಿ ಆನೆ, ಕಮಲದ ಚಿತ್ರವನ್ನು ಅಳಿಸಿ

ಮಾನ್ಯರೆ,

ನಾಡಹಬ್ಬ ದಸರಾ ಸಂದರ್ಭ ಮೈಸೂರು ನಗರ ಸಂಭ್ರಮದಿಂದ ಸಿಂಗಾರಗೊಂಡು ಕಂಗೊಳಿಸುತ್ತಿದೆ. ಬಣ್ಣ ಬಣ್ಣದ ದೀಪಗಳು ಜನರನ್ನು ಸೆಳೆಯುತ್ತಿವೆ. ಆದರೆ ನಗರದ



ಹೃದಯಭಾಗದಲ್ಲಿ, ಜಂಬೂ ಸವಾರಿ ಸಾಗುವ ಮಾರ್ಗವಾದ ಆಲ್ಬರ್ಟ್ ವಿಕ್ಟರ್ ರಸ್ತೆಯಲ್ಲಿ ಆನೆ ಹಾಗೂ ರಾಷ್ಟ್ರೀಯ ಹೂವು ಕಮಲದ ಚಿತ್ರಗಳನ್ನು ಬಿಡಿಸಲಾಗಿದೆ. ಈ ಚಿತ್ರದ ಮೇಲೆ ದಿನನಿತ್ಯ ಸಾವಿರಾರು ವಾಹನಗಳು ಮತ್ತು ಪಾದಚಾರಿಗಳು ಗೊತ್ತಿದ್ದೋ ಗೊತ್ತಿಲ್ಲದೆಯೋ, ಆದರೆ ಅನಿವಾರ್ಯವಾಗಿ ಹಿಂದೂಗಳು ಹಾಗೂ ಬೌದ್ಧರು ದೇವರೆಂದು ಪೂಜಿಸುವ ಆನೆ ಹಾಗೂ ರಾಷ್ಟ್ರೀಯ ಹೂವು ಕಮಲದ ಚಿತ್ರಗಳನ್ನು ತುಳಿದು ಕೊಂಡು ಓಡಾಡುತ್ತಿದ್ದಾರೆ. ಇದರಿಂದ ಧಾರ್ಮಿಕ ಭಾವನೆಗೆ ಧಕ್ಕೆಯುಂಟಾಗು ವುದರ ಜೊತೆಗೆ ರಾಷ್ಟ್ರೀಯ ಹೂವಿಗೂ ಅಪಚಾರವಾಗುತ್ತಿದೆ.

ಕಮಲ, ಬಿಜೆಪಿಯ ಚಿಹ್ನೆ ಸಹ ಆಗಿದೆ. ಹಗರಣಗಳಿಂದ ಹೆಸರು ಕೆಡಿಸಿಕೊಂಡಿರುವ ರಾಜ್ಯದ ಆಡಳಿತ ಪಕ್ಷ ಕಾಂಗ್ರೆಸ್ ವಿರೋಧ ಪಕ್ಷದ ಮೇಲೆ ಹಾಗೂ ಬಹುಸಂಖ್ಯಾತ ಹಿಂದೂಗಳ ಮೇಲೆ ಈ ರೀತಿ ಕೋಪ ತೋರಿಸಿಕೊಳ್ಳುತ್ತಿದೆಯಾ ಎಂಬ ಅನುಮಾನ ಜನ ಸಾಮಾನ್ಯರನ್ನು ಕಾಡುತ್ತಿದೆ. ದಯಮಾಡಿ, ಜಿಲ್ಲಾಡಳಿತ ಈ ಕೂಡಲೇ ಈ ಅಪಚಾರವನ್ನು ತಡೆದು, ರಸ್ತೆಗಳಲ್ಲಿ ಜನರ ಭಾವನೆಗೆ ಚ್ಯುತಿಉಂಟು ಮಾಡುವ ಚಿತ್ರಗಳನ್ನು ಬರೆಸುವುದು ನಿಲ್ಲಿಸಬೇಕು ಎಂದು ಆಗ್ರಹಿಸುತ್ತೇವೆ.

– ರಾಕೇಶ್ ಭಟ್, ಕಾರ್ಯದರ್ಶಿ, ಮೈಸೂರು ರಕ್ಷಣಾ ವೇದಿಕೆ(ರಿ), ಮೈಸೂರು

■ ಸಾಂಸ್ಕೃತಿಕ ವೇದಿಕೆಯನ್ನು ರಾಜಕಾರಣಿಗಳು ಸ್ವಂತಕ್ಕೆ ಬಳಸಿ ಕೊಳ್ಳುವುದು ಸರಿಯೇ?

ಮಾನ್ಯರೆ,

ವಿಶ್ವದ ಮೂಲೆ ಮೂಲೆಗಳ ಜನತೆ ಮೈಸೂರಿನ ದಸರಾ ವೀಕ್ಷಣೆಗೆ ಇಲ್ಲಿನ ಸಂಸ್ಕೃತಿಯನ್ನು ಸವಿಯಲು ಆಗಮಿಸುವ ಹೊತ್ತಿನಲ್ಲಿಯೇ ರಾಜ್ಯ ರಾಜಕಾರಣದಲ್ಲಿ ಮುಡಾ ಪ್ರಕರಣ ಸಂಚಲನವನ್ನೇ ಸೃಷ್ಟಿಸಿದೆ. ನಾಡಿನ, ಸಂಸ್ಕೃತಿ, ಕಲೆ, ಗತವೈಭವ ಮರುಕಳಿಸುವ ದಸರಾ ಉದ್ಘಾಟನಾ ಸಮಾರಂಭದ ವೇದಿಕೆಯಲ್ಲಿ ದಸರಾದ ಬಗ್ಗೆ ಮಾತನ್ನಾಡುವ ಬದಲಿಗೆ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಮುಡಾ ಪ್ರಕರಣ ತನಿಖೆಯ ಹಂತದಲ್ಲಿರುವಾಗ ವೇದಿಕೆಯನ್ನು ರಾಜಕೀಯಕ್ಕೋಸ್ಕರ ಬಳಸಿಕೊಂಡಿದ್ದು ಎಷ್ಟು ಸರಿ?

ರಾಜಕೀಯ ಚಟುವಟಿಕೆಗಳ ಸಭೆ, ಸಮಾರಂಭಗಳಲ್ಲಿ ಈ ರೀತಿಯ ಮಾತುಗಳನ್ನಾಡಿದರೆ ಅದಕ್ಕೆ ಯಾರೊಬ್ಬರ ತಗಾದೆ ಇರುವುದಿಲ್ಲ. ಆದರೆ, ಸಾಂಸ್ಕೃತಿಕ ಕಾರ್ಯಕ್ರಮಗಳ ವೇದಿಕೆಗಳನ್ನು ರಾಜಕಾರಣಿಗಳು ತಮ್ಮ ಸ್ವಂತಕ್ಕೆ ಬಳಸಿಕೊಳ್ಳುವುದು ಎಷ್ಟರ ಮಟ್ಟಿಗೆ ಸರಿ? ಇನ್ನಾದರೂ ಮುಂದಿನ ದಿನಗಳಲ್ಲಿ ಯಾವ ವೇದಿಕೆಯಲ್ಲಿ ಯಾವ ಮಾತುಗಳನ್ನಾಡಬೇಕು ಎಂಬುದನ್ನು ಅರಿತುಕೊಳ್ಳಲಿ.

– ಶಿವಕುಮಾರ, ತುಂಬಸೋಗೆ ಗ್ರಾಮ, ಹೆಚ್.ಡಿ.ಕೋಟೆ ತಾಲೂಕು

■ ಕಳಪೆಯಾದ ದಸರಾ ಯುವ ಸಂಭ್ರಮ

ಮಾನ್ಯರೆ,

ಈ ವರ್ಷ ಮೈಸೂರಿನ ಮಾನಸಗಂಗೋತ್ರಿ ಬಯಲು ರಂಗಮಂದಿರದಲ್ಲಿ ನಡೆದ ದಸರಾ ಯುವ ಸಂಭ್ರಮ ಕಾರ್ಯಕ್ರಮ ಬಹಳ ಕಳಪೆಯಾಗಿತ್ತು. ನೃತ್ಯ ತಂಡಗಳ ಆಯ್ಕೆಗೆ ಯಾವುದೇ ಮಾನದಂಡಗಳಿಲ್ಲದ ಕಾರಣ, ಅದೇ ರಾಗ ಅದೇ ಹಾಡು ಎಂಬಂತೆ ವಿದ್ಯಾರ್ಥಿ ಕಲಾವಿದರು ಬೇಕಾಬಿಟ್ಟಿ ಬಂದು ಕುಣಿದು ಹೋದರಷ್ಟೆ, ಈ ಬಾರಿ ತಂಡಗಳ ಸಂಖ್ಯೆ ಹೆಚ್ಚಿದ್ದ ಕಾರಣ, ಪೂರ್ಣ ಪ್ರಮಾಣದಲ್ಲಿ ನೃತ್ಯ ಮಾಡಲು ಅವಕಾಶ ಕೊಡದೆ, ಆಯೋಜಕರು ತಮ್ಮ ಮನಸ್ಸೋ ಇಚ್ಛೆ ಹಾಡಿನ ಮಧ್ಯದಲ್ಲಿ ಕತ್ತರಿ ಹಾಕಿ ಮನೆಗೆ ಕಳುಹಿಸುತ್ತಿದ್ದರು. ತಮಗೆ ಬೇಕಾದವರಿಗೆ ಹೆಚ್ಚಿನ ಸಮಯ ಕೊಡುತ್ತಿದ್ದರು. ಕೆಲವು ನೃತ್ಯಗಳಲ್ಲಿ ಕೆಲವು ಕಲಾವಿದರಿಗೆ ನೃತ್ಯದ ಕೊನೆಯ ಘಟ್ಟದಲ್ಲಿ ವೇದಿಕೆಯ ಮೇಲೆ ಪ್ರವೇಶಿಸಿ ಪ್ರದರ್ಶನ ನೀಡುವ ಪಾತ್ರವಿರುತ್ತದೆ. ಆದರೆ ನೃತ್ಯಗಳ ಮಧ್ಯದಲ್ಲೇ ಕತ್ತರಿ ಹಾಕಿದ್ದರಿಂದ, ಅನೇಕ ವಿದ್ಯಾರ್ಥಿಗಳಿಗೆ ವೇದಿಕೆಯ ಮೇಲೆ ಬರಲು ಅವಕಾಶ ಸಿಗದೆ ಅಳುತ್ತ ಹೋದದ್ದು ಕಂಡು ಬಂತು.

ಒಂದು ಶಿಕ್ಷಣ ಸಂಸ್ಥೆಗೆ ಒಂದು ನೃತ್ಯಕ್ಕೆ ಮಾತ್ರ ಅವಕಾಶ ನೀಡಬೇಕು. ಆದರೆ ಕಾರ್ಯಕ್ರಮ ಸಂಘಟಕರು ತಮಗೆ ಬೇಕಾದ ಶಿಕ್ಷಣ ಸಂಸ್ಥೆಗಳಿಗೆ ಒಂದಕ್ಕಿಂತ ಹೆಚ್ಚು ಅವಕಾಶಗಳನ್ನು ನೀಡಿ ತಮ್ಮ 'ಕೈವಾಡ'ವನ್ನು ಮೆರೆದಿದ್ದಾರೆ! ಯುವ ಸಂಭ್ರಮ ಕಾರ್ಯಕ್ರಮದ ಸಮಿತಿಯ ಸದಸ್ಯರಲ್ಲಿ ಕೆಲವರು ಪ್ರತಿ ವರ್ಷ ಅವರೇ ಪುನರಾವರ್ತನೆಯಾಗುತ್ತಿದ್ದು, ಅವರು ಆಡಿದ್ದೇ ಆಟ ಎಂಬಂತಾಗಿದೆ! ತಂಡಗಳನ್ನು ಕ್ರಮ ಸಂಖ್ಯೆಯ ಅನುಸಾರ ಪ್ರದರ್ಶನಕ್ಕೆ ಕರೆಯದೆ, ತಮಗೆ ಬೇಕಾದವರಿಗೆ ಬೇಗ ಅವಕಾಶ ಕಲ್ಪಿಸಿ ಕೊಟ್ಟು, ದೂರದ ಊರಿನಿಂದ ಬಂದ ಕಲಾವಿದರನ್ನು ಹಲವು ಗಂಟೆಗಳ ಕಾಲ ಕಾಯುವಂತೆ ಮಾಡಿ ತಮ್ಮ ಪಕ್ಷಪಾತ ಧೋರಣೆಯನ್ನು ಪ್ರದರ್ಶಿಸಿದ್ದಾರೆ. ಹೊರಗಿನ ಜಿಲ್ಲೆಯ ಕಲಾವಿದರು ರಾತ್ರಿ 12 ಗಂಟೆಗಳವರೆಗೂ ಕಾಯುವಂತಾಯಿತು. ಉತ್ತಮ ನೃತ್ಯಕ್ಕೆ ಹೆಚ್ಚಿನ ಸಮಯಾವಕಾಶ ನೀಡದೆ ಅನ್ಯಾಯವೆಸಗಿದ್ದಾರೆ. ಇನ್ನೂ ಉತ್ತಮ ತಂಡಗಳನ್ನು ಯಾವ ಮಾನದಂಡದ ಮೇಲೆ ಆಯ್ಕೆ ಮಾಡುತ್ತಾರೋ ತಿಳಿದಿಲ್ಲ!

ಸಂಬಂಧಪಟ್ಟವರು ಇತ್ತ ಗಮನ ಹರಿಸಿ ಮುಂದಿನ ದಿನಗಳಲ್ಲಿ ಇಂತಹ ತಪ್ಪುಗಳು ಪುನರಾವರ್ತನೆಯಾಗದಂತೆ ನೋಡಿಕೊಳ್ಳಬೇಕಿದೆ. ಯುವ ಸಂಭ್ರಮ ಸಮಿತಿಯಲ್ಲಿರುವ ಹಳೆಯ ಕಳೆಗಳನ್ನು ತೆಗೆದು ಹಾಕಿ ಹೊಸಬರಿಗೆ ಅವಕಾಶ ಕಲ್ಪಿಸಿಕೊಡುವಂತಾಗಬೇಕು. ನೃತ್ಯ ತಂಡಗಳ ಸಂಖ್ಯೆಯನ್ನು ಕಡಿಮೆ ಮಾಡಿ ಗುಣಮಟ್ಟವನ್ನು ಕಾಯ್ದುಕೊಳ್ಳುವಲ್ಲಿ ಗಮನ ಹರಿಸಬೇಕು. ಪ್ರತಿ ತಂಡಕ್ಕೆ ಕನಿಷ್ಠ ಆರು ನಿಮಿಷಗಳ ಕಾಲ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಬೇಕು. ಸಾರ್ವಜನಿಕರ ತೆರಿಗೆ ಹಣದಲ್ಲಿ ನಡೆಯುವ ಇಂತಹ ಕಾರ್ಯಕ್ರಮಗಳನ್ನು ಲೋಪದೋಷಗಳಿಲ್ಲದಂತೆ ನಡೆಸುವುದು ಜಿಲ್ಲಾಡಳಿತದ ಕರ್ತವ್ಯವಾಗಿದೆ.

–ಸೇವಂತಿ, ಸೀತಾವಿಲಾಸ ರಸ್ತೆ, ಚಾಮರಾಜಪುರಂ, ಮೈಸೂರು




ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ಚಿಂತನೆ

ದೇಹಕ್ಕುಂಟು ಮನೋರೋಗಕ್ಕೆ ಮದ್ದಿಲ್ಲ!

ಇಂದು ನಮ್ಮನ್ನು ಹಲವಾರು ಬಾಹ್ಯ ಖಾಯಿಲೆಗಳು ಕಾಡುತ್ತಿವೆ. ಕೊನೆಗೆ ವೈದ್ಯ ಲೋಕಕ್ಕೂ ಈ ಖಾಯಿಲೆ ಯಾಕೆ ಬಂತು, ಹೇಗೆ ಬಂತು? ಎಂಬುದು ಅಷ್ಟು ಸುಲಭವಾಗಿ ಅರ್ಥವಾಗದೇ ಚಡಪಡಿಸುವಂತೆ ಆಗುತ್ತಿದೆ. ವೈದ್ಯರೂ ಈ ಖಾಯಿಲೆ ಇಂತಹುದರಿಂದಲೇ ಬಂದಿರಬಹುದು ಎಂದು ಒಂದು ಅಂದಾಜು ಮಾಡಿ ಚಿಕಿತ್ಸೆ ಆರಂಭಿಸುತ್ತಾರೆ. ನಂತರ ಅದರಿಂದ ಗುಣವಾಗದಿದ್ದರೆ ಬಹುಶಃ ಇದಕ್ಕೆ ಈ ಕಾರಣ ಇರಬಹುದು ಎಂದು ಮತ್ತೊಂದು ರೀತಿಯ ಚಿಕಿತ್ಸೆ ನೀಡುತ್ತಾರೆ. ಅದರಿಂದಲೂ ಗುಣವಾಗದಿದ್ದಾಗ ವ್ಯಕ್ತಿಯನ್ನು ಹಲವು ಪರೀಕ್ಷೆಗಳಿಗೆ ಒಳಪಡಿಸುತ್ತಾರೆ. ಅದರಲ್ಲೂ ನಿರ್ದಿಷ್ಟತೆ ಗೊತ್ತಾಗದಿದ್ದಾಗ ಮತ್ತೊಬ್ಬ ತಜ್ಞ ವೈದ್ಯರನ್ನು ಸಂಪರ್ಕಿಸಲು ತಿಳಿಸುತ್ತಾರೆ. ಆಗ ರೋಗಿಗೆ ಹಾಗೂ ಅವನ ಸಂಬಂಧಿಕರಿಗೆ ವೈದ್ಯರ ಮೇಲೆ ಸಿಟ್ಟು ಬರುತ್ತದೆ. ಇದನ್ನು ಮೊದಲೇ ಹೇಳಿದ್ದರೆ, ನಮಗೆ ಸಮಯ ಹಾಗೂ ಹಣ ಉಳಿತಾಯವಾಗುತ್ತಿತ್ತು ಎಂಬುದು ಅವರ ಸಿಟ್ಟಿಗೆ ಕಾರಣವಾಗಿರುತ್ತದೆ. ಆದರೆ ನಿಜವಾಗಿ ವೈದ್ಯರಿಗೆ ಇಂತಹ ಖಾಯಿಲೆಗಳಿಗೆ ತಕ್ಷಣಕ್ಕೆ ಇಂತಹುದೇ ಕಾರಣ ಎಂದು ತಿಳಿಯುವುದಿಲ್ಲ. ಹಿಂದೆ ಅಂತಹುದೇ ರೋಗ ಲಕ್ಷಣದ ಖಾಯಿಲೆ ಬಂದಿದ್ದಂತಹ ರೋಗಿಯನ್ನು ಅವರು ಗುಣಪಡಿಸಿದ್ದರೆ, ತಕ್ಷಣ ಅದರೊಂದಿಗೆ ಹೋಲಿಕೆ ಮಾಡಿ ಚಿಕಿತ್ಸೆ ನೀಡಬಹುದು. ಆದರೆ ಇಂದು ಬರುತ್ತಿರುವ ಚಿತ್ರ–ವಿಚಿತ್ರ ರೋಗಗಳಿಗೆ ಮೂಲ ಕಂಡುಹಿಡಿಯುವುದೇ ಕಷ್ಟವಾಗುತ್ತಿದೆ. ಇಂದು ಮನೆಯಿಂದ ಹೊರಗೆ ನಾವು ಸೇವಿಸುವ ಎಲ್ಲ ಆಹಾರಗಳು ನಮ್ಮನ್ನು ಒಂದಲ್ಲಾ ಒಂದು ರೀತಿಯಲ್ಲಿ ಕಾಡುತ್ತಿರುವುದು ನಮ್ಮ ಗಮನಕ್ಕೇ ಬರುತ್ತಿದೆ. ಆದರೆ ನಾವು ಹಲವು ಆಹಾರಗಳನ್ನು ಈ ರೀತಿ ಮನೆಯಿಂದ ಹೊರಗೆ ಹಾಗೂ ಬಾಯಿಚಪಲಕ್ಕಾಗಿ ತಿನ್ನುವುದರಿಂದ ಯಾವುದರಿಂದ ಆರೋಗ್ಯದಲ್ಲಿ ವ್ಯತ್ಯಾಸವಾಗುತ್ತಿದೆ ಎಂಬುದೇ ಅರಿವಾಗುವುದಿಲ್ಲ. ಆದರೆ ಇಂದಿಗೂ ಹಿರಿಯರನ್ನು ಗಮನಿಸಿದರೆ, ಅವರು ತಮಗೆ ಯಾವ ರೀತಿಯ ಊಟ, ಯಾವ ತರಕಾರಿ ಒಗ್ಗುವುದಿಲ್ಲ ಎಂದು ಸ್ಪಷ್ಟವಾಗಿ ಹೇಳುತ್ತಾರೆ. ಅವರಿಗೆ ಪಥ್ಯವಾಗದ ತರಕಾರಿಯಿಂದ ಅದೆಷ್ಟು ರುಚಿಯಾಗಿ ಅಡುಗೆ ಮಾಡಿದರೂ ಅವರು ಸೇವಿಸುವುದಿಲ್ಲ. ಅವರಿಗೆ ಅಂತಹುದನ್ನು ತಿಂದರೆ ತಮ್ಮ ಆರೋಗ್ಯದಲ್ಲಿ ಏರುಪೇರಾಗುತ್ತದೆ ಎಂಬ ಅರಿವಿರುತ್ತದೆ.

ಈ ಹಿಂದೆ, ಈಗಲೂ ಪುಣ್ಯಕ್ಷೇತ್ರಗಳಿಗೆ ಹೋದಾಗ ನಮಗಿಷ್ಟವಾದ ಯಾವುದಾದರೂ ಸಿಹಿ ಹಾಗೂ ತರಕಾರಿಯನ್ನು ಬಿಟ್ಟುಬರಬೇಕು ಎಂದು ಹೇಳಲಾಗುತ್ತದೆ. ಅಲ್ಲಿಯೇ ನಿರ್ಧಾರ ಮಾಡಿ, ಅದನ್ನು ಮತ್ತೊಬ್ಬರಿಗೆ ಹೇಳಿ ಬಿಡಬೇಕು. ನೋಡುವುದಕ್ಕೆ ಇದು ಮೂಢನಂಬಿಕೆಯಂತೆ ಕಂಡುಬರುತ್ತದೆ. ನಮಗೆ ಇಷ್ಟವಾಗುವುದನ್ನೇ ಏಕೆ ಬಿಡಬೇಕು? ಎಂದು ವಾದಿಸುತ್ತಾರೆ. ಆದರೆ ನಮಗೆ ಯಾವುದು ಬಹಳ ಇಷ್ಟವೋ ಅದರಿಂದಲೇ ತೊಂದರೆ ಎಂಬುದು ಹಿಂದಿನವರಿಗೆ ತಿಳಿದಿತ್ತು. ನನಗೆ ಇಂತಹ ಸಿಹಿ ಇಷ್ಟ ಎಂದು ನಿರಂತರವಾಗಿ ಅದನ್ನೇ ಸೇವಿಸುತ್ತಿದ್ದರೆ, ದೇಹ ಕ್ರಮೇಣ ಅದನ್ನು ಜೀರ್ಣಿಸಿಕೊಳ್ಳಲು ಕಷ್ಟಪಡುತ್ತದೆ. ಕಷ್ಟವಾದಾಗ ಸಹಜವಾಗೇ ಅನಾರೋಗ್ಯಕ್ಕೆ ಕಾರಣವಾಗುತ್ತದೆ. ಅದೇ ರೀತಿ ತರಕಾರಿಗಳು. ನನಗೆ ಇಷ್ಟವೆಂದು ಪ್ರತಿದಿನ ಒಂದೇ ರೀತಿಯ ತರಕಾರಿ ತಿನ್ನಬಾರದು. ಒಂದೊಂದು ತರಕಾರಿಯಲ್ಲಿ ಒಂದೊಂದು ರೀತಿಯ ವಿಟಮಿನ್‌ಗಳು ದೊರಕುತ್ತವೆ. ಒಂದೇ ತರಕಾರಿ ಎಂದಾಗ ದೇಹಕ್ಕೆ ಅಗತ್ಯವಾದ ಇತರೆ ವಿಟ ಮಿನ್‌ಗಳು ನಮಗೆ ದೊರಕದಿರಬಹುದು. ಆ ಕಾರಣದಿಂದ ಅಂತಹುದನ್ನು ಬಿಟ್ಟರೆ ಸರಿಯಾಗುತ್ತದೆ ಎಂಬ ಕಾರಣದಿಂದ ಇಂತಹ ಒಂದು ಪದ್ಧತಿಯನ್ನು ನಮ್ಮ ದೇಶದಲ್ಲಿ ಮೊದಲಿನಿಂದಲೂ ಆಚರಿಸಿಕೊಂಡು ಬರಲಾಗುತ್ತದೆ. ಇಲ್ಲಿ ಮೂಢನಂಬಿಕೆ ಎನ್ನುವುದಕ್ಕಿಂತ ಆರೋಗ್ಯದ ಬಗೆಗಿನ ಕಾಳಜಿಯನ್ನು ಅರ್ಥ ಮಾಡಿಕೊಳ್ಳಬೇಕು. ಇತ್ತೀಚಿನ ಸಂಶೋಧನೆಗಳು ಇದನ್ನೇ ಹೇಳುತ್ತವೆ. ನಮಗೆ ವೈವಿಧ್ಯಮಯವಾದ ತರಕಾರಿಗಳು ಬೇಕು. ಇಲ್ಲಿ ಮುಖ್ಯವಾಗಿ ಇಂತಹ ತರಕಾರಿಯಿಂದ ಇಂತಹ ವಿಟಮಿನ್ ಸಿಗುತ್ತದೆ ಎಂದು ಹೇಳುವುದಕ್ಕಿಂತ ಬೇರೆಬೇರೆ ತರಕಾರಿ ತಿನ್ನಿ ಎಂದಷ್ಟೇ ಹೇಳಲಾಗುತ್ತದೆ. ಇತ್ತೀಚಿನ ಮತ್ತೊಂದು ಸಂಶೋಧನೆ ನಾವು ಪ್ರತಿದಿನ ಉಪಯೋಗಿಸುವ ಅಡುಗೆ ಎಣ್ಣೆಯನ್ನೂ ಆಗಾಗ್ಗೆ ಬದಲಿಸಬೇಕು ಎಂಬುದು. ಉದಾಹರಣೆಗೆ ನಾವು ನಿರಂತರವಾಗಿ ಕಡಲೆಕಾಯಿ ಎಣ್ಣೆಯನ್ನೇ ಉಪಯೋಗಿಸುವುದು ಒಳ್ಳೆಯದಲ್ಲ. ಅದರ ಜೊತೆಗೆ ಇತರೆ ಒಂದೆರಡು ಅಡುಗೆ ಎಣ್ಣೆಯನ್ನು ಬದಲಿಸಿ ಉಪಯೋಗಿಸುವುದರಿಂದ ದೇಹದ ಸಮತೋಲನ ಕಾಪಾಡಬಹುದು ಎಂಬುದು ಇದರ ಅರ್ಥ. ಹಾಗಾಗಿ ನಾವು ಉಪಯೋಗಿಸುವ ಆಹಾರ ಹಾಗೂ ಅದಕ್ಕೆ ಬಳಸಬೇಕಾದ ಸಾಮಗ್ರಿಗಳ ಬಗ್ಗೆ ಎಚ್ಚರಿಕೆ ವಹಿಸಬೇಕಾಗುತ್ತದೆ.



> “ ನಮ್ಮ ಮನಸ್ಥಿತಿ ಸ್ಥಿರವಾಗಿರದಿದ್ದಲ್ಲಿ ನಮ್ಮನ್ನು ಖಾಯಿಲೆಗಳು ಅರಸಿಕೊಂಡು ಬರುತ್ತವೆ. ನಾವು ದೇಹಕ್ಕೆ ಬರುವ ಖಾಯಿಲೆಗಳಿಗೆ ಒಂದಷ್ಟು ವೈದ್ಯಕೀಯ ಉಪಚಾರದಿಂದ ಸರಿಪಡಿಸಿಕೊಳ್ಳಬಹುದಾದರೂ, ಮಾನಸಿಕ ಅವ್ಯವಸ್ಥೆಗಳಿಂದ ಬರುವಂತಹುದು ಅಷ್ಟು ಸುಲಭವಾಗಿ ಗುಣವಾಗುವುದಿಲ್ಲ. ಸಾಮಾನ್ಯವಾಗಿ ಹೇಳುವುದೆಂದರೆ, ಯಾವುದೇ ಖಾಯಿಲೆಯಾದರೂ ಆರಂಭದಲ್ಲೇ ಗೊತ್ತಾದರೆ ಅದನ್ನು ಗುಣಪಡಿಸುವುದು ಸುಲಭ. ಖಾಯಿಲೆ ಆರಂಭವಾಗಿರುವುದು ಗೊತ್ತಾದ ಮೇಲೂ, ಅದು ಉಲ್ಬಣಿಸಿದಾಗ ನೋಡಿಕೊಳ್ಳೋಣ, ಅದು ಹಾಗೆಯೇ ಸರಿ ಹೋಗಲೂಬಹುದು, ಅದಕ್ಕೇ ಏಕೆ ಈಗಲೇ ತಲೆಕೆಡಿಸಿಕೊಳ್ಳುವುದು ಎಂದು ಭಾವಿಸುವವರೇ ಹೆಚ್ಚು.

ಇದೆಲ್ಲಾ ನಮ್ಮ ಹಿಂದಿನವರಿಗೆ ಗೊತ್ತಿತ್ತು. ಆದ್ದರಿಂದ ಅವರು ತಮ್ಮ ಆರೋಗ್ಯವನ್ನು ಸಮಸ್ಥಿತಿಯಲ್ಲಿರುವಂತೆ ನೋಡಿಕೊಳ್ಳುತ್ತಿದ್ದರು. ಆದರೆ ನಾವು ಹಿಂದಿನದ್ದು ಗೊಡ್ಡು ಸಂಪ್ರದಾಯ ಎಂದುಕೊಂಡು ಅದನ್ನು ಬದಿಗಿರಿಸಿ, ನಮಗಿಷ್ಟಬಂದಂತೆ ನಾವು ತಿಂದುಕೊಂಡಿರಬಹುದು ಎಂದುಕೊಳ್ಳುತ್ತಿದ್ದೇವೆ. ಆದರೆ ಈ ಕಾರಣದಿಂದಾಗಿಯೇ ನಾವು ಇಂದು ಹೊಸಹೊಸ ಖಾಯಿಲೆಗಳಿಗೆ ಆಹ್ವಾನ ನೀಡುತ್ತಿದ್ದೇವೆ, ಈ ಖಾಯಿಲೆಗಳು ಒಂದು ಕಾರಣದಿಂದ ಬಂದಿದ್ದರೆ ವೈದ್ಯರು ಅದನ್ನು ಸುಲಭವಾಗಿ ಕಂಡುಹಿಡಿಯಬಲ್ಲರು. ಆದರೆ ನಾವು ವೈದ್ಯಕೀಯ ಕ್ಷೇತ್ರಕ್ಕೇ ಸವಾಲೆಸೆಯುವಂತೆ ಹೊಸಹೊಸ ಖಾಯಿಲೆಗಳ ಸೃಷ್ಟಿಗೆ ಕಾರಣರಾಗುತ್ತಿದ್ದೇವೆ. ಇದರಲ್ಲಿ ವೈದ್ಯರ ಪಾತ್ರಕ್ಕಿಂತ ನಮ್ಮ ಪಾತ್ರವೇ ಪ್ರಮುಖವಾದುದ್ದು ಎಂಬುದನ್ನು ಮರೆಯಬಾರದು.

ನಮ್ಮ ಖಾಯಿಲೆಗಳಿಗೆ ಮೇಲ್ಕಂಡದ್ದು ಒಂದು ಕಾರಣವಾದರೆ ಮತ್ತೊಂದು ಮುಖ್ಯಕಾರಣ ನಮ್ಮ ಮನಸ್ಥಿತಿ. ನಮ್ಮ ಮನಸ್ಥಿತಿ ಸ್ಥಿರವಾಗಿರದಿದ್ದಲ್ಲಿ ನಮ್ಮನ್ನು ಖಾಯಿಲೆಗಳು ಅರಸಿಕೊಂಡು ಬರುತ್ತವೆ. ನಾವು ದೇಹಕ್ಕೆ ಬರುವ ಖಾಯಿಲೆಗಳಿಗೆ ಒಂದಷ್ಟು ವೈದ್ಯ ಕೀಯ ಉಪಚಾರದಿಂದ ಸರಿಪಡಿಸಿಕೊಳ್ಳಬಹುದಾದರೂ, ಮಾನಸಿಕ ಅವ್ಯವಸ್ಥೆಗಳಿಂದ ಬರುವಂತಹುದು ಅಷ್ಟು ಸುಲಭವಾಗಿ ಗುಣವಾಗುವುದಿಲ್ಲ. ಸಾಮಾನ್ಯವಾಗಿ ಹೇಳುವುದೆಂದರೆ, ಯಾವುದೇ ಖಾಯಿಲೆಯಾದರೂ ಆರಂಭದಲ್ಲೇ ಗೊತ್ತಾದರೆ ಅದನ್ನು ಗುಣಪಡಿಸು ವುದು ಸುಲಭ. ಖಾಯಿಲೆ ಆರಂಭವಾಗಿರುವುದು ಗೊತ್ತಾದ ಮೇಲೂ, ಅದು ಉಲ್ಬಣಿಸಿದಾಗ ನೋಡಿಕೊಳ್ಳೋಣ, ಅದು ಹಾಗೆಯೇ ಸರಿ ಹೋಗಲೂಬಹುದು, ಅದಕ್ಕೇ ಏಕೆ ಈಗಲೇ ತಲೆಕೆಡಿಸಿಕೊಳ್ಳುವುದು ಎಂದು ಭಾವಿಸುವವರೇ ಹೆಚ್ಚು. ಹಾಗಿರುವಾಗ ನಾವು ಖಾಯಿಲೆಗಳನ್ನು ಜಾಸ್ತಿ ಮಾಡಿಕೊಂಡ ನಂತರವೇ ಚಿಕಿತ್ಸೆಗೆ ಹೋದಾಗ ಸ್ವಾಭಾವಿಕವಾಗಿ ಚಿಕಿತ್ಸೆ ನಿಧಾನವಾಗುತ್ತದೆ ಹಾಗೂ ಅದಕ್ಕೆ ಕಾರಣ ಕಂಡುಕೊಳ್ಳುವುದೂ ಕಷ್ಟವಾಗುತ್ತದೆ. ಈ ಕಾರಣದಿಂದಾಗಿ ನಮಗೆ ನಮ್ಮ ಮನಸ್ಥಿತಿ ಮುಖ್ಯ ವಾಗುತ್ತದೆ. ತಜ್ಞರು ಹೇಳುವಂತೆ ದೈಹಿಕ ಖಾಯಿಲೆಗಳಿಗೆ ಹಾಗೂ–ಹೀಗೂ ಚಿಕಿತ್ಸೆ ನೀಡಬಹುದು, ಆದರೆ ಮಾನಸಿಕ ಖಾಯಿಲೆಗಳಿಗೆ ಚಿಕಿತ್ಸೆ ನೀಡುವುದು ಅಷ್ಟು ಸುಲಭವಲ್ಲ.

ನಾವು ಮಾನಸಿಕವಾಗಿ ಕೆಲವು ವಿಷಯಗಳಿಗೆ ಒಗ್ಗಿಕೊಂಡಿರುತ್ತೇವೆ. ಅದರಲ್ಲಿ ವ್ಯತ್ಯಾಸವಾದಾಗ ಮನಸ್ಸು ಘಾಸಿಗೊಳ್ಳುತ್ತಾ ಹೋಗುತ್ತದೆ. ಖಾಯಿಲೆಯ ಲಕ್ಷಣವೇ ಇಲ್ಲದೇ ದೇಹ ಒದ್ದಾಡುವಂತಾಗುತ್ತಿರುತ್ತದೆ. ಇದರಲ್ಲಿ ಇತ್ತೀಚೆಗೆ ಮುಖ್ಯವಾಗಿ ಗಮನಿಸಿರುವಂತಹುದು, ಮಕ್ಕಳನ್ನು ನಾವು ಪರಿಶ್ರಮಪಟ್ಟು ಬೆಳೆಸುತ್ತೇವೆ. ಅವರಿಗೆ ವಿದ್ಯಾಭ್ಯಾಸವೂ ಆಗುತ್ತದೆ. ನಂತರ ಅವರು ಹೆಚ್ಚು ಸಂಪಾದನೆ ಮಾಡಬೇಕು, ಅವರು ಒಳ್ಳೆಯ ಕಂಪನಿಗಳಲ್ಲಿ, ವಿದೇಶ ಗಳಲ್ಲಿ ಕೆಲಸ ಮಾಡಬೇಕು ಎಂದೆಲ್ಲಾ ಬಯಸುವ ತಂದೆ–ತಾಯಿಯರು, ಅವರು ಹಾಗೆ ಒಳ್ಳೆಯ ಕೆಲಸ ದೊರೆತು, ತಮ್ಮಿಂದ ದೂರವಾಗಿ ಬೆಂಗಳೂರಿನಲ್ಲೋ, ವಿದೇಶದಲ್ಲೋ ನೆಲೆಸಿದಾಗ ಅವರನ್ನು ನೋಡಲು ಹಾತೊರೆಯುತ್ತೇವೆ. ಮದುವೆಗೆ ಪೂರ್ವದಲ್ಲಿ ಮಗ ನಮ್ಮೊಡನೆ ಹೆಚ್ಚು ಮಾತನಾಡುತ್ತಿದ್ದ. ಮದುವೆಯಾದ ನಂತರ ಅವನಿಂದ ಕರೆ ಕಡಿಮೆಯಾಗುತ್ತಿದೆ. ಅವನು ನಮ್ಮನ್ನು ಕಡೆಗಣಿಸುತ್ತಿದ್ದಾನೆ ಎಂದು ಭಾವಿಸಿ ಮಾನಸಿಕವಾಗಿ ಕುಗ್ಗುವ ತಂದೆತಾಯಿ ಯರೇ ಹೆಚ್ಚಾಗಿ ಖಾಯಿಲೆಗೆ ತುತ್ತಾಗುತ್ತಾರೆ. ಒಂದೊಮ್ಮೆ ಮಗ, ನೀವೂ ನಮ್ಮೊಟ್ಟಿಗೆ ಬಂದು ಇದ್ದುಬಿಡಿ ಎಂದರೆ ಇಂತಹವರು ಮಾನಸಿಕವಾಗಿ ಸಿದ್ಧರಾಗುವುದಿಲ್ಲ. ಅದಕ್ಕೆ ಕಾರಣವೂ ಇದ್ದಿರಬಹುದು. ನಾವು ಹುಟ್ಟಿ ಬೆಳೆದ ಜಾಗ, ನಮಗೆ ಗುರುತು ಪರಿಚಯದವರು ಹೆಚ್ಚು ಇರುವ ಜಾಗ ಇದು. ಇದನ್ನು ಬಿಟ್ಟು ಎಲ್ಲೋ ಕಾಣದ ಊರಿಗೆ, ಕಾಣದ ದೇಶಕ್ಕೆ ಹೋಗಿ ನಾವು ಏನು ಮಾಡುವುದು? ಈಗಾಗಲೇ ನಮಗೆ ವಯಸ್ಸಾಗಿದೆ? ಹೀಗಿರುವಾಗ ನೆಮ್ಮದಿಯಾಗಿ ಇರಲು ನಮ್ಮೂರಿನಲ್ಲಿ ಮಾತ್ರ ಸಾಧ್ಯ. ಇದನ್ನು ಬಿಟ್ಟು ಹೋಗಲಾಗದು ಎಂದು ಚಡಪಡಿಸುತ್ತಾರೆ. ಇದು ನಿಜವೂ ಹೌದು.

ನಾನು ಕಂಡಿರುವ ಎರಡು ವಿಭಿನ್ನ ಪ್ರಕರಣಗಳನ್ನು ಇಲ್ಲಿ ಉಲ್ಲೇಖಿಸಬಯಸುತ್ತೇನೆ. ಒಬ್ಬರು ಹೀಗೆ ವಯಸ್ಸಾದ ಮೇಲೆ ಮಕ್ಕಳ ಮನೆಗೆ ಎಂದು ಮೈಸೂರಿನಿಂದ ಬೆಂಗಳೂರಿಗೆ ಹೋದರು. ಮೈಸೂರಲ್ಲಿ ಇರುವಾಗ ಅತ್ಯಂತ ಚಟುವಟಿಕೆಯಿಂದ ಇದ್ದರು. ಅವರೇ ಹೇಳುವಂತೆ ಬೆಂಗಳೂರು ವಯಸ್ಸಾದ ಮೇಲೆ ನಮಗೆ ಒಗ್ಗುವುದಿಲ್ಲ. ಅವರು ಬೆಂಗಳೂರು ಸೇರಿದ ನಂತರ ಯಾವುದೇ ಚಟುವಟಿಕೆ ಇಲ್ಲದಂತಾಯಿತು. ಹೊರಗೆ ಹೋಗಲು ಗೆಳೆಯರಿಲ್ಲ. ಬೆಂಗಳೂರಿನಲ್ಲಿ ವಾಹನ ಓಡಿಸುವುದು ಮೈಸೂರಿನಂತೆ ಸುಲಭವಲ್ಲ, ರಸ್ತೆಗಳೂ ಗೊತ್ತಾಗುವುದಿಲ್ಲ. ಹೀಗಾಗಿ ಅವರು ಕ್ರಮೇಣ ಮನೆಗೇ ಸೀಮಿತವಾದರು. ಓದಲೂ ಮನಸ್ಸಿಲ್ಲ. ಓದಲು ಕೂತರೆ ಮೈಸೂರಿನಲ್ಲಿ ಹಿಂದೆ ಕಳೆದ ದಿನಗಳೇ ನೆನಪಾಗುತ್ತವೆ. ಹೀಗಾಗಿ ಅವರು ಮಾನಸಿಕವಾಗಿ ಕುಗ್ಗುತ್ತಾ ಹೋದರು. ವಯಸ್ಸು ಪ್ರತಿ ವರ್ಷ ಒಂದಕ್ಕೆ ಬದಲು ಎರಡು ಮೂರರಷ್ಟು ಹೆಚ್ಚಾದಂತೆ ಭಾಸವಾಗುತ್ತಾ ಹೋಯಿತು. ಖಾಯಿಲೆಗಳು ಅರಸಿ ಬಂದವು. ಇದಕ್ಕೆ ವೈದ್ಯರಾದರೂ ಯಾವ ಚಿಕಿತ್ಸೆ ನೀಡಬಹುದು?

ಮತ್ತೊಂದು, ಇದು ಊರಿನಿಂದ ಹೊರಗೆ ಹೋದುದಲ್ಲ. ಇದೇ ಊರಿನಲ್ಲಿ ಬಹಳ ವರ್ಷಗಳಿಂದ ಇದ್ದಂತಹ ಮನೆಯನ್ನು ಅನಿವಾರ್ಯವಾಗಿ ಖಾಲಿ ಮಾಡಿ ಬೇರೊಂದು ಪ್ರದೇಶಕ್ಕೆ ಹೋಗಬೇಕಾಯಿತು. ಮಗ ಇವರನ್ನು ಚೆನ್ನಾಗಿ ನೋಡಿಕೊಳ್ಳಬೇಕೆಂದು ವಿಶಾಲವಾದ ಮನೆಯನ್ನು ನಗರದ ಹೊರವಲಯದಲ್ಲಿ ಕಟ್ಟಿಸಿದ. ಇದು ಅಪ್ಪನ ರೂಮು, ಅವರಿಗೆ ಯಾವುದೇ ತೊಂದರೆಯಾಗಬಾರದು ಎಂದು ಎಲ್ಲಾ ಸೌಕರ್ಯ ಒದಗಿಸಿದ. ಒಳ್ಳೆಯ ಮಲಗುವ ಹಾಸಿಗೆ, ಕೂರಲು ಉತ್ತಮವಾದ ಆಸನಗಳು, ಓದಲು ಪುಸ್ತಕಗಳು, ಮನೆಗೆ ಒಳ್ಳೆಯ ಗಾಳಿ ಬೆಳಕು ಎಲ್ಲವೂ ಇದೆ. ಆದರೆ ಅಲ್ಲಿಗೆ ಹೋದ ಇವರು ಕೆಲವೇ ದಿನಗಳಲ್ಲಿ ಮಂಕು ಕವಿದಂತಾಗತೊಡಗಿದರು. ಕಾರಣ ತಾವು ಮೊದಲಿನಿಂದಲೂ ಇದ್ದ ಜಾಗದಿಂದ ಹೊರಬಂದಿದ್ದು. ಹೊಸ ಜಾಗದಲ್ಲಿ ಗೆಳೆಯರಿಲ್ಲ, ಮಾತನಾಡಿಸುವವರಿಲ್ಲ, ಇವರಿಗೂ ವಯಸ್ಸಾದ ಕಾರಣ ಮೊದಲಿನಂತೆ ದಿನನಿತ್ಯ ತಾವು ಮೊದಲಿದ್ದ ಜಾಗಕ್ಕೆ ಹೋಗಿಬರಲಾಗುತ್ತಿಲ್ಲ. ಅಲ್ಲದೇ ಹಳೆಯ ಗೆಳೆಯರಲ್ಲೂ ಕೆಲವರು ಈಗಿಲ್ಲ. ಸುಮ್ಮನೆ ಅಲ್ಲಿಗೆ ಹೋಗಿ ಯಾರನ್ನು ಭೇಟಿಯಾಗುವುದು? ಗೆಳೆಯರು ಎಂದರೆ ತನ್ನಂತೆಯೇ ವಯಸ್ಸಾದವರು. ಅವರೂ ಹೊರಗೆ ಬರುವುದು ಕಡಿಮೆ. ಈ ರೀತಿ ಚಿಂತೆ ಮನಸ್ಸಿಗೆ ನಾಟ ತೊಡಗಿತು. ಆರಂಭದಲ್ಲಿ ಅವರೇ ಕೆಲವರೊಡನೆ ದೂರವಾಣಿಯಲ್ಲಿ ಮಾತನಾಡಿ ಸಮಾಧಾನಪಟ್ಟುಕೊಳ್ಳುತ್ತಿದ್ದರು. ಪ್ರತಿದಿನ ಏನೆಂದು ಮಾತನಾಡುವುದು? ಕ್ರಮೇಣ ದೂರವಾಣಿ ಮಾಡುವುದು ಕಡಿಮೆಯಾಯಿತು. ಮಗನಿಗೆ ಅಪ್ಪ ಯಾಕೋ ಮೌನಿಯಾಗುತ್ತಿದ್ದಾರೆ ಎಂಬ ಆತಂಕ. ಇದು ದೈಹಿಕ ಖಾಯಿಲೆಯಲ್ಲ. ಇದು ಮಾನಸಿಕ ಖಾಯಿಲೆ. ದೈಹಿಕ ಖಾಯಿಲೆ ಕಾಣುವಂತಹುದು. ಮಾನಸಿಕ ಖಾಯಿಲೆ ಕಾಣಲಾಗದು. ದೈಹಿಕ ಖಾಯಿಲೆಗೆ ಚಿಕಿತ್ಸೆ ನೀಡಬಹುದು. ಆದರೆ ಮಾನಸಿಕ ಖಾಯಿಲೆಗೆ ಅಂತಹ ಸುಲಭ ಚಿಕಿತ್ಸೆ ಇಲ್ಲ. ನಾವು ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಒಂದಷ್ಟು ಹೊಂದಾಣಿಕೆ ಮಾಡಿಕೊಳ್ಳದಿದ್ದರೆ, ಮಾನಸಿಕತೆಯ ಜೊತೆಗೆ ದೈಹಿಕವಾಗಿಯೂ ದುರ್ಬಲರಾಗುತ್ತೇವೆ. ಕಷ್ಟದ ಪರಿಸ್ಥಿತಿಯಲ್ಲಿ ಹೀಗೇ ನಡೆದುಕೊಳ್ಳಿ ಎಂದು ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ. ಆದರೆ ಇರುವುದನ್ನು ಮಾನಸಿಕವಾಗಿ ಹೊಂದಿಸಿಕೊಳ್ಳುವುದು ಬುದ್ಧಿವಂತಿಕೆಯಾಗುತ್ತದೆ.

ಸಿದ್ದರಾಮಯ್ಯನವರ ಪತ್ನಿ ಪಾರ್ವತಿಯವರಿಗೆ ಮಂಜೂರಾಗಿದ್ದ 14 ನಿವೇಶನ ಮಹಜರು

ದೂರುದಾರ ಸ್ನೇಹಮಯಿ ಕೃಷ್ಣ ಉಪಸ್ಥಿತಿಯಲ್ಲಿ ಲೋಕಾಯುಕ್ತ ಅಧಿಕಾರಿಗಳಿಂದ ಪಂಚನಾಮೆ

● ಲೋಕಾಯುಕ್ತ ಎಸ್ಪಿ ಉದೇಶ್ ನೇತೃತ್ವದಲ್ಲಿ ಮಹಜರು ● ಮುಡಾ, ಸರ್ವೆ ಇಲಾಖೆ ಅಧಿಕಾರಿಗಳು ಭಾಗಿ ● ಪಾರ್ವತಿ ನಿವೇಶನ ವಾಪಸು ಕೊಟ್ಟರು ತಪ್ಪದ ತನಿಖೆ ತಲೆ ಬಿಸಿ ● ನಿವೇಶನ ವಾಪಸ್ ಕೊಟ್ಟು ಬಲವಾದ ಸಾಕ್ಷಿ ಕೊಟ್ಟಿದ್ದಾರೆ



ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರಿಗೆ ಮುಡಾದಿಂದ ಮಂಜೂರಾಗಿದ್ದ ಮೈಸೂರಿನ ವಿಜಯನಗರದ ನಿವೇಶನ ಸ್ಥಳದಲ್ಲಿ ಲೋಕಾಯುಕ್ತ ಅಧಿಕಾರಿಗಳು ಶುಕ್ರವಾರ ಮಹಜರು ನಡೆಸಿದರು.

ಮೈಸೂರು, ಅ.4(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರಿಗೆ ಮೈಸೂರಿನ ವಿಜಯನಗರದಲ್ಲಿ ಮಂಜೂರಾಗಿದ್ದ 14 ನಿವೇಶನಗಳಲ್ಲಿ ಲೋಕಾಯುಕ್ತ ಪೊಲೀಸರು ಇಂದು ಮಹಜರು ನಡೆಸಿದರು.

ದೂರುದಾರ ಸ್ನೇಹಮಯಿ ಕೃಷ್ಣ ಉಪಸ್ಥಿತಿಯಲ್ಲಿ ಲೋಕಾಯುಕ್ತ ಎಸ್ಪಿ ಉದೇಶ್ ನೇತೃತ್ವದಲ್ಲಿ ಇಂದು ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ನಿರಂತರವಾಗಿ ಮಹಜರು ನಡೆಸಲಾಯಿತು.

ವಿಜಯನಗರ 3ನೇ ಹಂತದಲ್ಲಿ 8 ನಿವೇಶನ ಹಾಗೂ ವಿಜಯನಗರ 4 ಹಂತದಲ್ಲಿ 6 ನಿವೇಶನಗಳ ಮಹಜರು ನಡೆಸಲಾಯಿತು. ನಿವೇಶನಗಳ ಸಂಖ್ಯೆ, ಅಳತೆ, ಚೆಕ್ಕು ಬಂಧಿ ಸೇರಿದಂತೆ ಹಲವು ವಿಷಯಗಳನ್ನು ದಾಖಲೆಗಳ ಮೂಲಕ ಪರಿಶೀಲನೆ ನಡೆಸಿದರು. ಅಲ್ಲದೆ, ಹಲವು ಸಂಗತಿಗಳನ್ನು ಉಲ್ಲೇಖಿಸಿದರು.

ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರು ಈಗಾಗಲೇ ನಿವೇಶನಗಳನ್ನು ಮುಡಾಗೆ ವಾಪಸ್ ನೀಡಿದ್ದು, ಅವುಗಳ ಖಾತೆ ಕೂಡ ರದ್ದಾಗಿದೆ. ಪ್ರಸ್ತುತ ಈ ನಿವೇಶನಗಳು ಮುಡಾ ಕಾರ್ಯದರ್ಶಿ ಹೆಸರಿಗೆ ವರ್ಗಾವಣೆಯಾಗಿದ್ದರೂ ಮಹಜರು ನಡೆಸಲಾಗಿದೆ.

ನಿವೇಶನಗಳು ಮುಡಾಗೆ ವಾಪಸ್ ಆಗಿದ್ದರೂ ಹಗರಣ ಇನ್ನು ನ್ಯಾಯಾಲಯದಲ್ಲಿ ವಿಚಾರಣೆಯ ಹಂತದಲ್ಲಿದೆ. ಈ ಹಿನ್ನೆಲೆಯಲ್ಲಿ ನಿಯಮದಂತೆ ಲೋಕಾಯುಕ್ತ ಪೊಲೀಸರು ಇಂದು ಮಹಜರು ಕಾರ್ಯ ನಡೆಸಿದರು.

ಈ ಬಗ್ಗೆ ಪ್ರತಿಕ್ರಿಯೆ ನೀಡಿದ ದೂರುದಾರ ಸ್ನೇಹಮಯಿ ಕೃಷ್ಣ, ಪಾರ್ವತಿ ಅವರು ನಿವೇಶನ ವಾಪಸ್ಸು ನೀಡಿರುವ ಕಾರಣ ಅವು ಈಗ ಮುಡಾ ಮಾಲೀಕತ್ವದಲ್ಲಿವೆ. ಮಾಲೀಕತ್ವ ಬದಲಾವಣೆಯಾದರೂ ನಿವೇಶನ ಇಲ್ಲೇ ಇದೆ ಜೊತೆಗೆ ದಾಖಲಾತಿಗಳು ಕೂಡ ಸ್ಪಷ್ಟವಾಗಿದೆ ಎಂದರು.

ನಿವೇಶನ ವಾಪಸ್ಸು ಕೊಟ್ಟು, ಅದರ ಮಂಜೂರಾತಿ ರದ್ದಾಗಿರುವ ಕಾರಣ ಆರೋಪಿಗಳು ತಮ್ಮ ತಪ್ಪು ಒಪ್ಪಿಕೊಂಡಂತಾಗಿದೆ. ಈ ಮೂಲಕ ನನ್ನ ಹೋರಾಟಕ್ಕೆ ಬಲವಾದ ಸಾಕ್ಷಿ ಸಿಕ್ಕಿದಂತಾಗಿದೆ ಎಂದು ಸ್ನೇಹಮಯಿ ಕೃಷ್ಣ ಅಭಿಪ್ರಾಯಪಟ್ಟರು.

ಕಳ್ಳರೆಲ್ಲಾ ಒಂದಾಗಿ ಕೂಟ ಮಾಡಿಕೊಂಡಿದ್ದಾರೆ...!

ಮುಡಾ ಹಗರಣ ಸಂಬಂಧ ಲೋಕಾಯುಕ್ತದಲ್ಲಿ ಎಫ್ಐಆರ್ ದಾಖಲಾಗಿರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ನೀಡುವ ಅಗತ್ಯವಿಲ್ಲ ಎಂಬ ಶಾಸಕ ಜಿ.ಟಿ.ದೇವೇಗೌಡರ ಹೇಳಿಕೆಗೆ ಪ್ರತಿಕ್ರಿಯಿಸಿರುವ ಸ್ನೇಹಮಯಿ ಕೃಷ್ಣ ಕಳ್ಳರೆಲ್ಲಾ ಒಂದಾಗಿದ್ದಾರೆ ಎಂದು ಲೇವಡಿ ಮಾಡಿದ್ದಾರೆ.

ಮುಡಾದಲ್ಲಿ ಶೇಕಡ 50:50ರ ಅನುಪಾತದಲ್ಲಿ ನಿವೇಶನ ಪಡೆದಿರುವವರೆಲ್ಲಾ ಒಂದು ಕೂಟ ಮಾಡಿಕೊಂಡಿದ್ದಾರೆ. ಮುಂದೆ ನನ್ನ ಹೋರಾಟದ ದಿಕ್ಕು ತಪ್ಪಿಸುವುದು ಹೇಗೆ, ತಮ್ಮ ನಿವೇಶನ ಉಳಿಸಿಕೊಳ್ಳುವುದು ಹೇಗೆ ಎಂಬ ಷಡ್ಯಂತ್ರ ರೂಪಿಸುತ್ತಿದ್ದು, ಜಿ.ಟಿ.ದೇವೇಗೌಡರ ನಿನ್ನೆಯ ಮಾತು ಇದಕ್ಕೆ ಸ್ಪಷ್ಟ ಉದಾಹರಣೆ ಎಂದರು.

ಕಳೆದ ಮೂರು ತಿಂಗಳಿಂದ ಮೌನವಾಗಿದ್ದ ಜಿ.ಟಿ.ದೇವೇಗೌಡರು ನಾಡಹಬ್ಬ ದಸರಾ ಉದ್ಘಾಟನಾ ಸಮಾರಂಭದಲ್ಲಿ ಈ ರೀತಿ ಮಾತನಾಡಿರುವುದು ತಪ್ಪು.

ಯಾರು, ಯಾವುದೇ ಕೂಟ ರಚನೆ ಮಾಡಿಕೊಳ್ಳಲಿ. ಆದರೆ ನಾನು ಮಾತ್ರ ಯಾವುದೇ ಕಾರಣಕ್ಕೂ ಹೋರಾಟದಿಂದ ಹಿಂದೆ ಸರಿಯುವುದಿಲ್ಲ, ಯಾವುದೇ ರೀತಿಯ ಪ್ರಭಾವಕ್ಕೂ ಬಗ್ಗಲ್ಲ, ಜಗ್ಗಲ್ಲ, ಕುಗ್ಗಲ್ಲ. ಹೆದರುವುದೂ ಇಲ್ಲ ಎಂದು ಗುಡುಗಿದರು.

ನನ್ನ ಹೋರಾಟದಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಕೈವಾಡವಿದೆ. ನಾನು ಪಾತ್ರಧಾರಿಯಷ್ಟೇ ಎಂದು ಹೇಳಿರುವ ಕೆಪಿಸಿಸಿ ವಕ್ತಾರ ಲಕ್ಷ್ಮಣ್ ಆರೋಪಕ್ಕೆ ಕಿಮ್ಮತ್ತಿಲ್ಲ. ಸಿದ್ದರಾಮಯ್ಯ ಸೇರಿದಂತೆ ಕಾಂಗ್ರೆಸ್ ನಾಯಕರು ನೀಡುತ್ತಿರುವ ಇಂತಹ ಸುಳ್ಳುಗಳನ್ನು ರಾಜ್ಯದ ಜನರು ಗಮನಿಸುತ್ತಿದ್ದಾರೆ ಎಂದು ಸ್ನೇಹಮಯಿ ಕೃಷ್ಣ ಎಚ್ಚರಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 5 ಶನಿವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 170 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಶ್ರೀರಂಗಪಟ್ಟಣ ಪಾರಂಪರಿಕ ದಸರಾ; ಅದ್ದೂರಿಯಾಗಿ ನಡೆದ ಜಂಬೂ ಸವಾರಿ

ಮಕರ ಶುಭಲಗ್ನದಲ್ಲಿ ಆರಂಭವಾಗಬೇಕಿದ್ದ ಜಂಬೂ ಸವಾರಿಗೆ ಯಮಗಂಡ ಕಾಲದಲ್ಲಿ ಚಾಲನೆ!



ಶ್ರೀರಂಗಪಟ್ಟಣ ದಸರಾ ಮಹೋತ್ಸವದ ಜಂಬೂ ಸವಾರಿ ಮೆರವಣಿಗೆಗೆ ಖ್ಯಾತ ನಟ ಡಾ.ಶಿವರಾಜ್‌ಕುಮಾರ್ ಚಾಮುಂಡೇಶ್ವರಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಚಾಲನೆ ನೀಡಿದರು.

ಶ್ರೀರಂಗಪಟ್ಟಣ, ಅ.4– ಶ್ರೀರಂಗಪಟ್ಟಣ ಪಾರಂಪರಿಕ ದಸರಾ ಮಹೋತ್ಸವದ ಜಂಬೂ ಸವಾರಿ ಮೆರವಣಿಗೆಗೆ ಖ್ಯಾತ ನಟ ಡಾ.ಶಿವರಾಜ್‌ಕುಮಾರ್ ಚಾಮುಂಡೇಶ್ವರಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಚಾಲನೆ ನೀಡಿದರು.

ಶ್ರೀ ಚಾಮುಂಡೇಶ್ವರಿ ಮೂರ್ತಿವುಳ್ಳ ಅಂಬಾರಿ ಹೊತ್ತ ಮಹೇಂದ್ರ, ಕುಮ್ಕಿ ಆನೆಗಳಾದ ಲಕ್ಷ್ಮೀ ಮತ್ತು ಹಿರಣ್ಯ ಜೊತೆ ಗಾಂಭೀರ್ಯ ನಡಿಗೆಯೊಂದಿಗೆ ಹೆಜ್ಜೆ ಹಾಕಿ ಗಮನ ಸೆಳೆಯಿತು. ತಾಲೂಕಿನ ಕಿರಂಗೂರು ವೃತ್ತದ ಬನ್ನಿಮಂಟಪದ ಬಳಿ ನಿರ್ಮಿಸಿದ್ದ ವೇದಿಕೆಯಲ್ಲಿ ಮಧ್ಯಾಹ್ನ 3.30 ಗಂಟೆಗೆ ಸಲ್ಲುವ ಶುಭ ಲಗ್ನದಲ್ಲಿ ವಿಶೇಷವಾಗಿ ಅಲಂಕೃತಗೊಂಡಿದ್ದ ಶ್ರೀ ಚಾಮುಂಡೇಶ್ವರಿ ಉತ್ಸವಮೂರ್ತಿವುಳ್ಳ ಅಂಬಾರಿ ಮೆರವಣಿಗೆಗೆ ಪುಷ್ಪಾರ್ಚನೆ ನೆರವೇರಿಸಲಾಯಿತು. ಬಳಿಕ ಸ್ಥಳೀಯ ಜಾನಪದ ಕಲಾತಂಡಗಳು ಪೂರ್ಣಕುಂಭ ಸಹಿತ ಮೆರವಣಿಗೆಗೆ ಸಾಂಪ್ರದಾಯಿಕ ಚಾಲನೆ ನೀಡಿ ಹಬ್ಬದ ಮೆರಗು ನೀಡಿದರು.

ಇದಕ್ಕೂ ಮುನ್ನ ವೇದ ಬ್ರಹ್ಮ ಡಾ.ವಿ. ಭಾನುಪ್ರಕಾಶ್ ಶರ್ಮ ನೇತೃತ್ವದಲ್ಲಿ ವೈದಿಕರು, ಗಣಪತಿ ಪೂಜೆ, ಪುಣ್ಯಾಹ, ಕಲ್ಯಾಣಿ ಪೂಜೆ, ಮಂಟಪ ಪೂಜೆ, ಬನ್ನಿವೃಕ್ಷ ಪೂಜೆ, ಶ್ರೀ ಚಾಮುಂಡೇಶ್ವರಿ ಅಷ್ಟೋತ್ತರ ಪೂಜೆ, ಸಹಸ್ರನಾಮ, ಕುಂಕುಮಾರ್ಚನೆ, ಬಲಿ ಪ್ರದಾನ, ನಂದಿ ಕಂಬ ಪೂಜೆ, ಮಹಾ ಮಂಗಳಾರತಿ ಸಹಿತ ಪುಷ್ಪಾರ್ಚನೆ ಸೇರಿದಂತೆ ವಿವಿಧ ■ 6ನೇ ಪುಟಕ್ಕೆ

ಏಕಾಏಕಿ ದಿಕ್ಕಾಪಾಲಾಗಿ ಓಡಿದ ಲಕ್ಷ್ಮಿ!



ಶ್ರೀರಂಗಪಟ್ಟಣ: ಶ್ರೀರಂಗಪಟ್ಟಣ ದಸರಾದ ಜಂಬೂಸವಾರಿ ಮೆರವಣಿಗೆಯಲ್ಲಿ ಕುಮ್ಕಿ ಆನೆ ಲಕ್ಷ್ಮಿ ಬೆದರಿ, ದಿಕ್ಕಾಪಾಲಾಗಿ ಓಡಿ ರಂಪಾಟ ಮಾಡಿದೆ. ಶ್ರೀರಂಗಪಟ್ಟಣದ ಮಿನಿ ವಿಧಾನಸೌಧದ ಬಳಿ ಘಟನೆ ನಡೆದಿದ್ದು, ಆನೆಯ ರಂಪಾಟಕ್ಕೆ ಜನರು ದಿಕ್ಕಾಪಾಲಾಗಿ ಓಡಿದ್ದಾರೆ. ಮಾವುತರು, ಕಾವಾಡಿಗರ ಸಮಯ ಪ್ರಜ್ಞೆಯಿಂದ ಭಾರೀ ಅನಾಹುತ ತಪ್ಪಿದೆ. ಶ್ರೀರಂಗಪಟ್ಟಣ ದಸರಾ ಮಹೋತ್ಸವದ ಅಂಗವಾಗಿ ನಿನ್ನೆಯಷ್ಟೇ ಶ್ರೀರಂಗಪಟ್ಟಣಕ್ಕೆ ಮೂರು ಆನೆಗಳು ಆಗಮಿಸಿದ್ದವು. ಈ ಪೈಕಿ ಬನ್ನಿಮಂಟಪದಿಂದ ರಂಗನಾಥ ಮೈದಾನದವರೆಗೆ ಅಂಬಾರಿ ಆನೆ ಜೊತೆ ಹೆಜ್ಜೆ ಹಾಕಬೇಕಾಗಿದ್ದ ಲಕ್ಷ್ಮಿ ಏಕಾಏಕಿ ಬೆದರಿ ದಿಕ್ಕಾಪಾಲಾಗಿ ಓಡಿತು. ಎಚ್ಚೆತ್ತ ಮಾವುತರು, ಕಾವಾಡಿಗರು ಅದರ ಹಿಂದೆಯೇ ಓಡಿ ಅದನ್ನು ತಹಬದಿಗೆ ತಂದರು. ಇದರಿಂದ ಸ್ಥಳದಲ್ಲಿ ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು. 2019ರಲ್ಲಿ ಪಟಾಕಿ ಶಬ್ಧದಿಂದ ಬೆಚ್ಚಿ ಗೋಪಾಲಸ್ವಾಮಿ ಕೆರಳಿ ಮಾರ್ಗದಿಂದ ಬದಿಗೆ ಸರಿದು ನಿಂತಿತ್ತು. ಆದರೆ ಯಾವುದೇ ಅನಾಹುತ ಸಂಭವಿಸಿರಲಿಲ್ಲ.

ಬನ್ನಿ, ನೀವೇ ಮುಖ್ಯಮಂತ್ರಿಯಾಗಿ...!

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರಿಗೆ ಸಚಿವ ಸತೀಶ್ ಜಾರಕಿಹೊಳಿ ಮನವಿ!!

● ಇಡಿ ಯಾವುದೇ ಸಂದರ್ಭದಲ್ಲಿ ಸಿಎಂ ಸಿದ್ದರಾಮಯ್ಯರ ವಿಷಯದಲ್ಲಿ ಪ್ರವೇಶ ಸಾಧ್ಯತೆ ● ಪಕ್ಷ, ಸರ್ಕಾರದ ಭವಿಷ್ಯದ ದೃಷ್ಟಿಯಿಂದ ರಾಜ್ಯಕ್ಕೆ ಹಿಂತಿರುಗಿ ಜವಾಬ್ದಾರಿ ವಹಿಸಿಕೊಳ್ಳಿ; ದೆಹಲಿಯಲ್ಲಿ ಭೇಟಿ ಮಾಡಿ ಕೋರಿಕೆ ● ಈ ಸುಳಿವು ಅರಿತು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅಚ್ಚರಿ ಹೇಳಿಕೆ; 136 ಶಾಸಕರ ಇಚ್ಛೆಯಂತೆ ಸಿಎಂ ಆಯ್ಕೆ

ಬೆಂಗಳೂರು, ಅ. 4(ಕೆಎಂಶಿ)– ರಾಷ್ಟ್ರ ರಾಜಕಾರಣದಿಂದ ರಾಜ್ಯಕ್ಕೆ ಹಿಂತಿರುಗಿ ಮುಖ್ಯಮಂತ್ರಿಗಾದಿ ಪಡೆಯುವಂತೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಗೆ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಮನವಿ ಮಾಡಿದ್ದಾರೆ.

ಮುಡಾ ಹಗರಣದಲ್ಲಿ ಸಿಲುಕಿರುವ ಸಿದ್ದರಾಮಯ್ಯ ವಿರುದ್ಧ ಜಾರಿ ನಿರ್ದೇಶನಾಲಯ (ಇಡಿ) ಯಾವುದೇ ಕ್ಷಣದಲ್ಲಿ ಪ್ರವೇಶಿಸಲಿದ್ದು, ಇದರಿಂದ ನಾಯಕತ್ವ ಮತ್ತು ಸರ್ಕಾರ ಇಕ್ಕಟ್ಟಿಗೆ ಸಿಲುಕಲಿದೆ. ಇಂತಹ ಸನ್ನಿವೇಶದಲ್ಲಿ ಸಿದ್ದರಾಮಯ್ಯ ಅವರ ರಾಜೀನಾಮೆ ಪಡೆಯಲು ವರಿಷ್ಠರು ಮುಂದಾಗುತ್ತಾರೆ, ಇಲ್ಲವೇ ಸಿದ್ದರಾಮಯ್ಯ ಅವರೇ ತಮ್ಮ ಸ್ಥಾನ ತ್ಯಜಿಸುವ ಸಾಧ್ಯತೆ ಇದೆ. ಇದರ ಬೆನ್ನಲ್ಲೇ ಪ್ರದೇಶ ಕಾಂಗ್ರೆಸ್‌ನಲ್ಲಿ ನಾಯಕತ್ವಕ್ಕಾಗಿ ಬಣ ರಾಜಕೀಯ ಸಭೆಗಳು ಗೌಪ್ಯವಾಗಿ ಆರಂಭಗೊಂಡಿವೆ.

ಪರಿಶಿಷ್ಟ ಜಾತಿ ಮತ್ತು ವರ್ಗಕ್ಕೆ ಸೇರಿದ ಸಚಿವರುಗಳು ಈಗಾಗಲೇ ಸಮಾಜ ಕಲ್ಯಾಣ ಸಚಿವ ಹೆಚ್.ಸಿ. ಮಹದೇವಪ್ಪ ನಿವಾಸದಲ್ಲಿ ಸಭೆ ನಡೆಸಿ, ಪರ್ಯಾಯ ನಾಯಕತ್ವ ನಮ್ಮ ಸಮುದಾಯದಲ್ಲೇ ಇರಬೇಕೆಂಬ ತೀರ್ಮಾನ ಕೈಗೊಂಡಿದ್ದಾರೆ. ಮತ್ತೊಂದೆಡೆ ವರಿಷ್ಠರು ತೆಲಂಗಾಣ ಮುಖ್ಯಮಂತ್ರಿ ರೇವಂತ ರೆಡ್ಡಿ ಮಾದರಿಯ ನಾಯಕನ ಆಯ್ಕೆಗೆ ಅನ್ವೇಷಣೆ ನಡೆಸಿದ್ದಾರೆ. ಮುಖ್ಯಮಂತ್ರಿಗಾದಿ ತಮಗೇ ಸಿಗುವುದೆಂಬ ವಿಶ್ವಾಸದಲ್ಲಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ರಾಜ್ಯ ಉಸ್ತುವಾರಿ ಹಾಗೂ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣಜೀತ್ ಸಿಂಗ್ ಸುರ್ಜೇವಾಲ ಜೊತೆ ಸಂಪರ್ಕದಲ್ಲಿದ್ದಾರೆ.



ಮಲ್ಲಿಕಾರ್ಜುನ ಖರ್ಗೆ



ಸತೀಶ್ ಜಾರಕಿಹೊಳಿ

ಆಶ್ಚರ್ಯವೆಂದರೆ ಸಿದ್ದರಾಮಯ್ಯ ಬಣದವರೆಂದೇ ಗುರುತಿಸಿಕೊಂಡಿರುವ ಪರಿಶಿಷ್ಟ ಜಾತಿ ಮತ್ತು ವರ್ಗದ ಸಚಿವರಲ್ಲಿ ಒಬ್ಬರಾದ ಜಾರಕಿಹೊಳಿ, ನಿನ್ನೆ ದಿಢೀರನೆ ದೆಹಲಿಗೆ ತೆರಳಿ ವರಿಷ್ಠರನ್ನು ಭೇಟಿ ಮಾಡಿ ಚರ್ಚೆ ನಡೆಸಿದ್ದಾರೆ. ನಿನ್ನೆ ರಾತ್ರಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರನ್ನು ಭೇಟಿ ಮಾಡಿ ಮುಖಾಮುಖಿ ಚರ್ಚೆ ನಡೆಸಿದ ಸಚಿವರು, ಇಂದು ಬೆಳಗ್ಗೆ ಎಐಸಿಸಿ ಅಧ್ಯಕ್ಷ ಖರ್ಗೆ ಅವರ ಜೊತೆ ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ಚರ್ಚಿಸಿದ್ದಾರೆ. ಬಿಜೆಪಿ ದಾಳಕ್ಕೆ ಸಿದ್ದರಾಮಯ್ಯ ಅವರನ್ನು ■ 6ನೇ ಪುಟಕ್ಕೆ

ಕೂಲಿ ಹಣದ ವಿಚಾರದಲ್ಲಿ ಘರ್ಷಣೆ; ಇಬ್ಬರು ಸಹಪಾಠಿಗಳ ಹತ್ಯೆ



ಗಿರೀಶ್

ಕುಶಾಲನಗರ, ಅ.4–ಕೂಲಿ ಹಣದ ವಿಚಾರಕ್ಕೆ ಯುವಕ ತನ್ನ ಸಹಪಾಠಿಗಳನ್ನೇ ಕೊಡಲಿಯಿಂದ ಹತ್ಯೆ ಮಾಡಿರುವ ಘಟನೆ ತಾಲೂಕಿನ ಕೂಡುಮಂಗಳೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೂಡ್ಲೂರು ಬಸವೇಶ್ವರ ಬಡಾವಣೆಯಲ್ಲಿ ಗುರುವಾರ ರಾತ್ರಿ ನಡೆದಿದೆ.

ಕೂಡ್ಲೂರು ಬಸವೇಶ್ವರ ಬಡಾವಣೆಯ ವಾರ್ಡ್ ನಂ.2ರ ನಿವಾಸಿ ಜೋಸೆಫ್ (55) ಹಾಗೂ ಸುಂದರ ನಗರ ನಿವಾಸಿ ವಸಂತ ಅಲಿಯಾಸ್ ಪುಟ್ಟ (45) ಕೊಲೆಯಾಗಿದ್ದು, ಕೊಲೆ ಆರೋಪಿ ಬಸವೇಶ್ವರ ಬಡಾವಣೆಯ ಗಿರೀಶ್ (29)ನನ್ನು ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ. ಕೊಲೆ ಆರೋಪಿ ಗಿರೀಶ್, ಜೋಸೆಫ್ ಅವರೊಂದಿಗೆ ವೆಲ್ಡಿಂಗ್ ಕೆಲಸ ಮಾಡುತ್ತಿದ್ದು, ಗುರುವಾರ ಕೆಲಸ ಮುಗಿದ ಮೇಲೆ ಗಿರೀಶ್, ವಸಂತನೊಂದಿಗೆ ಜೋಸೆಫ್ ಅವರ ಮನೆಗೆ ತೆರಳಿ ಕೆಲಸದ ಬಾಕಿ ಕೂಲಿ ಹಣ ನೀಡುವಂತೆ ಕೇಳಿದ್ದಾನೆ. ಇದೇ ವೇಳೆ ನಿನಗೆ ಯಾವುದೇ ಬಾಕಿ ಹಣ ನೀಡಬೇಕಾಗಿಲ್ಲ ಎಂದು ಜೋಸೆಫ್ ಹೇಳಿದ್ದಾರೆ. ಇದರಿಂದ ಆಕ್ರೋಶಗೊಂಡ ಗಿರೀಶ್ ಕೊಡಲಿಯಿಂದ ಏಕಾಏಕಿ ಜೋಸೆಫ್ ಮೇಲೆ ದಾಳಿ ನಡೆಸಿದ್ದಾನೆ. ಹಲ್ಲೆಯಿಂದ ತೀವ್ರ ರಕ್ತಸ್ರಾವದಿಂದ ಜೋಸೆಫ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಹಲ್ಲೆ ತಡೆಯಲು ಬಂದ ■ 6ನೇ ಪುಟಕ್ಕೆ

ಮೈಸೂರು ದಸರಾ ಉದ್ಘಾಟನಾ ಸಮಾರಂಭದಲ್ಲಿ ಮೇಳೈಸಿದ ರಾಜಕಾರಣ

ಎಲ್ಲಾ ಸೇರಿಕೊಂಡು ದಸರಾ ಪಾವಿತ್ರ್ಯತೆಗೆ ಧಕ್ಕೆ ತಂದರು...

● ವಿಧಾನಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಕಿಡಿನುಡಿ ● ಡಾ.ಹಂಪ ನಾಗರಾಜಯ್ಯರಿಂದಲೂ ರಾಜಕಾರಣದ ಪಾಠ ● ಜಿ.ಟಿ.ದೇವೇಗೌಡರೂ ಮುಡಾ ಹಗರಣದ ಫಲಾನುಭವಿ ಇರಬೇಕು; ಇಷ್ಟು ದಿನ ಮೌನವಾಗಿದ್ದೇಕೆ!

ಮೈಸೂರು, ಅ.4(ಬಿಎಲ್‌ಯು)– ಚಾಮುಂಡಿಬೆಟ್ಟದಲ್ಲಿ ನಿನ್ನೆ ನಡೆದ ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ದಸರಾ ಉದ್ಘಾಟಕರಾದ ನಾಡೋಜ ಡಾ.ಹಂಪ ನಾಗರಾಜಯ್ಯ ಸೇರಿದಂತೆ ಹಲವು ಗಣ್ಯರು ರಾಜಕೀಯ ವಿಚಾರಗಳನ್ನೇ ಹೆಚ್ಚು ಹೆಚ್ಚು ಪ್ರಸ್ತಾಪಿಸಿ, ನಾಡಹಬ್ಬ ದಸರಾದ ಪಾವಿತ್ರ್ಯತೆ ಹಾಳು ಮಾಡಿದ್ದಾರೆ ಎಂದು ವಿಧಾನ ಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನಗರದ ಜಲದರ್ಶಿನಿ ಅತಿಥಿ ಗೃಹದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದಸರಾ ಉದ್ಘಾಟನಾ ಸಮಾರಂಭದಲ್ಲಿ ನಾಡಹಬ್ಬದ ಮಹತ್ವ ಕಡಿಮೆ ಮಾಡಿರುವ ನಾಯಕರ ಈ ಧೋರಣೆಯಿಂದ ರಾಜಕಾರಣದ ಘಮಲು ಹರಡಿದೆ ಎಂದು ವಿಷಾಧಿಸಿದರು. ನಾಡಿನ ಖ್ಯಾತ ಸಾಹಿತಿ ನಾಡೋಜ ಡಾ.ಹಂಪ ನಾಗರಾಜಯ್ಯ ತಮ್ಮ ಸಾಹಿತ್ಯ ಅನುಭವದಲ್ಲಿ ದಸರಾದ ಐತಿಹಾಸಿಕ ಪರಂಪರೆ, ಸಾಂಸ್ಕೃತಿಕ ಮಹತ್ವದ ಬಗ್ಗೆ ಮಾತನಾಡದೆ ಚುನಾವಣೆ ಸೇರಿದಂತೆ ಹಲವು ರಾಜಕೀಯ ವಿಚಾರಗಳನ್ನು ಪ್ರಸ್ತಾಪ ಮಾಡಿರುವುದು ಬೇಸರ ತಂದಿದೆ ಎಂದು ವಿಶ್ವನಾಥ್ ಹೇಳಿದರು. ರಾಜಕೀಯ ವಿಚಾರಗಳೆ ಮೇಳೈಸಿದ ಕಾರಣ ದಸರಾ ಧಾರ್ಮಿಕತೆಯ ಭಕ್ತಿ–ಭಾವ, ಪರಂಪರೆಯ ಮಹತ್ವ ಮರೆಯಾಗಿದೆ. ದಸರಾ ಇತಿಹಾಸದ ಬಗ್ಗೆ ಮಾತನಾಡದ ರಾಜಕಾರಣಿಗಳು ತೀರಾ ಕೆಳಮಟ್ಟಕ್ಕೆ ಇಳಿದಿರುವುದು ಇದರಿಂದ ಸ್ಪಷ್ಟವಾಗುತ್ತದೆ. ಸಿದ್ದರಾಮಯ್ಯ ಸೇರಿದಂತೆ ಎಲ್ಲಾ ನಾಯಕರು ನಾನೇನು ತಪ್ಪು ಮಾಡಿಲ್ಲ ಎಂದು ಸ್ಪಷ್ಟನೆ ನೀಡಲು ದಸರಾ ವೇದಿಕೆಯನ್ನು ಸಮರ್ಥವಾಗಿ ಬಳಸಿಕೊಂಡಿದ್ದಾರೆ ಎಂದು ಆಪಾದಿಸಿದರು. ಈ ಸಮಾರಂಭದಲ್ಲಿ ಎಲ್ಲಾ ನಾಯಕರು ತಮ್ಮ ಬೆನ್ನು ತಾವೇ ತಟ್ಟಿಕೊಂಡರು. ದಸರಾ ಆಚರಣೆಗೆ ಮೂಲ ಕಾರಣರಾದ ಮೈಸೂರು ಮಹಾ ರಾಜರು, ಚಾಮುಂಡೇಶ್ವರಿ ದೇವಿಯ ದೈವ ಮಹಿಮೆ, ದಸರಾ ಸಂಸ್ಕೃತಿ ಮತ್ತು ಪರಂಪರೆ ■ 6ನೇ ಪುಟಕ್ಕೆ



ಪತ್ರಿಕಾಗೋಷ್ಠಿಯಲ್ಲಿ ವಿಧಾನಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್

ಮೈಸೂರನ್ನು ಕಳ್ಳರ ಸಂತೆಯಂತೆ ಬಿಂಬಿಸಿದ್ದಾರೆ

ಮುಡಾ ಹಗರಣದ ಮೂಲಕ ರಾಜಕಾರಣಿಗಳೆಲ್ಲಾ ಸೇರಿ ಮೈಸೂರು ನಗರವನ್ನು ಕಳ್ಳರ ಸಂತೆಯಂತೆ ಬಿಂಬಿಸಿದ್ದಾರೆ ಎಂದು ವಿಶ್ವನಾಥ್ ಆರೋಪಿಸಿದರು. ಶೇ.50:50 ಅನುಪಾತದಲ್ಲಿ ಹಂಚಿಕೆಯಾಗಿರುವ ಎಲ್ಲಾ ನಿವೇಶನಗಳನ್ನು ರದ್ದು ಮಾಡಬೇಕು. ಕಾನೂನು ಪಾಲಿಸದ ಹಿಂದಿನ ಆಯುಕ್ತ ದಿನೇಶ್ ಕುಮಾರ್ ಹಾಗೂ ನಟೇಶ್ ಅವರನ್ನು ಜೈಲಿಗೆ ಕಳುಹಿಸಬೇಕು ಎಂದು ಆಗ್ರಹಿಸಿದರು. ಸಿದ್ದರಾಮಯ್ಯ ಅವರ 14 ನಿವೇಶನಗಳ ಹಗರಣ ರಾಜ್ಯಭವನ, ಹೈಕೋರ್ಟ್, ಜನಪ್ರತಿನಿಧಿಗಳ ನ್ಯಾಯಾಲಯ ಸುತ್ತಿ ಬಂದಿದೆ. ಹೈಕೋರ್ಟ್ ನ್ಯಾಯಾಧೀಶರಾದ ನಾಗಪ್ರಸನ್ನ ಅವರು 194 ಪುಟಗಳ ತೀರ್ಪು ನೀಡಿದ್ದು, ವಕೀಲರಾಗಿರುವ ಸಿದ್ದರಾಮಯ್ಯ ಇದನ್ನೇಕೆ ಇನ್ನು ಓದಿಲ್ಲ ಎಂದು ಪ್ರಶ್ನಿಸಿದರು. 14 ನಿವೇಶನ ಮಂಜೂರಾತಿ ಸಂಬಂಧ ಇಡಿ ಪ್ರವೇಶ ಮಾಡುತ್ತಿದ್ದಂತೆ ಹೆದರಿದ ಸಿದ್ದರಾಮಯ್ಯ ಪತ್ನಿ ಪಾರ್ವತಿ ಭಾವನಾತ್ಮಕ ಪತ್ರ ■ 6ನೇ ಪುಟಕ್ಕೆ

ದಸರಾ ದೀಪಾಲಂಕಾರ ಸವಿಯಲು ದೇವರಾಜ ಅರಸು ರಸ್ತೆ 'ವಾಕಿಂಗ್ ಸ್ಟ್ರೀಟ್'

ವರ್ತಕರ ವಿರೋಧ

● ವಾಹನ ಸಂಚಾರ ಬಂದಾಗಿದ್ದರಿಂದ ಜನರ ಪರಿಪಾಟಲು ● ಗಲ್ಲಿ ಗಲ್ಲಿಗಳಲ್ಲಿ ಬ್ಯಾರಿಕೇಡ್ ಹಾಕಿ ಅರಸು ರಸ್ತೆಗೆ ಪ್ರವೇಶ ನಿರ್ಬಂಧಿಸಿದ್ದರಿಂದ ಜನ ಕಂಗಾಲು ● ಇತ್ತ ವ್ಯಾಪಾರವಿಲ್ಲದೆ ಬೀದಿಗಿಳಿದು ಪ್ರತಿಭಟಿಸಿದ ವರ್ತಕರು ● ಇಂದು ಡಿಸಿ ಸಭೆ ನಡೆಸಿ ಸಮಸ್ಯೆ ಇತ್ಯರ್ಥಪಡಿಸುವ ಭರವಸೆ



ದೇವರಾಜ ಅರಸು ರಸ್ತೆಯಲ್ಲಿ ಸ್ಥಳೀಯರು ಹಾಗೂ ವರ್ತಕರು ಪ್ರತಿಭಟಿಸಿದರು.

ಮೈಸೂರು, ಅ.4(ಎಸ್‌ಬಿಡಿ)– ಮೈಸೂರಿನ ಪ್ರಮುಖ ವಾಣಿಜ್ಯ ಕೇಂದ್ರವಾದ ಡಿ.ದೇವರಾಜ ಅರಸು ರಸ್ತೆಯಲ್ಲಿ ವಾಹನ ಸಂಚಾರವನ್ನು ಸಂಪೂರ್ಣವಾಗಿ ನಿಷೇಧಿಸಿ, ದೀಪಾಲಂಕಾರ ವೀಕ್ಷಣೆಗಾಗಿ 'ವಾಕಿಂಗ್ ಸ್ಟ್ರೀಟ್' ಆಗಿ ಪರಿವರ್ತಿಸಿದ ಕ್ರಮವನ್ನು ಇಲ್ಲಿನ ವರ್ತಕರು ಹಾಗೂ ಸ್ಥಳೀಯ ನಿವಾಸಿಗಳು ಖಂಡಿಸಿ, ಪ್ರತಿಭಟನೆ ನಡೆಸಿದರು.

ದಸರಾ ಮುಗಿಯುವವರೆಗೆ ಸಂಜೆ ವೇಳೆ ಡಿ.ದೇವರಾಜ ಅರಸು ರಸ್ತೆಯಲ್ಲಿ ವಾಹನ ಸಂಚಾರವನ್ನು ಸಂಪೂರ್ಣ ನಿರ್ಬಂಧಿಸಿ, ನಡೆದು ದೀಪಾಲಂಕಾರ ವೀಕ್ಷಣೆಗೆ ಅವಕಾಶ ಮಾಡಿಕೊಡಲು ಜಿಲ್ಲಾಡಳಿತ ನಿರ್ಧರಿಸಿತ್ತು. ವಾಹನ ಸಂಚಾರ ನಿರ್ಬಂಧದ ಬಗ್ಗೆ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದರು. ಅದರಂತೆ ಶುಕ್ರವಾರ ಸಂಜೆ 4 ಗಂಟೆಯಿಂದಲೇ ಅರಸು ರಸ್ತೆಯಲ್ಲಿ ನಿಲುಗಡೆ ಮಾಡಿದ್ದ ಕೆಲವು ವಾಹನಗಳನ್ನು ತೆಗೆಸಿ, ಕೆ.ಆರ್.ವೃತ್ತ, ಜೆಎಲ್‌ಬಿ ರಸ್ತೆ ಜಂಕ್ಷನ್ ಹಾಗೂ ಸಂಪರ್ಕಿಸುವ ಎಲ್ಲಾ ಅಡ್ಡ ರಸ್ತೆಗಳನ್ನು ಪೊಲೀಸರು ಬ್ಯಾರಿಕೇಡ್‌ಗಳಿಂದ ಬಂದ್ ಮಾಡಿದರು.

ಚರ್ಚಿಸಿ ಕ್ರಮ

❝ಪ್ರವಾಸಿಗರು ಹಾಗೂ ಸ್ಥಳೀಯರು ಹಾದುಹೋಗಿ ದೀಪಾಲಂಕಾರ ಕಣ್ತುಂಬಿಕೊಳ್ಳಲಿ ಎಂಬ ಉದ್ದೇಶದಿಂದ ಡಿ.ದೇವರಾಜ ಅರಸು ರಸ್ತೆಯಲ್ಲಿ ವಾಹನ ನಿಷೇಧಿಸಲಾಗಿತ್ತು. ಈ ಬಗ್ಗೆ ಆಕ್ಷೇಪ ವ್ಯಕ್ತವಾಗಿರುವ ಬಗ್ಗೆ ಮಾಹಿತಿ ಬಂದಿದೆ. ಈ ಕ್ರಮದಿಂದ ಏನು ಅನಾನುಕೂಲವಾಗಿದೆ ಎಂಬುದರ ಬಗ್ಗೆ ಪ್ರತಿಭಟಿಸಿದವರೊಂದಿಗೆ ಶನಿವಾರ ಚರ್ಚಿಸಿ, ಸೂಕ್ತ ಕ್ರಮ ವಹಿಸಲಾಗುವುದು.–ಜಿ.ಲಕ್ಷ್ಮಿಕಾಂತ ರೆಡ್ಡಿ, ಡಿಸಿ





ವಾಹನ ಸಂಚಾರ ನಿಷೇಧಿಸಿದ್ದರಿಂದ ಶುಕ್ರವಾರ ಸಂಜೆ ಬಿಕೋ ಎನ್ನುತ್ತಿದ್ದ ದೇವರಾಜ ಅರಸು ರಸ್ತೆ



ಪೊಲೀಸ್ ಅಧಿಕಾರಿಗಳೊಂದಿಗೆ ವರ್ತಕರು ಚರ್ಚಿಸುತ್ತಿರುವುದು.

ದಿಢೀರ್ ರಸ್ತೆಗಳನ್ನು ಬಂದ್ ಮಾಡಿದ್ದರಿಂದ ವಾಹನ ಸವಾರರು ಹೈರಣಾದರು. ವ್ಯಾಪಾರವಿಲ್ಲದೆ ವರ್ತಕರು ಕಂಗಾಲಾದರು. ಅರಸು ರಸ್ತೆ ಆಸುಪಾಸಿನ ನಿವಾಸಿಗಳ ಪರಿಪಾಟಲು ಹೇಳತೀರದಾಯಿತು. ಎಲ್ಲಾ ಕಡೆ ರಸ್ತೆ ಬಂದ್ ಮಾಡಿದ್ದರಿಂದ ಮನೆಗೆ ಹೋಗಲಾಗದೆ ಪರಿತಪಿಸಿದರು. ವಾಹನ ದಟ್ಟಣೆ ರಸ್ತೆಯಲ್ಲಿ ಬಳಸಿಕೊಂಡು ಬಂದರೂ ಗಲ್ಲಿಗಳಲ್ಲಿರುವ ಮನೆಗೆ ತೆರಳಲಾಗದೆ ಶಪಿಸಿದರು. ಈ ವೇಳೆ ಕೆಲವರು ಬ್ಯಾರಿಕೇಡ್ ತಳ್ಳಿ ನುಸುಳಲು ಪ್ರಯತ್ನಿಸಿದಾಗ ಪೊಲೀಸರು ತಡೆದಿದ್ದಕ್ಕೆ ಪರಸ್ಪರ ವಾಗ್ವಾದವೂ ನಡೆಯಿತು. ಎಲ್ಲಾ ರಸ್ತೆಗಳನ್ನೂ ಬಂದ್ ಮಾಡಿದರೆ ನಾವು ಮನೆಗೆ ಹೋಗುವುದು ಹೇಗೆ, ವಾಹನವನ್ನು ಎಲ್ಲಿ ನಿಲ್ಲಿಸುವುದು, ರಾತ್ರಿ 11 ಗಂಟೆವರೆಗೂ ರಸ್ತೆಯಲ್ಲೇ ಇರಬೇಕಾ ಎಂದು ಸ್ಥಳೀಯರು ಪ್ರಶ್ನಿಸಿದರೆ, ಮೇಲಧಿಕಾರಿಗಳ ಸೂಚನೆಯಂತೆ ನಾವು ಕಾರ್ಯ ನಿರ್ವಹಿಸುತ್ತಿದ್ದೇವೆ ಎಂದು ಪೊಲೀಸ್ ಸಿಬ್ಬಂದಿ ವಾದಿಸಿದರು. ರಸ್ತೆ ಬಿಕೋ ಎನ್ನುತ್ತಿದ್ದಂತೆ ವರ್ತಕರು ತಮ್ಮ ತಮ್ಮ ಮಳಿಗೆ ಮುಂದೆ ನಿಂತರು. ರಸ್ತೆಯುದ್ದಕ್ಕೂ ಇದೇ ಸ್ಥಿತಿ ನಿರ್ಮಾಣವಾಗಿತ್ತು.

ರಸ್ತೆಗಿಳಿದ ವರ್ತಕರು: ಸಂಜೆ 6 ಗಂಟೆ ನಂತರ ಪರಿಸ್ಥಿತಿ ಬಿಗಡಾಯಿಸಿತು. ವ್ಯಾಪಾರವಿಲ್ಲದೆ ಕಂಗಾಲಾಗಿದ್ದ ■ 6ನೇ ಪುಟಕ್ಕೆ

ಮೈಸೂರು ಮಿತ್ರ

ಶನಿವಾರ 5 ಅಕ್ಟೋಬರ್ 2024



ದಸರಾ ಕಳೆಗಟ್ಟಿ ಯಶಸ್ವಿಯಾಗಲಿ

ಶ್ರೀರಂಗಪಟ್ಟಣ ದಸರಾ ಉದ್ಘಾಟನೆಯಲ್ಲಿ ಶಿವರಾಜ್‌ಕುಮಾರ್ ಹಾರೈಕೆ



ಶ್ರೀರಂಗಪಟ್ಟಣ, ಅ.4– ಇವತ್ತು ದಸರಾ ಹಬ್ಬದ ಪ್ರಾರಂಭೋತ್ಸವಕ್ಕೆ ನಾವೆಲ್ಲರೂ ಬಂದಿದ್ದೇವೆ. ಇದರಲ್ಲಿ ಭಾಗವಹಿಸಿದ್ದು ಬಹಳ ಖುಷಿಯ ವಿಚಾರ ವಾಗಿದೆ. ಜೊತೆಗೆ ಹೆಮ್ಮೆಯೂ ಆಗಿದೆ. ಮೈಸೂರು ದಸರಾ ಆರಂಭವಾಗುವುದೇ ಶ್ರೀರಂಗಪಟ್ಟಣ ದಸರಾ ದಿಂದ. ದಸರಾ ಮತ್ತಷ್ಟು ಕಳೆಗಟ್ಟಿ ಯಶಸ್ವಿಗೊಳ್ಳಲಿ ಎಂದು ಕನ್ನಡ ಚಿತ್ರರಂಗದ ಖ್ಯಾತ ನಟ ಶಿವರಾಜ್‌ಕುಮಾರ್ ಹಾರೈಸಿದರು.



ಶ್ರೀರಂಗಪಟ್ಟಣದ ಕಿರಂಗೂರು ಬನ್ನಿ ಮಂಟಪದಲ್ಲಿ ಪಾರಂಪರಿಕ ಶ್ರೀರಂಗ ಪಟ್ಟಣದ ದಸರಾ ಜಂಬೂಸವಾರಿ ಮೆರವಣಿಗೆಗೆ ಅಂಬಾರಿಯೊಳಗಿದ್ದ ನಾಡದೇವತೆ ಶ್ರೀ ಚಾಮುಂಡೇಶ್ವರಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಚಾಲನೆ ನೀಡಿ ಮಾತನಾಡುತ್ತಿದ್ದರು.

ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡಿ, ಶ್ರೀರಂಗ ಪಟ್ಟಣದ ಪವಿತ್ರವಾದ ಸ್ಥಳದಲ್ಲಿ ನವಮಿ ದಸರಾ ಪೂಜೆ ನೆರವೇರಿದೆ. ನಿನ್ನೆಯಷ್ಟೇ ಚಾಮುಂಡಿ ಬೆಟ್ಟದಲ್ಲಿ ಮೈಸೂರು ದಸರಾಗೆ ಸಾಹಿತಿ ಹಂಪನಾ ಚಾಲನೆ ನೀಡಿದ್ದರು. ದಸರಾ ಇತಿಹಾಸ ಆರಂಭವಾಗಿದ್ದು, ಶ್ರೀರಂಗಪಟ್ಟಣದಲ್ಲಿ ಆ ಪರಂಪರೆ ಯನ್ನು ಉಳಿಸಿಕೊಂಡು ಹೋಗುವ ನಿಟ್ಟಿನಲ್ಲಿ ಪ್ರತಿ ವರ್ಷವೂ ದಸರಾವನ್ನು ಶ್ರೀರಂಗಪಟ್ಟಣದಲ್ಲಿ ಆಚರಿಸುತ್ತಾ ಬಂದಿದ್ದು, ನಟ ಶಿವರಾಜ್‌ಕುಮಾರ್ ಶ್ರೀರಂಗ ಪಟ್ಟಣ ದಸರಾಗೆ ಚಾಲನೆ ಕೊಟ್ಟಿದ್ದು, ಸಂತಸ ತಂದಿದೆ ಎಂದರು.



ಕಂದಾಯ ಸಚಿವ ಕೃಷ್ಣಬೈರೇಗೌಡ ಮಾತನಾಡಿ, ದಸರಾ ನೋಡಬೇಕೆಂದರೆ ಮೈಸೂರು, ಮಂಡ್ಯ, ಶ್ರೀರಂಗಪಟ್ಟಣಕ್ಕೆ ಬರಬೇಕು. ಇಷ್ಟು ಮಂದಿ ಸೇರಿ ಶ್ರೀರಂಗ ಪಟ್ಟಣದಲ್ಲಿ ನಾಡಹಬ್ಬ ಆಚರಣೆ ಮಾಡುತ್ತಿರುವುದು ಸಂತಸ ತಂದಿದೆ. ಮೈಸೂರಿಗಿಂತ ಮುಂಚೆ ಶ್ರೀರಂಗಪಟ್ಟಣ ದಸರಾ ಆರಂಭವಾಯಿತು. ವಿಜಯನಗರ ಸಾಮ್ರಾಜ್ಯದ ಆಳ್ವಿಕೆ ಸಂದರ್ಭದಲ್ಲಿ ಶ್ರೀರಂಗಪಟ್ಟಣ ದಸರಾ ಆರಂಭವಾಗಿ ಬಳಿಕ ರಾಜ ಮನೆತನ ಶ್ರೀರಂಗಪಟ್ಟಣದಿಂದ ಮೈಸೂರಿಗೆ ಸ್ಥಳಾಂತರವಾದ ಬಳಿಕ ದಸರಾವೂ ಮೈಸೂರಿಗೆ ಸ್ಥಳಾಂತರವಾಯಿತು. ಈ ನೂರಾರು ವರ್ಷದ ಇತಿಹಾಸ ಮರೆತೇ ಹೋಗಿತ್ತು ಆದರೆ ಕಳೆದ ಕೆಲ ವರ್ಷಗಳ ಹಿಂದೆ ಮತ್ತೆ ದಸರಾದ ವೈಭವ ಮರುಕಳಿ ಸಲು ಶ್ರೀರಂಗಪಟ್ಟಣದಲ್ಲಿ ದಸರಾ ಆಚರಣೆ ಮುಂದುವರೆಸಲಾಗಿದೆ ಎಂದು ಹೇಳಿದರು.

ಆರೋಗ್ಯ ಸಚಿವ ದಿನೇಶ್ ಗುಂಡೂ ರಾವ್ ಮಾತನಾಡಿ, ಅತ್ಯಂತ ಸುಂದರ ವಾಗಿ ಶ್ರೀರಂಗಪಟ್ಟಣ ದಸರಾ ಆರಂಭವಾ ಗಿದೆ. ಪ್ರಥಮ ಬಾರಿಗೆ ಈ ದಸರಾವನ್ನು ನಾನು ನೋಡುತ್ತಿದ್ದು, ಶ್ರೀರಂಗಪಟ್ಟಣ ದಲ್ಲಿ ಉತ್ಸಾಹದಿಂದ ದಸರಾ ಆಚರಣೆ ಯಾಗುತ್ತಿದೆ. ನಮ್ಮ ನಾಡಿನ ಹಬ್ಬವಾ ಗಿದೆ. ಇದು ಧಾರ್ಮಿಕವಲ್ಲ, ಸಾಂಸ್ಕೃತಿಕ ಹಾಗೂ ಐತಿಹಾಸಿಕ ಹಬ್ಬವಾಗಿದ್ದು, ಈ ಪರಂಪರೆಯನ್ನು ಜಾತಿ, ಧರ್ಮ ಮೀರಿ ಸೌಹಾರ್ದತೆ ಯಿಂದ ನಡೆಸಿ ಕೊಂಡು ಹೋಗ ಬೇಕೆಂದು ಕರೆ ನೀಡಿದರು. ಈ ಸಂದರ್ಭದಲ್ಲಿ ಶಾಸಕ ಹಾಗೂ ಶ್ರೀ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಅಧ್ಯಕ್ಷ ಎ.ಬಿ.ರಮೇಶ್ ಬಾಬು ಬಂಡಿ ಸಿದ್ದೇಗೌಡ, ಶಾಸಕರಾದ ಪಿ.ರವಿ ಕುಮಾರ್ ಗಣಿಗ, ದರ್ಶನ್ ಪುಟ್ಟಣ್ಣಯ್ಯ, ಜಿಲ್ಲಾಧಿಕಾರಿ ಡಾ. ಕುಮಾರ, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಎಡಿಜಿ ಡಾ.ಹೆಚ್. ಎಲ್.ನಾಗರಾಜು, ಮಾಜಿ ಶಾಸಕಿ ವಿಜಯಲಕ್ಷ್ಮಮ್ಮ ಬಂಡಿಸಿದ್ದೇ ಗೌಡ ಸೇರಿದಂತೆ ಹಲವರು ಉಪಸ್ಥಿತರಿದ್ದರು.







ನಿಗದಿತವಲ್ಲದ ಸ್ಥಳದಲ್ಲಿ ಪ್ರಾರ್ಥನೆ ವದಂತಿ

ಅವಕಾಶ ನೀಡದಂತೆ ಹಿಂದೂಪರ ಸಂಘಟನೆಗಳ ಆಕ್ರೋಶ



ಭಜರಂಗದಳದ ಕಾರ್ಯಕರ್ತರು ಮತ್ತು ಹಿಂದೂಪರ ಸಂಘಟನೆಯ ಕಾರ್ಯಕರ್ತರು ಭಾರತೀನಗರದಲ್ಲಿ ಜಮಾಯಿಸಿರುವುದು.



- ಬಿಗಿ ಪೊಲೀಸ್ ಬಂದೋಬಸ್ತ್
- ಕೆಲಕಾಲ ಬಿಗುವಿನ ವಾತಾವರಣ

ಭಾರತೀನಗರ, ಅ.4– ಮುಸ್ಲಿಂ ಬಾಂಧವರು ನಿಗಧಿತವಲ್ಲದ ಸ್ಥಳದಲ್ಲಿ ಪ್ರಾರ್ಥನೆ ಸಲ್ಲಿಸಲು ಬರುತ್ತಾರೆ ಎಂಬ ಮಾಹಿತಿ ಮೇರೆಗೆ ಪಟ್ಟಣದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾ ಗಿತ್ತಲ್ಲದೆ, ಪ್ರಾರ್ಥನೆಗೆ ಅವಕಾಶ ನೀಡದಂತೆ ಮತ್ತೊಂದು ಬಣ ವಿರೋಧ ವ್ಯಕ್ತಪಡಿಸಿದ್ದರಿಂದ ಕೆಲಕಾಲ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು.

ಜಿಲ್ಲೆಯ ವಿವಿಧೆಡೆಗಳಿಂದ ಮುಸ್ಲಿಂ ಬಾಂಧವರು ಪ್ರಾರ್ಥನೆ ಮಾಡಲು ಭಾರತೀನಗರಕ್ಕೆ ಆಗಮಿಸುತ್ತಿದ್ದು, ಇದನ್ನು ತಡೆ ಯಲು ಹಿಂದೂಪರ ಸಂಘಟನೆಯ ಯುವಕರು ಸಿದ್ಧವಾಗುತ್ತಿರುವ ವಿಷಯ ತಿಳಿದು ಪೊಲೀಸರು ಬಂದೋಬಸ್ತ್ ಮಾಡಿದ್ದರು.

ಕಳೆದ ಶುಕ್ರವಾರ ಭಾರತೀನಗರದ ಮೆಳ್ಳಹಳ್ಳಿ 5ನೇ ನಂಬರ್ ಸೈಟ್‌ನಲ್ಲಿ ರುವ ನಿವಾಸಿಯೊಬ್ಬರ ಮನೆಯಲ್ಲಿ 150ಕ್ಕೂ ಹೆಚ್ಚು ಮಂದಿ ನಮಾಜ್ ಮಾಡಲು ಬಂದಿದ್ದರು. ಇದನ್ನು ಕಂಡ ಹಿಂದೂಪರ ಸಂಘಟನೆಯ ಕಾರ್ಯ ಕರ್ತರು ಮತ್ತು ಯುವಕರು ಪೊಲೀಸ್ ವರಿಷ್ಠಾಧಿಕಾರಿಗೆ ವಿಷಯ ಮುಟ್ಟಿಸಿದ್ದರು. ಕೆ.ಎಂ.ದೊಡ್ಡಿ ಮತ್ತು ಮದ್ದೂರು ಪೊಲೀಸ್ ಠಾಣೆಯ ಪೊಲೀಸರು ಸ್ಥಳಕ್ಕೆ ಆಗಮಿಸಿ ಪ್ರಾರ್ಥನೆ ಮಾಡುತ್ತಿದ್ದವರನ್ನು ವಾಪಸ್ ಕಳುಹಿಸಿದ್ದರು. ಈ ಹಿನ್ನೆಲೆಯಲ್ಲಿ ಶುಕ್ರವಾರವೂ ಸಹ ಜಿಲ್ಲೆಯ ವಿವಿಧ ಭಾಗ ಗಳಿಂದ ಮುಸ್ಲಿಂ ಬಾಂಧವರು ಆಗಮಿಸ ಬಹುದೆಂಬ ಮಾಹಿತಿ ಹಿನ್ನೆಲೆಯಲ್ಲಿ 100ಕ್ಕೂ ಹೆಚ್ಚು ಮಂದಿ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಿ ಬೆಳಗ್ಗೆ ಯಿಂದ ಸಂಜೆಯವರೆಗೂ ಸಾರ್ವಜನಿಕರ ಗುಂಪು ಸೇರದಂತೆ ಎಚ್ಚರ ವಹಿಸಿದ್ದರು.

ಇದುವರೆಗೂ ಯಾವುದೇ ರೀತಿಯ ಸಂಘರ್ಷಗಳಾಗಲಿ, ಗಲಭೆಯಾಗಲಿ ನಡೆದಿಲ್ಲ. ಪೊಲೀಸ್ ಇಲಾಖೆಯ ಮುನ್ನೆಚ್ಚರಿಕೆಯಿಂದ ಯಾವುದೇ ಘಟನೆಗಳು ಸಂಭವಿಸಿಲ್ಲ. ಮಧ್ಯಾಹ್ನದ ವೇಳೆಗೆ ಸ್ಥಳಕ್ಕೆ ಆಗಮಿಸಿದ ಬಿಜೆಪಿ ಮುಖಂಡ ಎಸ್.ಪಿ. ಸ್ವಾಮಿ ಮುಸ್ಲಿಂ ಜನಾಂಗದವರಿಗೆ ನಮಾಜ್‌ಗಾಗಲಿ, ಮಸೀದಿ ನಿರ್ಮಿಸುವುದಕ್ಕಾಗಲಿ ಅವಕಾಶ ನೀಡದಂತೆ ಭಾರತೀನಗರ ಗ್ರಾಪಂ ಎದುರು ರಾಜ್ಯ ಸರ್ಕಾರ, ಜಿಲ್ಲಾಡಳಿತ, ಪೊಲೀಸ್ ಇಲಾಖೆ ಅವರಿಗೆ ಆಯಾಯಾ ಇಲಾಖೆಯ ಮುಖ್ಯಸ್ಥರಾದ ಉಪತಹಶೀಲ್ದಾರ್ ಶಿವಲಿಂಗಯ್ಯ, ಪೊಲೀಸ್ ಇನ್ಸ್‌ಪೆಕ್ಟರ್ ಆನಂದ್, ಹಾಗೂ ಗ್ರಾ.ಪಂ ಅಧ್ಯಕ್ಷೆ ಸೌಭಾಗ್ಯ ರಾಮಣ್ಣ ಅವರಿಗೆ ಸಾರ್ವಜನಿಕರ ಸಹಿವುಳ್ಳ ಮನವಿ ಪತ್ರವನ್ನು ಸಲ್ಲಿಸಿದರು.

ಈ ಸಂದರ್ಭದಲ್ಲಿ ಹಿಂದೂಪರ ಸಂಘಟನೆಯ ಸಾವಿರಾರು ಮುಖಂಡರು, ಯುವಕರು, ಸಾರ್ವಜನಿಕರು ಸೇರಿದ್ದರು. ಈ ಹಿನ್ನೆಲೆಯಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ವೆಂಕಟೇಗೌಡ, ಶಿವಕುಮಾರ್, ಶ್ರೀಧರ್, ಆನಂದ್‌ರರು ಸಂಜೆಯವರೆವಿಗೂ ಕಟ್ಟೆಚ್ಚರ ವಹಿಸಿದ್ದರು. ಇದೇ ವೇಳೆ ಮುಖಂಡರಾದ ಕರಡಕೆರೆ ಹನುಮಂತೇಗೌಡ, ಆಲಭುಜನಹಳ್ಳಿ ಹೇಮರಾಜು, ಅಣ್ಣೂರು ನವೀನ್, ಮನೋಹರ್, ಮೆಣಸಗೆರೆ ಗಿರೀಶ್, ಕೆ.ಟಿ. ಸುರೇಶ್, ವಿನು, ವಿಜಯ್‌ಕುಮಾರ್, ಮೆಡಿಕಲ್ ಗಿರೀಶ್, ಕಂಟ್ರಾಕ್ಟರ್ ಗಿರಿ, ಸುರೇಶ್, ಮನು, ಸೇರಿದಂತೆ ಹಿಂದುಪರ ಸಂಘಟನೆಯ ಕಾರ್ಯಕರ್ತರು ಇದ್ದರು.

ಅ.5,ಮೂಡಲಪಾಯ ಯಕ್ಷಗಾನ ಪ್ರಸಂಗಗಳ ಪ್ರದರ್ಶನ

ಮಂಡ್ಯ,ಅ.4– ಕರ್ನಾಟಕ ಮೂಡಲಪಾಯ ಯಕ್ಷಗಾನ ಪರಿಷತ್ತು, ಜಿಲ್ಲಾ ಭಾರತ್ ಸ್ಕೌಟ್ಸ್ & ಗೈಡ್ಸ್, ಸಾರ್ವಜನಿಕ ಶಿಕ್ಷಣ ಇಲಾಖೆ, ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸಂಘದ ಸಂಯುಕ್ತಾಶ್ರಯದಲ್ಲಿ ಜಟಾಯು ಮೋಕ್ಷ ಹಾಗೂ ತ್ರಿಪುರ ಸಂಹಾರ ಎಂಬ ಮೂಡಲಪಾಯ ಯಕ್ಷಗಾನ ಪ್ರಸಂಗಗಳ ಪ್ರದರ್ಶನವನ್ನು ಅ.5ರ ಸಂಜೆ 4 ಗಂಟೆಗೆ ನಗರದ ವಿವೇಕಾನಂದ ರಂಗಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಜಯಪ್ರಕಾಶ್‌ಗೌಡ ತಿಳಿಸಿದರು. ಸದರಿ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಭಾರತ್ ಸ್ಕೌಟ್ಸ್ & ಗೈಡ್ಸ್‌ನ ಮುಖ್ಯ ಆಯುಕ್ತರು, ಮಾಜಿ ಮಂತ್ರಿಗಳಾದ ಪಿ.ಜಿ.ಆರ್.ಸಿಂಧ್ಯಾ ಉದ್ಘಾಟಿಸಲಿದ್ದು, ಕರ್ನಾಟಕ ಜಲಸಾರಿಗೆ ಇಲಾಖೆಗೆ ಸಿಇಓ ಜಯರಾಮ್ ರಾಯಪುರ ಅಧ್ಯಕ್ಷತೆ ವಹಿಸುವರು. ಡಿಸಿ ಡಾ.ಕುಮಾರ ಮತ್ತು ಜಿಪಂ ಸಿಇಓ ಶೇಖ್ ತನ್ವೀರ್ ಆಸಿಫ್ ಅವರು ಪ್ರಮಾಣ ಪತ್ರ ವಿತರಣೆ ಮಾಡಲಿದ್ದಾರೆ.


ನಿಧನ



ಪೂಜಾರಿ ನಾಗಣ್ಣ

ಕೆ.ಆರ್.ಪೇಟೆ, ಅ.4– ತಾಲೂಕಿನ ಅಗ್ರಹಾರಬಾಚಹಳ್ಳಿ ಗ್ರಾಮದ ಮುಖಂಡ ಪೂಜಾರಿ ನಾಗಣ್ಣ(60) ಶುಕ್ರವಾರ ನಿಧನ ಹೊಂದಿದ್ದಾರೆ. ಮೃತರು ಪತ್ನಿ ಗ್ರಾಪಂ ಮಾಜಿ ಸದಸ್ಯೆ ಸಾವಿತ್ರಮ್ಮ, ಪುತ್ರಿ ವರಲಕ್ಷ್ಮೀ, ಪುತ್ರ ಕೀರ್ತಿರಾಜ್ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಶುಕ್ರವಾರ ಮಧ್ಯಾಹ್ನ ಅಗ್ರಹಾರಬಾಚಹಳ್ಳಿ ಗ್ರಾಮದಲ್ಲಿ ನಡೆಯಿತು.

ಶಿವಸ್ವಾಮಿ



ಕೆ.ಆರ್.ಪೇಟೆ, ಅ.4– ತಾಲೂಕಿನ ವೀರಶೈವ ಸಮಾಜದ ಹಿರಿಯ ಮುಖಂಡರು ಹಾಗೂ ನಿವೃತ್ತ ಶಾಲಾ ತನಿಖಾಧಿಕಾರಿ ಶಿವಸ್ವಾಮಿ (80) ಅವರು ಕೆ.ಆರ್.ಪೇಟೆ ಪಟ್ಟಣದ ಸುಭಾಷ್‌ನಗರದ ತಮ್ಮ ನಿವಾಸದಲ್ಲಿ ನಿಧನ ಹೊಂದಿದ್ದಾರೆ. ಮೃತರು ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯ ಕ್ರಿಯೆಯು ಪಟ್ಟಣದ ವೀರಶೈವ ರುದ್ರಭೂಮಿಯಲ್ಲಿ ಶುಕ್ರವಾರ ಸಂಜೆ ನಡೆಯಿತು.

ಐದನೇ ಪುಟದಿಂದ

ದೇವರಾಜ ಅರಸು ರಸ್ತೆ 'ವಾಕಿಂಗ್ ಸ್ಟ್ರೀಟ್' ವರ್ತಕರ ವಿರೋಧ

ವರ್ತಕರು ಹಾಗೂ ಮನೆಗೆ ಹೋಗಲಾಗದೆ ರೋಸಿ ಹೋಗಿದ್ದ ಸ್ಥಳೀಯರು ರಸ್ತೆಗಿಳಿದರು. ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ಸುತ್ತುವರಿದು ವಾಹನ ನಿಷೇದಿಸಿದ ಕ್ರಮವನ್ನು ಪ್ರಶ್ನಿಸಿದರು. ಈ ಕ್ರಮದ ಉದ್ದೇಶವನ್ನು ಮನವರಿಕೆ ಮಾಡಿಕೊಡುವ ಪೊಲೀಸರ ಪ್ರಯತ್ನ ಫಲಿಸಲಿಲ್ಲ. ವಾಹನ ನಿಷೇದಿಸಿದರೆ ವ್ಯಾಪಾರ ಶೂನ್ಯವಾಗುತ್ತದೆ. ಅಲ್ಲದೆ ದೀಪಾಲಂಕಾರ ನೋಡಲು ಎಷ್ಟು ಜನ ನಡೆದು ಬರುತ್ತಾರೆ. ಜನರ ದಸರಾ ಎಂದು ಜನ ಸಂಚಾರಕ್ಕೆ ಅಡ್ಡಿಪಡಿಸಿದರೆ ಪ್ರಯೋಜನವೇನು ಎಂದು ಪ್ರಶ್ನಿಸಿದರು. ಇನ್ಸ್‌ಪೆಕ್ಟರ್‌ಗಳಿಂದ ಮಾಹಿತಿ ತಿಳಿದ ಎಸಿಪಿ ಶಾಂತಮಲ್ಲಪ್ಪ ಸ್ಥಳಕ್ಕೆ ದೌಡಾಯಿಸಿ, ಯಾರಿಗೂ ತೊಂದರೆ ಮಾಡಬೇಕೆಂಬ ಉದ್ದೇಶವಿಲ್ಲ. ವಾಹನ ಜಂಗುಳಿ ಇಲ್ಲದೆ ಪ್ರಶಾಂತವಾಗಿ ದೀಪಾಲಂಕಾರ ವೀಕ್ಷಿಸಲು ಅನುವು ಮಾಡಿಕೊಡುವ ನಿಟ್ಟಿನಲ್ಲಿ ಈ ಕ್ರಮ ವಹಿಸಲಾಗಿದೆ ಎಂದು ಮನವರಿಕೆ ಮಾಡಿಕೊಡಲು ಪ್ರಯತ್ನಿಸಿದರಾದರೂ ವರ್ತಕರು ಹಾಗೂ ಸ್ಥಳೀಯರು ತಮ್ಮ ವಾದ ಮುಂದುವರೆಸಿದ್ದರು.

ಮಳಿಗೆಗಳ ಬಂದ್: ಗ್ರಾಹಕರಿಲ್ಲದೆ ಬೇಸರಗೊಂಡಿದ್ದ ಹಲವು ವರ್ತಕರು ತಮ್ಮ ಮಳಿಗೆಯನ್ನು ಬಂದ್ ಮಾಡಿದರು. ರಾತ್ರಿ 7.30ರ ವೇಳೆಗೆ ಅರಸು ರಸ್ತೆಯಲ್ಲಿನ ಅರ್ಧದಷ್ಟು ಮಳಿಗೆಗಳು ಮುಚ್ಚಿದ್ದವು. ಮಳಿಗೆಗೆ ಲಕ್ಷಾಂತರ ರೂ. ಬಾಡಿಗೆ ಕಟ್ಟಬೇಕು. ಹೀಗೆ ರಸ್ತೆ ಬಂದ್ ಮಾಡಿದರೆ ಹೇಗೆ ವ್ಯಾಪಾರವಾಗುತ್ತದೆ?. ದೂರದಲ್ಲಿ ವಾಹನ ನಿಲ್ಲಿಸಿ ಯಾವ ಗ್ರಾಹಕರು ಅಂಗಡಿಗೆ ಬರುತ್ತಾರೆ? ಎಂದು ಅವಲತ್ತುಕೊಂಡರು.

ಸ್ಥಳೀಯರ ಪ್ರತಿಭಟನೆ: ಅತ್ತ ವರ್ತಕರು ಹಾಗೂ ಸ್ಥಳೀಯರು ಪೊಲೀಸ್ ಅಧಿಕಾರಿಗಳೊಂದಿಗೆ ಚರ್ಚಿಸುತ್ತಿದ್ದ ವೇಳೆಯೇ ಸ್ಥಳೀಯರ ಗುಂಪೊಂದು ಸ್ಕೂಟರ್ ಎತ್ತಿಕೊಂಡು ಘೋಷಣೆ ಕೂಗುತ್ತಾ ಕೆ.ಆರ್.ವೃತ್ತದ ಕಡೆಗೆ ಧಾವಿಸುತ್ತಿದ್ದರು. ಪೊಲೀಸರು ತಡೆದಾಗ ಅಲ್ಲಿಯೇ ಸ್ಕೂಟರ್ ನಿಲ್ಲಿಸಿ, ಪ್ರತಿಭಟನೆ ನಡೆಸಿದರು. ಜಿಲ್ಲಾಡಳಿತದ ಕ್ರಮದಿಂದ ಸ್ಥಳೀಯರಿಗೆ ತುಂಬಾ ತೊಂದರೆಯಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿ, ಕೂಡಲೇ ವಾಹನ ಸಂಚಾರ ನಿಷೇಧ ತೆರವುಗೊಳಿಸುವಂತೆ ಆಗ್ರಹಿಸಿದರು. ಪ್ರತಿಭಟನಾಕಾರರೊಂದಿಗೆ ಮಾತನಾಡಿದ ಎಸಿಪಿಗಳಾದ ಶಾಂತಮಲ್ಲಪ್ಪ ಹಾಗೂ ಸ್ನೇಹ ರಾಜ್, ನಿಮ್ಮ ಅಭಿಪ್ರಾಯವನ್ನು ನಮ್ಮ ಆಯುಕ್ತರು ಹಾಗೂ ಜಿಲ್ಲಾಧಿಕಾರಿಗಳ ಗಮನಕ್ಕೆ ತರಲಾಗಿದೆ. ಈ ಬಗ್ಗೆ ನಿಮ್ಮೊಂದಿಗೆ ನಾಳೆ ಚರ್ಚಿಸಿ, ಯಾರಿಗೂ ಸಮಸ್ಯೆಯಾಗದಂತೆ ಕ್ರಮ ವಹಿಸುವುದಾಗಿ ತಿಳಿಸಿದ್ದಾರೆ. ದಸರಾ ವೇಳೆ ಹೀಗೆ ಗುಂಪುಗೂಡಿದರೆ ತೊಂದರೆಯಾಗುತ್ತದೆ ಎಂದು ಮನವರಿಕೆ ಮಾಡಿಕೊಟ್ಟಿದ್ದರಿಂದ ಪ್ರತಿಭಟನೆಯನ್ನು ಕೈಬಿಟ್ಟರು.

ಅಕ್ಕಪಕ್ಕದ ರಸ್ತೆಯಲ್ಲೂ ಹೈರಾಣ: ಅರಸು ರಸ್ತೆ ಸಂಪರ್ಕಿಸುವ ಎಲ್ಲಾ ರಸ್ತೆಗಳಲ್ಲೂ ಬ್ಯಾರಿಕೇಡ್ ಬಳಿ ವಾಹನ ನಿಲ್ಲಿಸಿಕೊಂಡು, ಯಾವ ಕಡೆಗೆ ಹೋಗುವುದೆಂದು ತಿಳಿಯದೆ ಜನ ಪರಿತಪಿಸಿದರು. ಅಲ್ಲದೆ ಅರಸು ರಸ್ತೆಯಲ್ಲಿ ವಾಹನ ಸಂಚಾರ ನಿರ್ಬಂಧಿಸಿದ್ದರಿಂದ ವಿನೋಬಾ ರಸ್ತೆ, ಧನ್ವಂತ್ರಿ ರಸ್ತೆ, ಜೆಎಲ್‌ಬಿ ರಸ್ತೆ, ನಾರಾಯಣಶಾಸ್ತ್ರಿ ರಸ್ತೆ, ಕೃಷ್ಣವಿಲಾಸ ರಸ್ತೆ ಸೇರಿದಂತೆ ಹಲವು ರಸ್ತೆಗಳಲ್ಲಿ ವಾಹನ ದಟ್ಟಣೆ ವಿಪರೀತವಾಗಿದ್ದರಿಂದ ಪ್ರಯಾಣಿಕರು ಹೈರಾಣಾದರು. ಹಾಗೆಯೇ ಸಾವಿರಾರು ಮಂದಿ ಅರಸು ರಸ್ತೆಯಲ್ಲಿ ಓಡಾಡಿ, ತಮ್ಮ ಮೊಬೈಲ್‌ನಲ್ಲಿ ದೀಪಾಲಂಕಾರ ಸವಿದರು. ಯುವಕ–ಯುವತಿಯರು ಫೋಟೋ ಶೂಟ್ ಮಾಡಿ, ಸಂಭ್ರಮಿಸಿದರು. ರಸ್ತೆ ಬದಿಯಲ್ಲಿದ್ದ ಬಲೂನ್ ಇನ್ನಿತರ ಆಟಿಕೆ ವ್ಯಾಪಾರಿಗಳಿಗೂ ಅಲ್ಪ–ಸ್ವಲ್ಪ ವ್ಯಾಪಾರವಾಯಿತು. ಕೆಲ ವರ್ತಕರ ಹಾಗೂ ಸಾರ್ವಜನಿಕರ ಕಾರುಗಳು ರಸ್ತೆ ಬದಿಯಲ್ಲೇ ನಿಂತಿದ್ದವು.

ಹೋರಾಟದ ಎಚ್ಚರಿಕೆ: ಮೈಸೂರು ನಗರದ ಹೃದಯಭಾಗದಲ್ಲಿರುವ ದೇವರಾಜ ಅರಸು ರಸ್ತೆ ಹಾಗೂ ಸಂಪರ್ಕಿಸುವ ಎಲ್ಲಾ ಅಡ್ಡ ರಸ್ತೆಗಳಿಗೂ ಬ್ಯಾರಿಕೇಡ್ ಹಾಕಿ ತೊಂದರೆ ಕೊಡುತ್ತಿರುವ ಜಿಲ್ಲಾಡಳಿತ ಕೂಡಲೇ ಎಚ್ಚೆತ್ತುಕೊಳ್ಳಬೇಕು. ಇಲ್ಲವಾದರೆ ನಾಳೆ ಈ ವ್ಯವಸ್ಥೆ ವಿರುದ್ಧ ಮೈಸೂರಿನ ಜನ ಬೀದಿಗಿಳಿದು ಹೋರಾಟ ಮಾಡಬೇಕಾಗುತ್ತದೆ. ಸಂಚಾರ ನಿರ್ವಹಣೆ ದೃಷ್ಟಿಯಿಂದಲೂ ದೇವರಾಜ ಅರಸು ರಸ್ತೆ ಪ್ರಮುಖವಾದುದು. ಅಲ್ಲದೆ ಹೀಗೆ ಬಂದ್ ಮಾಡಿದರೆ ವರ್ತಕರು ಹಾಗೂ ಸ್ಥಳೀಯ ನಿವಾಸಿಗಳ ಗತಿಯೇನು? ವಾಹನ ಸಂಚಾರ ನಿಷೇದ ಮಾತ್ರವಲ್ಲ ಸ್ಥಳೀಯ ಜನರ ಸಂಚಾರಕ್ಕೆ ನಿರ್ಬಂಧ ಹಾಕಿದಂತಾಗಿದೆ. ಹಾಗಾಗಿ ಜಿಲ್ಲಾಡಳಿತ ಈ ನೂತನ ವ್ಯವಸ್ಥೆಯನ್ನು ಹಿಂಪಡೆದು, ಎಂದಿನಂತೆ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಬೇಕು ಎಂದು ಮಾಜಿ ಕಾರ್ಪೊರೇಟರ್ ಪ್ರಶಾಂತ್ ಗೌಡ ಮನವಿ ಮಾಡಿದ್ದಾರೆ.

ದಟ್ಟಣೆಯಲ್ಲಿ ಸಿಲುಕಿದ ಆಂಬುಲೆನ್ಸ್



ಜೆಎಲ್‌ಬಿ ರಸ್ತೆಯಲ್ಲಿ ಮುಡಾ ಕಡೆಯಿಂದ ಬಂದ ಆಂಬುಲೆನ್ಸ್ ದೇವರಾಜ ಅರಸು ರಸ್ತೆ ಜಂಕ್ಷನ್‌ನಲ್ಲಿ ಸಿಲುಕಿಕೊಂಡಿತು. ವಿಪರೀತ ವಾಹನ ದಟ್ಟಣೆ ಇದ್ದ ಕಾರಣ ಅಲ್ಲಿದ್ದ ಪೊಲೀಸರೂ ಅಸಹಾಯಕರಾಗಿದ್ದರು. ವಾಕಿಟಾಕಿ ಮೂಲಕ ಮುಂದಿನ ಜಂಕ್ಷನ್‌ನಲ್ಲಿರುವ ಸಿಬ್ಬಂದಿಗೆ ಮಾಹಿತಿ ನೀಡಿದರೂ ಪ್ರಯೋಜವಾಗಲಿಲ್ಲ. ಕೊನೆಗೆ ಹರಸಾಹಸ ಪಟ್ಟು ಅರಸು ರಸ್ತೆಯಲ್ಲಿ ಆಂಬುಲೆನ್ಸ್ ಸಂಚಾರಕ್ಕೆ ಅನುವು ಮಾಡಿಕೊಡಲಾಯಿತು. ಆದರೆ ಸುತ್ತಮುತ್ತಲಿನ ಎಲ್ಲಾ ರಸ್ತೆಗಳಲ್ಲೂ ವಾಹನ ದಟ್ಟಣೆ ಇದ್ದ ಕಾರಣ ಆಂಬುಲೆನ್ಸ್ ಸಂಚಾರಕ್ಕೆ ತೀವ್ರ ಅಡ್ಡಿಯಾಯಿತು. ಅದರೊಳಗಿದ್ದ ರೋಗಿಗೆ ಯಾವುದೇ ಅಪಾಯವಾಗದಿದ್ದರೆ ಸಾಕು ಎಂದು ಅಲ್ಲಿದ್ದ ಜನ ಪ್ರಾರ್ಥಿಸಿದರು.

ಅರಮನೆ ಸುತ್ತಲಿನ ಅರ್ಧ ರಸ್ತೆ ಬಂದ್!



ಪ್ರತಿ ವರ್ಷ ಅರಮನೆ ಸುತ್ತ ಏಕಮುಖ ಸಂಚಾರ ವ್ಯವಸ್ಥೆ ಮಾಡಲಾಗುತ್ತಿತ್ತು. ಆದರೆ ಈ ಬಾರಿ ನಗರಪಾಲಿಕೆ ಬಳಿಯ ಬಿ.ರಾಚಯ್ಯ ವೃತ್ತ ಹಾಗೂ ಗನ್‌ಹೌಸ್ ವೃತ್ತದಿಂದ ಜಯಚಾಮರಾಜೇಂದ್ರ ವೃತ್ತ(ಹಾರ್ಡಿಂಜ್ ಸರ್ಕಲ್)ದವರೆಗೆ ವಾಹನ ಸಂಚಾರವನ್ನೇ ನಿಷೇಧಿಸಿ, ಜನ ಸಂಚಾರಕ್ಕೆ ಮಾತ್ರ ಅವಕಾಶ ನೀಡಲಾಗಿದೆ. ಇದರಿಂದ ಉಳಿದ ರಸ್ತೆಗಳಲ್ಲಿ ವಾಹನ ಸಂಚಾರ ಅದ್ವಾನವಾಗಿದೆ. ವಾಹನ ನಿಲುಗಡೆಗೆ ಸ್ಥಳಾವಕಾಶ ಇಲ್ಲದಿರುವುದರಿಂದ ಈ ಕ್ರಮದ ಉದ್ದೇಶವೂ ಸಾಕಾರವಾಗುತ್ತಿಲ್ಲ. ವಾಹನ ನಿರ್ಬಂಧಿತ ರಸ್ತೆಯಲ್ಲಿ ಜನರೂ ವಿರಳ ಎಂದು ಹಲವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಅದ್ಧೂರಿಯಾಗಿ ನಡೆದ ಜಂಬೂ ಸವಾರಿ

ಧಾರ್ಮಿಕ ಪೂಜಾಕೈಂಕರ್ಯಗಳನ್ನು ಸಾಂಪ್ರದಾಯಿಕವಾಗಿ ನೆರವೇರಿಸಲಾಯಿತು.

ಪಂಚ ಲೋಹದ ಚಾಮುಂಡೇಶ್ವರಿ ದೇವಿ ಉತ್ಸವಮೂರ್ತಿ ಪ್ರಮುಖ ಆಕರ್ಷಣೆ. ಪಟ್ಟಣದ ಚಾಮುಂಡೇಶ್ವರಿ ದೇವಾಲಯದಲ್ಲಿನ 5 ಅಡಿ ಎತ್ತರವಿರುವ ದೇವಿಯ ವಿಗ್ರಹ 250 ಕೆ.ಜಿ ತೂಕವಿದೆ.

ಸಿಂಹ ವಾಹಿನಿಯಾಗಿದ್ದ ಚಾಮುಂಡೇಶ್ವರಿ ದೇವಿಯ ಮೂರ್ತಿ ಎಂಟು ಕೈಗಳನ್ನು (ಅಷ್ಟಭುಜೆ) ಹೊಂದಿದ್ದು, ಕೈಗಳಲ್ಲಿ ಶಂಖ, ಚಕ್ರ, ಗದೆ, ಧನಸ್ಸು, ಭೂಸುಂಡಿ, ತ್ರಿಶೂಲ, ಕಮಲ ಹಿಡಿದು, ಮತ್ತೊಂದು ಕೈಯಲ್ಲಿ ಭಕ್ತರಿಗೆ ಅಭಯ ನೀಡುತ್ತಿರುವುದು ವಿಗ್ರಹದ ವಿಶೇಷತೆಯಾಗಿದೆ.

ಯುಮಗಂಡ ಕಾಲದಲ್ಲಿ ಜಂಬೂ ಸವಾರಿಗೆ ಚಾಲನೆ: ಮಧ್ಯಾಹ್ನ 2.30 ರಿಂದ 3 ಗಂಟೆಗೆ ಸಲ್ಲುವ ಮಕರ ಶುಭ ಲಗ್ನದಲ್ಲಿ ಅಂಬಾರಿ ಮೆರವಣಿಗೆಗೆ ಚಾಲನೆ ನೀಡಲು ಸಮಯ ನಿಗದಿಯಾಗಿತ್ತು. ಆದರೆ ನಟ ಶಿವರಾಜ್‌ಕುಮಾರ್ ತಡವಾಗಿ 3.20ಕ್ಕೆ ಆಗಮಿಸಿದ್ದರಿಂದ 3.30ಕ್ಕೆ ತಾಯಿ ಚಾಮುಂಡೇಶ್ವರಿ ಉತ್ಸವ ಹೊತ್ತ ಅಂಬಾರಿಗೆ ಯುಮಗಂಡ ಕಾಲದಲ್ಲಿ ಪುಷ್ಪಾರ್ಚನೆ ಮಾಡಬೇಕಾದ ಪರಿಸ್ಥಿತಿ ನಿರ್ಮಾಣವಾಯಿತು. ಈ ವೇಳೆ ಸಚಿವರು, ಶಾಸಕರು, ಅರ್ಚಕರು, ಅಧಿಕಾರಿ ಹಾಗೂ ಸಾರ್ವಜನಿಕರು ಕಾದು ಕೂರುವಂತಾಯಿತು.

ಗಮನಸೆಳೆದ ಕಲಾತಂಡಗಳು: ಮೆರವಣಿಗೆಯಲ್ಲಿ ಪೂರ್ಣ ಕುಂಭ ಕಳಸ ಹೊತ್ತ ಮಹಿಳೆಯರು, ಡೊಳ್ಳು ಕುಣಿತ, ವೀರಗಾಸೆ, ಪೂಜಾ ಕುಣಿತ, ನಾದಸ್ವರ, ಮಹಿಳಾ ಕುಣಿತ, ಸೋಮನ ಕುಣಿತ, ಒನಕೆ ಕುಣಿತ, ನಂದಿಧ್ವಜ ಕುಣಿತ ಸೇರಿದಂತೆ ಸಾಂಸ್ಕೃತಿಕ ಕಲಾತಂಡಗಳೊಂದಿಗೆ ಆರಂಭಗೊಂಡ ದಸರಾ ಮೆರವಣಿಗೆ ಕಿರಂಗೂರು ಗ್ರಾಮದ ಮೂಲಕ ಬೆಂಗಳೂರು–ಮೈಸೂರು ಹೆದ್ದಾರಿಯ ಬಾಬುರಾಯನಕೊಪ್ಪಲು ಮಾರ್ಗವಾಗಿ ಶ್ರೀರಂಗಪಟ್ಟಣದ ಕುವೆಂಪು ವೃತ್ತಕ್ಕೆ ಆಗಮಿಸಿ ಪಟ್ಟಣದ ಪ್ರವೇಶಧ್ವಾರ ಕೋಟೆ ಮೂಲಕ ಪಟ್ಟಣದ ರಾಜಬೀದಿಯನ್ನು ಪ್ರವೇಶಿಸಿ ಶ್ರೀರಂಗನಾಥ ದೇವಾಲಯದ ಆವರಣದಲ್ಲಿ ಅಂತ್ಯಗೊಂಡಿತು. ರಥಸಾಗುವ ಪಟ್ಟಣದ ರಾಜ ಬೀದಿಗಳನ್ನು ತಳಿರು ತೋರಣ ಸೇರಿದಂತೆ ವಿದ್ಯುತ್ ದೀಪಾಲಂಕಾರದಿಂದ ಅಲಂಕರಿಸಲಾಗಿತ್ತು.

ಬನ್ನಿ, ನೀವೇ ಮುಖ್ಯಮಂತ್ರಿಯಾಗಿ...!

ಬಲಿ ಮಾಡುವುದು ಬೇಡ ಎಂದಿರುವ ಸತೀಶ್, ಒಂದು ವೇಳೆ ಕಾನೂನಿನ ಚೌಕಟ್ಟಿಗೆ ಸಿಲುಕಿದರೆ ಅಂತಹ ಸನ್ನಿವೇಶದಲ್ಲಿ ಪರಿಶಿಷ್ಟ ಸಮುದಾಯಕ್ಕೆ ಅವಕಾಶ ಮಾಡಿ. ಇಂತಹ ಸಂದರ್ಭದಲ್ಲಿ ನೀವೇ ಕರ್ನಾಟಕ ರಾಜಕೀಯಕ್ಕೆ ಹಿಂತಿರುಗಿ ಮುಖ್ಯಮಂತ್ರಿ ಸ್ಥಾನ ವಹಿಸಿಕೊಳ್ಳಿ, ಇದರಿಂದ ಕಾಂಗ್ರೆಸ್‌ಗೆ ಮತ್ತಷ್ಟು ಬಲ ಬರಲಿದೆ, ಜೊತೆಗೆ ಪೂರ್ಣಾವಧಿ ಸರ್ಕಾರ ನೀಡಲು ಸಾಧ್ಯ ಎಂದು ಮನವಿ ಮಾಡಿಕೊಂಡಿದ್ದಾರೆ. ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗುವುದು ಸಿದ್ದರಾಮಯ್ಯ ಬಣಕ್ಕೆ ಇಷ್ಟವಿಲ್ಲ. ಹೀಗಾಗಿ ಎಐಸಿಸಿ ಅಧ್ಯಕ್ಷರ ಮೊರೆ ಹೋಗಿದ್ದಾರೆ. ಖರ್ಗೆ ನಾಯಕತ್ವ ವಹಿಸಿಕೊಳ್ಳುವುದಾದರೆ ಎಐಸಿಸಿ ಹಾಗೂ ರಾಜ್ಯದ ಯಾವುದೇ ಮುಖಂಡರಿಂದ ವಿರೋಧ ಇರುವುದಿಲ್ಲ.

ಇದನ್ನು ಮನಗಂಡು ಸಿದ್ದರಾಮಯ್ಯ ಬಣ ಪೂರ್ವ ಯೋಜಿತವಾಗಿ ಖರ್ಗೆ ಅವರನ್ನು ಮುಂದು ಮಾಡಲು ಹೊರಟಿದೆ. ಸತೀಶ್, ದೆಹಲಿಯಲ್ಲಿ ಖರ್ಗೆ ಅವರನ್ನು ಭೇಟಿ ಮಾಡಿದ ಬೆನ್ನಲ್ಲೇ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಆಶ್ಚರ್ಯಕರ ಹೇಳಿಕೆ ನೀಡಿದ್ದಾರೆ.

ದಸರಾ ಪಾವಿತ್ರ್ಯತೆಗೆ ಧಕ್ಕೆ ತಂದರು...

ಸೇರಿದಂತೆ ಯಾವ ವಿಚಾರ ವನ್ನು ಪ್ರಸ್ತಾಪಿಸದೆ ರಾಜಕಾರಣಕ್ಕಾಗಿ ದಸರಾ ವೇದಿಕೆಯನ್ನು ಸೀಮಿತಗೊಳಿ ಸಿದರು. ಇದರಿಂದ ಇಡೀ ಕಾರ್ಯ ಕ್ರಮ ನೀರಸವಾಗಿತ್ತು, ಜೊತೆಗೆ ದಸರಾ ಆರಂಭದಲ್ಲೆ ಜನರಿಗೆ ಬೇಸರ ತರಿಸಿತು ಎಂದು ದೂರಿದರು. ಲೋಕಾಯುಕ್ತದಲ್ಲಿ ಎಫ್‌ಐಆರ್ ದಾಖಲಾದ ಹಿನ್ನೆಲೆ ಯಲ್ಲಿ ಸಿದ್ದರಾಮಯ್ಯ ರಾಜೀನಾಮೆ ನೀಡುವ ಅಗತ್ಯವಿಲ್ಲ ಎಂದು ಹೇಳಿರುವ ಶಾಸಕ ಜಿ.ಟಿ.ದೇವೇಗೌಡರ ಅಬ್ಬರದ ಹೊಗಳಿಕೆ ಭಾಷಣವೇ ಬೂಟಾಟಿಕೆ ಎನಿಸಿದೆ. ಇದನ್ನೆಲ್ಲಾ ನೋಡಿದರೆ ಜಿ.ಟಿ.ದೇವೇಗೌಡರು ಮುಡಾ ಹಗರಣದ ಫಲಾನುಭವಿ ಎನ್ನಿಸುತ್ತದೆ. ಜಿ.ಟಿ.ದೇವೇಗೌಡರಿಗೆ ಮುಡಾದಲ್ಲಿ ಶೇಕಡ 50:50 ಅನುಪಾತದ ನಿವೇಶನಗಳಿವೆ ಎಂಬ ಮಾತುಗಳು ಅವರ ಈ ಮಾತುಗಳಿಂದ ಸಾಬೀತಾಗಿದೆ ಎಂದು ತಿಳಿಸಿದರು. ಜಿ.ಟಿ.ದೇವೇಗೌಡರು ಸಿದ್ದರಾಮಯ್ಯ ಅವರನ್ನು ಇಷ್ಟರ ಮಟ್ಟಿಗೆ ಹೊಗಳುವ ಅವಶ್ಯಕತೆ ಇರಲಿಲ್ಲ. ಇಷ್ಟು ದಿನ ಮೌನವಾಗಿದ್ದ, ಜಿ.ಟಿ.ದೇವೇಗೌಡರು ಈಗ ಈ ಮಟ್ಟಿಗೆ ಅಬ್ಬರಿಸಿದ್ದೇಕೆ ಎಂಬ ಸಹಜ ಕುತೂಹಲ ಮೂಡಿದೆ. ಈ ಮೂಲಕ ದಸರಾ ಉದ್ಘಾಟನಾ ಸಮಾರಂಭದಲ್ಲಿ ಅವರು ಆಡಿದ ಮಾತುಗಳು ಗೊಂದಲ ಮಯವಾಗಿದೆ. ನಿಜವಾಗಿಯೂ ಇದಕ್ಕೆ ಕ್ಷಮೆ ಇಲ್ಲ ಎಂದು ವಿಶ್ವನಾಥ್ ಅಭಿಪ್ರಾಯಪಟ್ಟರು.

ಜೆಡಿಎಸ್ ಪಕ್ಷದಲ್ಲಿ ಒಕ್ಕಲಿಗರೇ ತುಂಬಿದ್ದಾರೆ ಎಂಬ ಆರೋಪದ ಹಿನ್ನೆಲೆಯಲ್ಲಿ ಶಾಸಕಾಂಗ ಪಕ್ಷದ ನಾಯಕನ ಸ್ಥಾನದಲ್ಲಿ ಬೇರೆ ಸಮುದಾಯದವರನ್ನು ಕೂರಿಸಿದ್ದಾರೆ. ಆ ಸ್ಥಾನ ತನಗೆ ಸಿಗಲಿಲ್ಲವೆಂದು ತಮ್ಮ ಭಿನ್ನಾಭಿಪ್ರಾಯ ವ್ಯಕ್ತಪಡಿಸಲು ದಸರಾ ಉದ್ಘಾಟನಾ ಸಮಾರಂಭವನ್ನು ಜಿ.ಟಿ.ದೇವೇಗೌಡರು ಬಳಸಿಕೊಂಡಿರುವುದು ಸರಿಯಲ್ಲ. ಸಿದ್ದರಾಮಯ್ಯ ಅವರನ್ನು ಓಲೈಸಲು ಇಂತಹ ಚಮಚಾಗಿರಿ ಭಾಷಣ ಮಾಡಿರುವುದು ಸುತಾರಾಂ ಯಾರೂ ಒಪ್ಪುವಂತದ್ದಲ್ಲ ಎಂದು ವಿಶ್ವನಾಥ್ ಅಭಿಪ್ರಾಯಪಟ್ಟರು.

ಬಿಂಬಿಸಿದ್ದಾರೆ

ಬರೆದು ನಿವೇಶನ ವಾಪಸು ನೀಡಿದ್ದಾರೆ. ಅಪರಾಧ ಒಪ್ಪಿಕೊಂಡ ತಕ್ಷಣ ಅಪರಾಧ ಹೋಗುವುದಿಲ್ಲ ಎಂದು ವಿಶ್ವನಾಥ್ ಅಭಿಪ್ರಾಯಪಟ್ಟರು. ಪಾರ್ವತಿ ಅವರು ನಿವೇಶನ ವಾಪಸ್ ಕೊಟ್ಟ ಕೂಡಲೇ ಮುಡಾ ಆಯುಕ್ತರು ಅದನ್ನು ಹೇಗೆ ರದ್ದು ಮಾಡಿದರು ಎಂದು ಪ್ರಶ್ನಿಸಿದ ವಿಶ್ವನಾಥ್, ಸದ್ಯ ಈ ಪ್ರಕರಣದ ಬಗ್ಗೆ ತನಿಖೆ ನಡೆಯು ತ್ತಿರುವಾಗ, ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿರುವಾಗ ಅದು ಹೇಗೆ 14 ನಿವೇಶನಗಳ ಖಾತೆ ರದ್ದು ಮಾಡುತ್ತಾರೆ. ಮುಡಾ ಆಯುಕ್ತರಿಗೆ ಈ ಅಧಿಕಾರ ನಿಮಗೆ ಕೊಟ್ಟವರು ಯಾರು ಎಂದು ಮರು ಪ್ರಶ್ನಿಸಿದರು. ಸಿದ್ದರಾಮಯ್ಯ ಇಂತಹ ಕ್ರಮಗಳ ಕೈಗೊಳ್ಳುವ ಮೂಲಕ ಕಾನೂನು ವ್ಯವಸ್ಥೆಯನ್ನು ಬುಡಮೇಲು ಮಾಡುತ್ತಿದ್ದಾರೆ. ಇನ್ನು ಅಧಿಕಾರಿಗಳು ಕಾನೂನು ವ್ಯಾಪ್ತಿಯಲ್ಲಿ ಕ್ರಮ ಕೈಗೊಳ್ಳುವುದನ್ನು ಬಿಟ್ಟು ಸಿದ್ದರಾಮಯ್ಯ ಅವರ ಮಾತುಗಳೇ ತಮಗೆ ವೇದವಾಕ್ಯ ಎಂದು ಪರಿಗಣಿಸಿ ಅವರ ಆದೇಶ ಪಾಲಿಸುತ್ತಿದ್ದಾರೆ ಎಂದು ಆರೋಪಿಸಿದರು. ಸಿದ್ದರಾಮಯ್ಯ ಅವರ ಮುಡಾ ಹಗರಣದಿಂದ ಸರ್ಕಾರದ ಹಂತದಲ್ಲಿ ಬಹಳಷ್ಟು ಹಣ ಪೋಲಾಗಿದೆ. ದೆಹಲಿ ಯಿಂದ ವಾದ ಮಾಡಲು ಬಂದಿದ್ದ ಅಭಿಷೇಕ್ ಮನು ಸಿಂಘ್ವಿ ಅವರಿಗೆ ಸರ್ಕಾರದಿಂದಲೇ ಹಣ ಕೊಟ್ಟಿರುತ್ತಾರೆ. ಇದೆಲ್ಲಾ ನಿಜವಾಗಿಯೂ ಸಿದ್ದರಾಮಯ್ಯ ಅವರಿಗೆ ಅವಶ್ಯಕತೆ ಇತ್ತೆ ಎಂದು ವಿಶ್ವನಾಥ್ ಪ್ರಶ್ನಿಸಿದರು.


ಇಬ್ಬರು ಸಹಪಾಠಿಗಳ ಹತ್ಯೆ

ವಸಂತನ ತಲೆಗೆ ಕೊಡಲಿಯಿಂದ ಹೊಡೆದಿದ್ದಾನೆ. ತೀವ್ರವಾಗಿ ಗಾಯಗೊಂಡ ವಸಂತನನ್ನು ಮಡಿಕೇರಿ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ.

ಇಬ್ಬರನ್ನು ಹತ್ಯೆಗೈದ ಆರೋಪಿ ಗಿರೀಶನನ್ನು ಸೋಮವಾರಪೇಟೆ ಉಪ ಪೊಲೀಸ್ ಅಧೀಕ್ಷಕ ಆರ್.ವಿ.ಗಂಗಾಧರಪ್ಪ ಹಾಗೂ ಸಿಪಿಐ ಕೆ.ರಾಜೇಶ್ ನೇತೃತ್ವದಲ್ಲಿ ಕಪ್ರಕರಣ ದಾಖಲಿಸಿಕೊಂಡಿದ್ದಾರೆ.

ಯೋಗದಸರಾ, ಯೋಗನೃತ್ಯ ರೂಪಕಕ್ಕೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಚಾಲನೆ

ವಿಶ್ವಕ್ಕೆ ಯೋಗದ ಮಹತ್ವ ಸಾರಿದವರೇ ಸ್ವಾಮಿ ವಿವೇಕಾನಂದರು




ಮಹಿಳೆಯರು ವಿವಿಧ ಯೋಗಾಸನದ ಭಂಗಿಗಳನ್ನು ಪ್ರದರ್ಶಿಸಿದರು. ಮತ್ತೊಂದು ಚಿತ್ರದಲ್ಲಿ ಯೋಗದಸರಾ ಹಾಗೂ ಯೋಗ ನೃತ್ಯ ರೂಪಕ ಮನರಂಜನಾ ಕಾರ್ಯಕ್ರಮದಲ್ಲಿ ಸಭಿಕರದೊಂದಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ಕುಳಿತಿರುವ ದೃಶ್ಯ.

ಮೈಸೂರು, ಅ.4(ಎಸ್‌ಪಿಎನ್)– ವಿದೇಶಗಳಲ್ಲಿ ಭಾರತೀಯ ಪರಂಪರೆಯ ಮೂಲವಾದ ಯೋಗವನ್ನು ವಿಶ್ವಕ್ಕೆ ಪರಿಚಯಿಸಿದ ಕೀರ್ತಿ ಸ್ವಾಮಿ ವಿವೇಕಾನಂದರಿಗೆ ಸಲ್ಲುತ್ತದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಅಭಿಪ್ರಾಯಪಟ್ಟರು.

ಮೈಸೂರು ಜೆ.ಕೆ.ಮೈದಾನದ ಮೈಸೂರು ಮೆಡಿಕಲ್ ಕಾಲೇಜು ಅಲ್ಯೂಮಿನಿ ಅಸೋಸಿಯೇಷನ್ ಸಭಾಂಗಣದಲ್ಲಿ ನಾಡ ಹಬ್ಬ ಮೈಸೂರು ದಸರಾ ಮಹೋತ್ಸವದ ಯೋಗದಸರಾ ಉಪಸಮಿತಿ ವತಿಯಿಂದ ಆಯೋಜಿಸಿದ್ದ ಯೋಗದಸರಾ ಹಾಗೂ ಯೋಗ ನೃತ್ಯ ರೂಪಕ ಮನರಂಜನಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಸಮಾಜದ ಸ್ವಾಸ್ಥ್ಯವನ್ನು ಕಾಪಾಡಲು ಯೋಗ ಪರಿಣಾಮಕಾರಿಯಾಗಿದ್ದು, ಇದಕ್ಕೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವಿಶೇಷ ಗಮನ ನೀಡುತ್ತಿದೆ. ಪ್ರತಿನಿತ್ಯ ಕುಟುಂಬದ ಎಲ್ಲಾ ಸದಸ್ಯರು ಯೋಗಾಸನವನ್ನು ಅಭ್ಯಾಸ ಮಾಡುವ ಮೂಲಕ ತಮ್ಮ ರೋಗ ಮುಕ್ತ ಜೀವನಕ್ಕೆ ಆದ್ಯತೆ ನೀಡಬೇಕು. ಅಲ್ಲದೆ ಸಮಾಜದ ಒಳ್ಳೆಯ ಆರೋಗ್ಯ, ಶಿಸ್ತುಬದ್ಧ ಜೀವನಕ್ಕೆ ಜನರು ಹೆಚ್ಚಿನ ಗಮನ ನೀಡಬೇಕು. ಇದರಿಂದ ಯಾವುದೇ ರೋಗಕ್ಕೆ ತುತ್ತಾಗುವ ಸಂದರ್ಭ ಬರುವುದಿಲ್ಲ ಎಂದರು.

ರಕ್ತದೊತ್ತಡ, ಹೃದಯ ಸಂಬಂಧಿ ಕಾಯಿಲೆಗಳು, ಕ್ಯಾನ್ಸರ್, ಕಿಡ್ನಿ ಸಮಸ್ಯೆ, ಮಾನಸಿಕ ಖಿನ್ನತೆ ಸೇರಿದಂತೆ ಎಲ್ಲಾ ರೋಗಕ್ಕೂ ಯೋಗಾಸನ ರಾಮಬಾಣವಿದ್ದಂತೆ. ಅಲ್ಲದೆ ದೇಹ, ಮನಸ್ಸಿನ ಆರೋಗ್ಯಕ್ಕೆ ಯೋಗ ಸಹಕಾರಿ. ಮೈಸೂರಿನ ಯೋಗ ದಸರಾವನ್ನು ವೀಕ್ಷಿಸಲು ನಾನಾ ದೇಶಗಳಿಂದ ಲಕ್ಷಾಂತರ ಮಂದಿ ವಿದೇಶಿ ಪ್ರವಾಸಿಗರು ಆಗಮಿಸುತ್ತಿದ್ದು, ಈ ಹಿನ್ನಲೆಯಲ್ಲಿ ಮೈಸೂರಿಗೆ ದಿನಗಳಲ್ಲಿ 'ಯೋಗನಗರಿ ಮೈಸೂರು' ವಿಶೇಷಣ ಸೇರ್ಪಡೆಗೊಂಡರೆ ಆಶ್ಚರ್ಯಪಡಬೇಕಿಲ್ಲ ಎಂದರು.

ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಪ್ರತಿವರ್ಷ ಆಚರಿಸಲ್ಪಡುವ 'ನಾಡಹಬ್ಬ ದಸರಾ ಮಹೋತ್ಸವ' ನಮ್ಮ ನಾಡಿನ ಪ್ರತಿಷ್ಠೆ ಹಾಗೂ ಹಿರಿಮೆಯನ್ನು ಹೆಚ್ಚುವ ಹಬ್ಬ. ಇಂತಹ ಹಬ್ಬದಲ್ಲಿ ಆಚರಣೆಗೊಳ್ಳುವ ಯೋಗದಸರಾ ವಿಶ್ವದಲ್ಲೇ ಪ್ರಖ್ಯಾತಿ ಪಡೆಯಲಿದೆ. ನವರಾತ್ರಿಯ 9 ದಿನಗಳಲ್ಲಿ ನಡೆಯುವ ಸಾಂಸ್ಕೃತಿಕ ಕ್ರೀಡೆ, ವಿಭಿನ್ನ–ವೈಶಿಷ್ಟ್ಯ ಪೂರ್ಣವಾದ ಕಾರ್ಯಕ್ರಮಗಳನ್ನು ಲಕ್ಷಾಂತರ ಜನರು ಪ್ರತಿನಿತ್ಯ ಕಣ್ತುಂಬಿಕೊಳ್ಳುತ್ತಿರುವುದು ಸಂತೋಷದ ಸಂಗತಿ. ದೇಶ, ವಿದೇಶಗಳಿಂದ ವಿದ್ಯಾರ್ಥಿಗಳು ಯೋಗದ ಕಲಿಕೆಗೆ ಮೈಸೂರಿಗೆ ಬರುತ್ತಿದ್ದಾರೆ. ಯೋಗವು ನಮ್ಮ ಶರೀರ, ಮನಸ್ಸು ಮತ್ತು ಆಧ್ಯಾತ್ಮಿಕ ಬೆಳವಣಿಗೆಗೆ ಪರಿಣಾಮಕಾರಿಯಾಗಿದ್ದು, ದೇಹ ಮತ್ತು ಮನಸ್ಸನ್ನು ನಿಯಂತ್ರಣ ಮಾಡಲು ಸಹಕಾರಿಯಾಗಲಿದೆ ಎಂದರು.

ಸಾಧಕರಿಗೆ 'ಯೋಗ ಸಿರಿ' ಪ್ರಶಸ್ತಿ ಪ್ರಧಾನ: ಯೋಗದಲ್ಲಿ ಸಾಧಕರಾದ ದೇವರಾಜು, ಯೋಗಕುಮಾರ್, ಸತ್ಯವತಿ, ಚಂದ್ರು, ಬಾಪು ಆರ್. ನಚಿಕೇತ ಹಾಗೂ ರಮಾ ಆರ್. ಕೆದ್ಲಾಯ ಅವರಿಗೆ ಯೋಗಸಿರಿ–2024 ಪ್ರಶಸ್ತಿ ನೀಡಿ ಗೌರವಿಸಲಾಯಿತು.

ವಿಶೇಷಚೇತನರ ಯೋಗನೃತ್ಯ ಆಕರ್ಷಣೆ: ಭೂಮಿ ಮೇಲಿನ ನಕ್ಷತ್ರವೆನ್ನುವ ವಿಶೇಷ ಚೇತನ ಮಕ್ಕಳು ಯೋಗದ ವಿವಿಧ ಭಂಗಿಗಳನ್ನು ನೃತ್ಯದ ಮೂಲಕ ಪ್ರದರ್ಶನ ಮಾಡಿ ಪ್ರೇಕ್ಷಕರ ಗಮನಸೆಳೆದರು. ಅಲ್ಲದೆ, ಗಾಯಕಿ ಭೂಮಿ ಸೇನಾ ಜೋಷಿ ಸಿರಿ ಕಂಠದಲ್ಲಿ ಮೂಡಿಬಂದ 'ಮಿಲೆ ಸುರ್ ಮೇರಾ ತುಮಾರಾ...' ಹಾಡಿಗೆ ಮೈಸೂರಿನ ವಿಸ್ಡಂ ವಿಶೇಷ ಚೇತನ ಶಾಲೆಯ ಮಕ್ಕಳು ಪ್ರದರ್ಶನ ಮಾಡಿದ ಯೋಗ ನೃತ್ಯಕ್ಕೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸೇರಿದಂತೆ ನೆರೆದಿದ್ದವರು ಈ ನೃತ್ಯಕ್ಕೆ ಮನಸೋತರು.

ಅಲ್ಲದೆ, ಸ್ವಾಮಿ ವಿವೇಕಾನಂದ ಯೋಗ ಸಮಿತಿ ಮಹಿಳೆಯರು ಕ್ಲಿಷ್ಟಕರ ಆಸನವನ್ನು ನೃತ್ಯದಲ್ಲಿ ಜೋಡಿಸಿ ಯೋಗ ಮತ್ತು ನೃತ್ಯವು ಮನುಷ್ಯನ ಆರೋಗ್ಯಕ್ಕೆ ಒಳ್ಳೆಯದು ಎಂಬ ಸಂದೇಶ ಸಾರಿದರು. ಇದರ ಜೊತೆಗೆ ಆಯುಷ್ ಆಯುರ್ವೇದಿಕ್ ವಿದ್ಯಾರ್ಥಿನಿಯರು ಯೋಗ ರೂಪದಲ್ಲಿ ನಾಟ್ಯ ಸ್ವರೂಪಿ ಶಿವನ ವಿವಿಧ ಭಂಗಿಗಳನ್ನು ಪ್ರದರ್ಶಿಸಿ ಎಲ್ಲರ ಗಮನ ಸೆಳೆದರು. ವಿಜಯನಗರದ ಎಎಂ ಹಂಪಿಯ ಯೋಗಾ ವಿದ್ಯಾರ್ಥಿಗಳು ಕೂಡ ವಿವಿಧ ಯೋಗಾಸನ ಭಂಗಿಗಳನ್ನು ಪ್ರದರ್ಶಿಸಿ, ಪ್ರೇಕ್ಷಕರ ಮೆಚ್ಚುಗೆಗಳಿಸಿದರು.

17ಕ್ಕೂ ಹೆಚ್ಚು ಶಾಲಾ–ಕಾಲೇಜು, ಸಂಸ್ಥೆಗಳು ಭಾಗಿ: ಮೈಸೂರು ಯೋಗ ಒಕ್ಕೂಟ, ಡೆಲ್ಲಿ ಪಬ್ಲಿಕ್ ಸ್ಕೂಲ್ ವಿದ್ಯಾರ್ಥಿಗಳು, ಮೈಸೂರು ಮೆಡಿಕಲ್ ಕಾಲೇಜು, ಜೆಎಸ್‌ಎಸ್ ಆಯುರ್ವೇದ ಕಾಲೇಜು, ಜೆಎಸ್‌ಎಸ್ ಯೋಗ ಫೌಂಡೇಶನ್, ಭಾರತ ಸ್ವಾಭಿಮಾನ ಟ್ರಸ್, ಕೆಂಪಸಿದ್ದನಹುಂಡಿ ಆಯುಷ್ ಕಾಲೇಜು, ವೈಎಸ್‌ಎಫ್ ಯೋಗ ಸೆಂಟರ್, ಶ್ರೀ ಶಾರದಾ ಯೋಗ ಸಂಸ್ಥೆ, ಸ್ಕೂಲ್ ಆಫ್ ಆಯುರ್ವೇದಿಕ್ ಬಿಎಲ್‌ಆರ್, ಹೊಸಕೋಟೆ ಸ್ವಾಮಿ ವಿವೇಕಾನಂದ ಯೋಗ ಸಮಿತಿ, ಆಯುಷ್ ಆರೋಗ್ಯ ಮಂದಿರ್, ಹಂಪಿಯ ಎಎಂ ಸಂಸ್ಥೆ, ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ, ಉತ್ತನಹಳ್ಳಿಯ ರಮಾಬಾಯಿ ಅಂಬೇಡ್ಕರ್ ಮಹಿಳಾ ಸಂಘ, ಉತ್ತನಹಳ್ಳಿ, ಪಂಚವಳ್ಳಿ, ಬೆಲವತ್ತ ಎಎಂ ಸಂಸ್ಥೆ ಸೇರಿದಂತೆ ಇತರೆ ಸಂಘ–ಸಂಸ್ಥೆಗಳ ಯೋಗಾಪಟುಗಳು ವಿವಿಧ ಹಾಡುಗಳಿಗೆ ಹೆಜ್ಜೆ ಹಾಕಿ ಜನರ ಗಮನಸೆಳೆದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಸಂಸ್ಕೃತ ವಿದ್ಯಾಲಯದ ಕುಲಪತಿ ಡಾ.ಎಸ್ ಅಹಲ್ಯ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಲ್ಯಾಣಾಧಿಕಾರಿ ಡಾ.ಪಿ.ಸಿ ಕುಮಾರಸ್ವಾಮಿ, ಯೋಗ ದಸರಾ ಉಪ ಸಮಿತಿಯ ವಿಶೇಷಾಧಿಕಾರಿ ರಮ್ಯಾ , ಆಯುಷ್ ಇಲಾಖೆಯ ಉಪ ನಿರ್ದೇಶಕಿ ಪುಷ್ಪಾ, ಮೈಸೂರು ಯೋಗ ಅಸೋಸಿಯೇಷನ್ ಮುಖ್ಯಸ್ಥರು, ಆಯುಷ್ ಇಲಾಖೆಯ ವೈದ್ಯಾಧಿಕಾರಿಗಳು, ಸರ್ಕಾರೇತರ ಸಂಸ್ಥೆಯ ಅಧ್ಯಕ್ಷರು, ಯೋಗ ಒಕ್ಕೂಟದ ಮುಖ್ಯಸ್ಥರು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಅರಮನೆ ಆವರಣದಲ್ಲಿ ಕಂಗೊಳಿಸಿದ ರಂಗೋಲಿಗಳು



ಮೈಸೂರು, ಅ. 4(ಆರ್‌ಕೆ)– ಮೈಸೂರು ಅರಮನೆ ಮುಂದೆ ಇಂದು ಏರ್ಪಡಿಸಿದ್ದ ರಂಗೋಲಿ ಸ್ಪರ್ಧೆಯು ನೋಡುಗರ ಗಮನ ಸೆಳೆಯಿತು.

ಮಹಿಳಾ ದಸರಾ ಉಪಸಮಿತಿ ವತಿಯಿಂದ ದಸರಾ ಮಹೋತ್ಸವದ ಅಂಗವಾಗಿ ಆಯೋಜಿಸಿದ್ದ ಸ್ಪರ್ಧೆಯಲ್ಲಿ 118 ಮಂದಿ ಮಹಿಳೆಯರು ಬಣ್ಣ ಬಣ್ಣದ ಚಿತ್ತಾರ ಬಿಡಿಸಿದ್ದರು. ರಾಮಕೃಷ್ಣನಗರದ ಸಿ. ಹೇಮಾವತಿ–ಪ್ರಥಮ, ಕುರುಬಾರಹಳ್ಳಿಯ ಜಯಶ್ರೀ–ದ್ವಿತೀಯ ಹಾಗೂ ರೂಪಾನಗರದ ರೂಪಶ್ರೀ ಅವರಿಗೆ ತೃತೀಯ ಬಹುಮಾನ ಪ್ರಕಟವಾಗಿದ್ದು, ಪಾರ್ವತಿ ಸಮಾಧಾನಕರ ಬಹುಮಾನ ಪಡೆದಿದ್ದಾರೆ.

ಅಕ್ಟೋಬರ್ 8ರಂದು ಜೆ.ಕೆ. ಮೈದಾನದ ಪ್ಲಾಟಿನಂ ಜುಬಿಲಿ ಹಾಲ್‌ನಲ್ಲಿ ನಡೆಯಲಿರುವ ಮಹಿಳಾ ದಸರಾ ಕಾರ್ಯಕ್ರಮದಲ್ಲಿ ರಂಗೋಲಿ ಸ್ಪರ್ಧಾ ವಿಜೇತರಿಗೆ ಬಹುಮಾನ ನೀಡಲಾಗುವುದು. ಮಹಿಳಾ ದಸರಾ ಉಪಸಮಿತಿಯ ಪ್ರಿಯದರ್ಶಿನಿ, ಬಸವರಾಜು, ಮಂಜುನಾಥ, ಸಿಡಿಪಿಓಗಳು ಈ ವೇಳೆ ಉಪಸ್ಥಿತರಿದ್ದರು.

ಮೈಸೂರಲ್ಲಿ ಪಾರಂಪರಿಕ ಜಾವಾ ಮೋಟಾರ್ ಬೈಕ್ ಸವಾರಿ



ಮೈಸೂರು, ಅ. 4(ಆರ್‌ಕೆ)– ಮೈಸೂರಲ್ಲಿ ಇಂದು ಪಾರಂಪರಿಕ ಜಾವಾ ಮೋಟಾರ್ ಬೈಕ್ ಸವಾರಿ ನಡೆಯಿತು.

ದಸರಾ ಮಹೋತ್ಸವದ ಅಂಗವಾಗಿ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯು ಆಯೋಜಿಸಿದ್ದ ಬೈಕ್ ಸವಾರಿಯು ಪುರಭವನ ಬಳಿಯಿಂದ ಆರಂಭವಾಗಿ ದೊಡ್ಡ ಗಡಿಯಾರ, ಚಾಮರಾಜೇಂದ್ರ ವೃತ್ತ, ಅಂಬಾ ವಿಲಾಸ ಅರಮನೆ, ಕೆಆರ್ ವೃತ್ತ, ಲ್ಯಾನ್ಸ್‌ಡೌನ್, ಮೈಸೂರು ಮಹಾನಗರ ಪಾಲಿಕೆ, ಕಾಡಾ ಕಚೇರಿ, ಗನ್‌ಹೌಸ್ ಸರ್ಕಲ್, ಹಾರ್ಡಿಂಜ್ ವೃತ್ತ, ಕುಪ್ಪಣ್ಣ ಪಾರ್ಕ್, ಬ್ಯಾಂಡ್ ಹೌಸ್, ಆಡಳಿತ ತರಬೇತಿ ಸಂಸ್ಥೆ, ಲಲಿತ ಮಹಲ್ ರಸ್ತೆಯ ಕೆಎಸ್‌ಆರ್‌ಪಿ ಕಟ್ಟಡ, ಲಲಿತ ಮಹಲ್ ಪ್ಯಾಲೇಸ್ ಹೋಟೆಲ್, ಪೋಸ್ಟಲ್ ಟ್ರೈನಿಂಗ್ ಸಂಸ್ಥೆ, ವಸಂತ ಮಹಲ್ ಮೂಲಕವಾಗಿ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿರುವ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಬಳಿ ಅಂತ್ಯಗೊಂಡಿತು.

ಸುಮಾರು 150 ಮಂದಿ ಯಜ್ಡಿ ಜಾವಾ ಬೈಕ್ ಮಾಲೀಕರು, ಮೆಕ್ಯಾನಿಕ್‌ಗಳು ಬೈಕ್‌ನಲ್ಲಿ ಸವಾರಿ ಮಾಡುವ ಮೂಲಕ ಜಾವಾ ಮೋಟಾರು ಬೈಕ್‌ಗಳ ಬಗ್ಗೆ ಅರಿವು ಮೂಡಿಸುವ ಜೊತೆಗೆ ಪಾರಂಪರಿಕ ಕಟ್ಟಡಗಳನ್ನು ವೀಕ್ಷಿಸಿ ಇತಿಹಾಸ, ಹಿನ್ನೆಲೆ ತಿಳಿದುಕೊಂಡರು.

ಪಾರಂಪರಿಕ ಆಯುಕ್ತ ಎ. ದೇವರಾಜು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದ ಮುಖ್ಯಸ್ಥ ಡಾ. ಶೆಲ್ವಪಿಳ್ಳೆ ಅಯ್ಯಂಗಾರ್, ನಿವೃತ್ತ ಪ್ರಾಚೀನ ಇತಿಹಾಸ ಪ್ರಾಧ್ಯಾಪಕ ಡಾ. ಎನ್.ಎಸ್. ರಂಗರಾಜು ಹಾಗೂ ಇತಿಹಾಸ ಪ್ರಾಧ್ಯಾಪಕ ಡಾ. ಎನ್. ಸ್ವಾಮಿ ಬೈಕ್ ಸವಾರರಿಗೆ ಮೈಸೂರಿನ ಪಾರಂಪರಿಕ ಕಟ್ಟಡಗಳ ಪರಿಚಯ ಮಾಡಿದರು.

ಪ್ರಾದೇಶಿಕ ಆಯುಕ್ತ ಡಿ.ಎಸ್. ರಮೇಶ್, ಇಂದಿರಾ ಗಾಂಧಿ ರಾಷ್ಟ್ರೀಯ ಮಾನವ ಸಂಗ್ರಹಾಲಯಗಳ ಆಯುಕ್ತ ಅಮಿತ್ ಪಾಂಡೆ ಸೇರಿದಂತೆ ಹಲವು ಅಧಿಕಾರಿಗಳು ಜಾವಾ ಬೈಕ್ ಸವಾರಿ ಮಾಡಿ ಗಮನ ಸೆಳೆದರು. ಇದೇ ವೇಳೆ ಸುದೀರ್ಘ ಕಾಲ ಯಜ್ಡಿ ಜಾವಾ ಮೋಟಾರ್ ಬೈಕ್ ಬಳಸಿದ ಗ್ಲಾಡ್‌ಸ್ಟೋನ್ ವಿಲ್ಸನ್, ಅತಾವುಲ್ಲಾ ಖಾನ್, ಸುಬ್ರಹ್ಮಣ್ಯ, ಬಾಲಕೃಷ್ಣ ಹಾಗೂ ಡಾ. ರವೀನ ಚೆನ್ನಪ್ಪ ಅವರನ್ನು ಮೈಸೂರು ಪೇಟ ತೊಡಿಸಿ ಆತ್ಮೀಯವಾಗಿ ಅಭಿನಂದಿಸಲಾಯಿತು.

ನಾನಾ ಆರೋಗ್ಯ ಯೋಜನೆಯಡಿ ಲಭ್ಯವಿರುವ ಸೌಕರ್ಯಗಳ ಮಾಹಿತಿಯುಳ್ಳ ಮಳಿಗೆ ಉದ್ಘಾಟನೆ

ಮೈಸೂರು, ಅ.4(ಎಂಕೆ)– ದಸರಾ ವಸ್ತುಪ್ರದರ್ಶನ ಆವರಣದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕಾರ್ಯಕ್ರಮಗಳು, ಯೋಜನೆಗಳು, ಸವಲತ್ತು–ಸೌಲಭ್ಯಗಳ ಮಾಹಿತಿಯುಳ್ಳ (ಆರೋಗ್ಯ ಮಳಿಗೆ) ಮಳಿಗೆಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ಉದ್ಘಾಟಿಸಿದರು.



ದಸರಾ ವಸ್ತುಪ್ರದರ್ಶನ ಆವರಣದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ 'ಆರೋಗ್ಯ ಮಳಿಗೆ' ಮಳಿಗೆಯನ್ನು ಸಚಿವ ದಿನೇಶ್ ಗುಂಡೂರಾವ್ ಉದ್ಘಾಟಿಸಿದರು. ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ಮತ್ತಿತರರಿದ್ದರು.

ಬಳಿಕ ಮಳಿಗೆ ವೀಕ್ಷಿಸಿ ಮಾತನಾಡಿದ ಅವರು, ಈ ವರ್ಷ ದಸರಾ ವಸ್ತುಪ್ರದರ್ಶನ ಉತ್ತಮವಾಗಿ ಪ್ರಾರಂಭವಾಗಿದೆ. ಮಳಿಗೆಯಲ್ಲಿ ಆರೋಗ್ಯ ಇಲಾಖೆಯಿಂದ ಜನರಿಗೆ ದೊರೆಯುವ ಎಲ್ಲಾ ಕಾರ್ಯಕ್ರಮಗಳ ಮಾಹಿತಿ, ತಾಯಿ ಮತ್ತು ಮಕ್ಕಳ ಆರೋಗ್ಯದ ಬಗ್ಗೆ ಮಾಹಿತಿ ನೀಡಲಾಗುವುದು ಎಂದರು.

ಜನರ ಆರೋಗ್ಯ ವ್ಯವಸ್ಥೆ ಅನೇಕ ವಿಚಾರಗಳ ಮೇಲೆ ಅವಲಂಬಿತವಾಗಿದ್ದು, ಸದ್ಯಕ್ಕೆ ಡೆಂಗ್ಯು ನಿಯಂತ್ರಣಕ್ಕೆ ಬಂದಿದೆ. ಮುಖ್ಯವಾಗಿ ಜನರು ಜೀವನ ಶೈಲಿಯನ್ನು ಆರೋಗ್ಯಕರ ಜೀವನ ಶೈಲಿಯನ್ನಾಗಿಸಿಕೊಳ್ಳಬೇಕು. ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಿಗಳ ಕೊರತೆಯಾಗದಂತೆ ನಿಗಾ ವಹಿಸಲಾಗಿದೆ. ಮುಂದಿನ ದಿನಗಳ್ಲಿ ಎಲ್ಲಾ ಜಿಲ್ಲಾಸ್ಪತ್ರೆಗಳಿಗೂ ಎಂಆರ್‌ಐ ಬರಲಿದೆ ಎಂದು ತಿಳಿಸಿದರು.

ಸ್ಟೆಮಿ ಹೃದಯಾಘಾತ: ಡಾ.ಪುನೀತ್‌ರಾಜ್ ಕುಮಾರ್ ಹೃದಯ ಜ್ಯೋತಿ ಯೋಜನೆ (ಸ್ಟೆಮಿ ಹೃದಯಾಘಾತ) ಬಹಳ ಯಶಸ್ವಿಯಾಗಿ ನಡೆಯುತ್ತಿದೆ. ಈಗಾಗಲೇ ಎಲ್ಲಾ ಜಿಲ್ಲಾಸ್ಪತ್ರೆಗಳಲ್ಲಿ ಯೋಜನೆ ಜಾರಿಯಲ್ಲಿದ್ದು, ತಾಲೂಕು ಆಸ್ಪತ್ರೆಗಳನ್ನು ಯೋಜನೆಯಡಿ ಸೇರಿಸಿಕೊಳ್ಳಲಾಗಿದೆ. ಎದೆ ನೋವು ಅಥವಾ ಎದೆ ಭಾಗದಲ್ಲಿ ಸಮಸ್ಯೆ ಕಂಡುಬಂದಾಗ ಅದನ್ನು ಕೃತಕ ಬುದ್ಧಿಮತ್ತೆಯಿಂದ ಗುರ್ತಿಸಿ, ಅವರಿಗೆ ನಾದರೂ ಹೃದಯಾಘಾತವಾಗುವ ಸನ್ನಿವೇಶ ಇದ್ದಲ್ಲಿ ತಕ್ಷಣವೇ ಚಿಕಿತ್ಸೆ ನೀಡುವಂತಹ ಯೋಜನೆ ಇದಾಗಿದೆ. ಬಹಳ ದುಬಾರಿಯಾದ ಇಂಜೆಕ್ಷನ್ ಅನ್ನು ಉಚಿತವಾಗಿ ನೀಡಲಾಗುತ್ತದೆ. ಕಳೆದ 6 ತಿಂಗಳಲ್ಲಿ ಸುಮಾರು 1,700 ಜನರಿಗೆ ಹೃದಯ ಚಿಕಿತ್ಸೆ ಕೊಡಿಸಲಾಗಿದ್ದು, ಸುಮಾರು 75 ಜೀವಗಳನ್ನು ಉಳಿಸಲು ಸಾಧ್ಯವಾಗಿದೆ ಎಂದು ವಿವರಿಸಿದರು.

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಮೈಸೂರು ಗ್ರಾಮಾಂತರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಡಾ.ಪ್ರಸಾದ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಧಿಕಾರಿ ಡಾ.ಕುಮಾರಸ್ವಾಮಿ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ನಾಗರಾಜು, ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ಮಹಮದ್ ಸಿರಾಜ್, ಜಿಲ್ಲಾ ಕುಷ್ಠರೋಗ ನಿರ್ಮೂಲಾನಾಧಿಕಾರಿ ಡಾ.ಬೃಂದಾ, ಜಿಲ್ಲಾ ಎನ್‌ವಿಬಿಡಿಸಿ ಅಧಿಕಾರಿ ಡಾ.ಸುವರ್ಣ, ಆರ್‌ಡಿಎಸ್ ಆರ್ಟ್ ಓನ್‌ನ ಮಾಲೀಕ ರಂಗಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

ಆರೋಗ್ಯ ಮಳಿಗೆ ಆರೋಗ್ಯ ಜಾಗೃತಿ...!

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ 'ಆರೋಗ್ಯ ಮಳಿಗೆ'ಯಲ್ಲಿ ದೇಹದ ಅಂಗಾಂಗಳ ಪ್ರದರ್ಶನ, ಮೆದುಳಿನ ಆರೋಗ್ಯ, ಕ್ಯಾನ್ಸರ್ ಕುರಿತು ಜಾಗೃತಿ, ಬಾಲ್ಯ ವಿವಾಹದಿಂದಾಗುವ ಆರೋಗ್ಯ ತೊಂದರೆಗಳು, ತಾಯಿ ಮತ್ತು ಮಕ್ಕಳ ಆರೋಗ್ಯ, ಅನಿಮಿಯಾ ಸಮಸ್ಯೆ, ಸಮತೋಲನ ಆಹಾರ ಸೇವನೆ, ಅಂಗಾಂಗ ದಾನದ ಮಹತ್ವ, ಸ್ಟೆಮಿ ಹೃದಯಾಘಾತ, ರೇಬಿಸ್ ಕಾಯಿಲೆ, ಕ್ಷಯರೋಗ ಸೇರಿದಂತೆ ಸಂಪೂರ್ಣ ಆರೋಗ್ಯ ಮಾಹಿತಿಯನ್ನು ಸವಿವರವಾಗಿ ನೀಡಲಾಗಿದೆ. ಮಳಿಗೆಯಲ್ಲಿ ಪ್ರತಿನಿತ್ಯ ಇಬ್ಬರು ಆರೋಗ್ಯ ಇಲಾಖೆ ಸಿಬ್ಬಂದಿಗಳ ಕಾರ್ಯನಿರ್ವಹಿಸಲಿದ್ದು, ಭೇಟಿ ನೀಡುವ ಪ್ರವಾಸಿಗರಿಗೆ ಆರೋಗ್ಯ ಜಾಗೃತಿ ಕುರಿತು ಮಾಹಿತಿ ನೀಡಲಿದ್ದಾರೆ.



ಇಂದಿನಿಂದ ಮೈಸೂರಲ್ಲಿ ಜೆಮಿನಿ ಸರ್ಕಸ್ ಆರಂಭ

ಮೈಸೂರು, ಅ.4(ಜಿಎ)–ದಸರಾ ಮಹೋತ್ಸವದ ಅಂಗವಾಗಿ ನಜರ್‌ಬಾದ್‌ನಲ್ಲಿರುವ ಕಾರಂಜಿ ಕೆರೆ ಬಳಿ ಜೆಮಿನಿ ಸರ್ಕಸ್ ನಾಳೆ(ಅ.5)ಯಿಂದ ಆರಂಭವಾಗಲಿದೆ. ಸರ್ಕಸ್ ಪ್ಯಾನ್ಸ್ ಅಸೋಸಿಯೇಷನ್ ಅಧ್ಯಕ್ಷ ನಾಗೇಶ್ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹಾಗೂ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಜೆಮಿನಿ ಸರ್ಕಸ್ ಅನ್ನು ಉದ್ಘಾಟಿಸಲಿದ್ದು, ಶಾಸಕರಾದ ತನ್ವೀರ್ ಸೇಠ್, ಟಿ.ಎಸ್.ಶ್ರೀವತ್ಸ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು.

160 ಕಲಾವಿದರೂ ಸುಮಾರು 2 ಗಂಟೆ 30 ನಿಮಿಷ ಸರ್ಕಸ್ ಮೂಲಕ ರಂಜಿಸಲಿದ್ದು, ಪ್ರತಿದಿನ ಮಧ್ಯಾಹ್ನ 1, ಸಂಜೆ 4 ಮತ್ತು 7 ಗಂಟೆಗೆ ಸರ್ಕಸ್ ಪ್ರದರ್ಶನಗೊಳ್ಳಲಿವೆ. 150 ರೂ., 250 ರೂ. ಹಾಗೂ 300 ರೂ.ಗಳ ಪ್ರವೇಶ ದರವನ್ನು ನಿಗದಿಪಡಿಸಲಾಗಿದ್ದು, ಅ.5ರಿಂದ 30 ದಿನಗಳವರೆಗೆ ಸರ್ಕಸ್ ಅನ್ನು ಆಯೋಜಿಸಲಾಗಿದೆ ಎಂದು ತಿಳಿಸಿದರು.



ಸುದ್ದಿಗೋಷ್ಠಿಯಲ್ಲಿ ಜೆಮಿನಿ ಸರ್ಕಸ್‌ನ ಆಯೋಜಕ ಪ್ರೇಮನಾಥ್, ವ್ಯವಸ್ಥಾಪಕ ಸುರೇಶ್, ಕಾರ್ಯದರ್ಶಿ ಲೋಕೇಶ್ ಉಪಸ್ಥಿತರಿದ್ದರು.

ದೇಶ - ವಿದೇಶ

ಛತ್ತೀಸ್‌ಗಢದಲ್ಲಿ ಭಾರಿ ಎನ್‌ಕೌಂಟರ್: 36 ನಕ್ಸಲರು ಬಲಿ

ಛತ್ತೀಸ್‌ಗಢ, ಅ.4– ನಾರಾಯಣಪುರ ಮತ್ತು ದಾಂತೇವಾಡ ಪೊಲೀಸ್ ಪಡೆಗಳು ಶುಕ್ರವಾರ ನಡೆಸಿದ ಜಂಟಿ ಕಾರ್ಯಾಚರಣೆಯಲ್ಲಿ 36 ನಕ್ಸಲರನ್ನು ಹೊಡೆದುರುಳಿಸಲಾಗಿದೆ.

ನಾರಾಯಣಪುರ ಮತ್ತು ದಾಂತೇವಾಡ ಜಿಲ್ಲೆಗಳ ಗಡಿಯಲ್ಲಿರುವ ಅಬುಜ್‌ಮದ್ ಪ್ರದೇಶದ ದಟ್ಟ ಅರಣ್ಯದಲ್ಲಿ ಕನಿಷ್ಠ 36 ನಕ್ಸಲರನ್ನು ತಟಸ್ಥಗೊಳಿಸಲಾಗಿದೆ ಎನ್ನಲಾಗಿದೆ.

ನಾರಾಯಣಪುರ–ದಂತೇವಾಡ ಅಂತರ ಜಿಲ್ಲಾ ಗಡಿಯಲ್ಲಿರುವ ಅಬುಜ್‌ಮದ್ ಅರಣ್ಯದಲ್ಲಿ ಮಧ್ಯಾಹ್ನ 1 ಗಂಟೆ ಸುಮಾರಿಗೆ ಭದ್ರತಾ ಸಿಬ್ಬಂದಿಯ ಜಂಟಿ ತಂಡ ನಕ್ಸಲ್ ವಿರೋಧಿ ಕಾರ್ಯಾಚರಣೆಯಲ್ಲಿ ತೊಡಗಿದ್ದಾಗ ಗುಂಡಿನ ಚಕಮಕಿ ನಡೆಯಿತು ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಹತ್ಯೆಯಾದ ಮಾವೋವಾದಿಗಳ ದೇಹಗಳು ಮತ್ತು ಅವರ ಬಳಿ ಎಕೆ –47 ರೈಫಲ್ ಮತ್ತು ಒಂದು ಎಸ್‌ಎಲ್‌ಆರ್ (ಸೆಲ್ಫ್–ಲೋಡಿಂಗ್ ರೈಫಲ್) ಸೇರಿದಂತೆ ಹಲವು ಶಸ್ತ್ರಾಸ್ತ್ರಗಳನ್ನು ಸ್ಥಳದಿಂದ ವಶಪಡಿಸಿಕೊಳ್ಳಲಾಗಿದೆ ಎಂದು ಅಧಿಕಾರಿ ತಿಳಿಸಿದ್ದಾರೆ. ಈ ಪ್ರದೇಶದಲ್ಲಿ ಶೋಧ ಕಾರ್ಯಾಚರಣೆ ಇನ್ನೂ ನಡೆಯುತ್ತಿದೆ ಎಂದು ಅವರು ಹೇಳಿದ್ದಾರೆ.

ಬೋಟ್ ಮುಳುಗಿ 78ಕ್ಕೂ ಅಧಿಕ ಮಂದಿ ಸಾವು

ಸ್ವರ್ನ್ ಡೆಮಾಕ್ರಟಿಕ್ ರಿಪಬ್ಲಿಕ್ ಆಫ್ ಕಾಂಗೋದಲ್ಲಿ (ಡಿಆರ್‌ಸಿ) ಭೀಕರ ದೋಣಿ ಅಪಘಾತವೊಂದು ಸಂಭವಿಸಿದ್ದು, ಇದರಲ್ಲಿ ಕನಿಷ್ಠ 78 ಜನ ಸಾವನ್ನಪ್ಪಿದ್ದಾರೆ. ಮಾತ್ರವಲ್ಲ ಇನ್ನೂ ಅನೇಕ ಜನರು ಕಾಣೆಯಾಗಿದ್ದಾರೆ ಎಂದು ಅಲ್ಲಿನ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಸುಮಾರು 278 ಪ್ರಯಾಣಿಕರನ್ನು ಹೊತ್ತೊಯ್ಯುತ್ತಿದ್ದ ದೋಣಿ ಮಗುಚಿ ಬಿದ್ದ ಪರಿಣಾಮ ಈ ದುರ್ಘಟನೆ ಸಂಭವಿಸಿದೆ.

ದೋಣಿ ದಕ್ಷಿಣ ಕಿವು ಪ್ರಾಂತ್ಯದ ಮಿನೋವಾದಿಂದ ಉತ್ತರ ಕಿವು ಪ್ರಾಂತ್ಯದ ರಾಜಧಾನಿ ಗೋಮಾಗೆ ಪ್ರಯಾಣಿಸುತ್ತಿತ್ತು. ದೋಣಿ ಸರೋವರದಲ್ಲಿ ಮಗುಚಿ ಬಿದ್ದಿದೆ ಎಂದು ಎಂದು ದಕ್ಷಿಣ ಕಿವು ಗವರ್ನರ್ ಜೀನ್–ಜಾಕ್ವೆಸ್ ಪುರುಸಿ ಹೇಳಿದ್ದಾರೆ.

ಸದ್ಯದ ಮಾಹಿತಿಯ ಪ್ರಕಾರ ದೋಣಿ ಮಗುಚಿ ಸಾವನ್ನಪ್ಪಿದವರ ಸಂಖ್ಯೆ 78ಕ್ಕೆ ಏರಿಕೆಯಾಗಿದೆ ಎಂದು ಗವರ್ನರ್ ಪುರುಸಿ ಮಾಹಿತಿ ನೀಡಿದ್ದಾರೆ. ಸಾವನ್ನಪ್ಪಿರುವವರ ಮೃತದೇಹಗಳನ್ನು ಗೋಮಾದಲ್ಲಿನ ಜನರಲ್ ಆಸ್ಪತ್ರೆಯ ಶವಾಗಾರಕ್ಕೆ ಕೊಂಡೊಯ್ಯಲಾಗಿದೆ. ಇನ್ನು ದೋಣಿಯಲ್ಲಿದ್ದ ಹಲವರು ಇನ್ನೂ ಕೂಡ ಕಾಣೆಯಾಗಿದ್ದಾರೆ. ದೋಣಿಯು ಪ್ರಯಾಣಿಕರು ಮತ್ತು ಸರಕುಗಳಿಂದ ತುಂಬಿತ್ತು. ಬೃಹತ್ ಪ್ರಮಾಣದ ಅಲೆಗಳು ಎದುರಾದಾಗ ಅದು ಮುಳುಗಲು ಪ್ರಾರಂಭಿಸಿದೆ ಎಂದು ಗವರ್ನರ್ ಮಾಹಿತಿ ನೀಡಿದ್ದಾರೆ.

ಪುಣೆಯಲ್ಲಿ ಯುವತಿ ಮೇಲೆ ಮೂವರಿಂದ ಸಾಮೂಹಿಕ ಅತ್ಯಾಚಾರ

ಆಕೆಯ ಸ್ನೇಹಿತನ ಮೇಲೂ ಹಲ್ಲೆ

ಪುಣೆ: ಪುಣೆಯ ಹೊರವಲಯದಲ್ಲಿ 21 ವರ್ಷದ ಯುವತಿ ಮೇಲೆ ಮೂವರು ಅತ್ಯಾಚಾರವೆಸಗಿದ್ದು, ಆಕೆಯ ಸ್ನೇಹಿತನ ಮೇಲೂ ಹಲ್ಲೆ ನಡೆಸಲಾಗಿದೆ ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ. ಗುರುವಾರ ರಾತ್ರಿ 11 ಗಂಟೆ ಸುಮಾರಿಗೆ ಬೋಪದೇವ್ ಘರ್ ಪ್ರದೇಶದಲ್ಲಿ ಯುವತಿ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಲಾಗಿದೆ ಎಂದು ಅವರು ಹೇಳಿದ್ದಾರೆ.

ಕೊಂಡ್ವಾ ಪೊಲೀಸರ ಪ್ರಕಾರ, ಯುವತಿ ಮತ್ತು ಆಕೆಯ ಸ್ನೇಹಿತ ಗುರುವಾರ ತಡರಾತ್ರಿ ಬೋಪ್‌ದೇವ್ ಘರ್ ಪ್ರದೇಶಕ್ಕೆ ಹೋಗಿದ್ದರು. ಅಲ್ಲಿ ಮೂವರು ಅಪರಿಚಿತರು ಆಕೆಯ ಮೇಲೆ ಅತ್ಯಾಚಾರ ಎಸಗಿದ್ದಾರೆ ಎಂದು ಪುಣೆಯ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಯುವತಿ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿದ ಕಾಮುಕರನ್ನು ಪತ್ತೆಹಚ್ಚಲು ಹತ್ತು ಪೊಲೀಸ್ ತಂಡಗಳನ್ನು ರಚಿಸಲಾಗಿದೆ ಎಂದು ಅವರು ಹೇಳಿದ್ದಾರೆ.

ಪ್ರತ್ಯೇಕ ಸ್ಥಳದಲ್ಲಿ ಈ ಘಟನೆ ನಡೆದಿದ್ದು, ಆ ಮೂವರು ಯುವತಿಯ ಸ್ನೇಹಿತನ ಮೇಲೂ ಹಲ್ಲೆ ನಡೆಸಿದ್ದಾರೆ ಎಂದು ಕೊಂಢ್ವಾ ಪೊಲೀಸ್ ಠಾಣೆಯ ಮತ್ತೊಬ್ಬ ಅಧಿಕಾರಿ ತಿಳಿಸಿದ್ದಾರೆ.

ಮಿರ್ಜಾಪುರದಲ್ಲಿ ಭೀಕರ ರಸ್ತೆ ಅಪಘಾತ, 10 ಮಂದಿ ದುರ್ಮರಣ

ಮಿರ್ಜಾಪುರ: ಉತ್ತರ ಪ್ರದೇಶದ ಮಿರ್ಜಾಪುರ ಜಿಲ್ಲೆಯಲ್ಲಿ ಭೀಕರ ರಸ್ತೆ ಅಪಘಾತ ಸಂಭವಿಸಿದ್ದು, 10 ಮಂದಿ ಸಾವನ್ನಪ್ಪಿರುವ ಘಟನೆ ಶುಕ್ರವಾರ ಮುಂಜಾನೆ ನಡೆದಿದೆ.

ಕಾರ್ಮಿಕರನ್ನು ತುಂಬಿದ್ದ ಟ್ರ್ಯಾಕ್ಟರ್ ಟ್ರಾಲಿಗೆ ನಿಯಂತ್ರಣ ತಪ್ಪಿದ ಟ್ರಕ್ ಹಿಂಬದಿಯಿಂದ ಡಿಕ್ಕಿ ಹೊಡೆದಿದೆ. ಪರಿಣಾಮ ಅಪಘಾತದಲ್ಲಿ 10 ಮಂದಿ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.

ಘಟನೆಯಲ್ಲಿ ಮೂವರು ಗಂಭೀರವಾಗಿ ಗಾಯಗೊಂಡಿದ್ದಾರೆ. ಅಪಘಾತದ ನಂತರ ಪೊಲೀಸರು ಸ್ಥಳಕ್ಕೆ ಧಾವಿಸಿ ಗಾಯಾಳುಗಳನ್ನು ಆಂಬುಲೆನ್ಸ್‌ನಲ್ಲಿ ಆಸ್ಪತ್ರೆಗೆ ರವಾನಿಸಿದ್ದಾರೆ. ಮೃತಪಟ್ಟವರೆಲ್ಲರೂ ವಾರಾಣಸಿ ನಿವಾಸಿಗಳು ಎಂದು ತಿಳಿದುಬಂದಿದೆ.

ಗುರುವಾರ ರಾತ್ರಿ 1 ಗಂಟೆ ಸುಮಾರಿಗೆ ಮಿರ್ಜಾಪುರದ ಕಚ್ವಾನ್ ಪ್ರದೇಶದ ಕಟ್ಕಾ ಗ್ರಾಮದ ಬಳಿ ವಾರಾಣಸಿ – ಪ್ರಯಾಗರಾಜ್ ರಾಷ್ಟ್ರೀಯ ಹೆದ್ದಾರಿಯಲ್ಲಿ, ದುರ್ಘಟನೆ ಸಂಭವಿಸಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ (ಮಿರ್ಜಾಪುರ) ಅಭಿನಂದನ್ ತಿಳಿಸಿದ್ದಾರೆ.

ಅಪಘಾತದ ಬಳಿಕ ಲಾರಿ ಚಾಲಕ ವಾಹನ ಬಿಟ್ಟು ಓಡಿ ಹೋಗಿದ್ದಾನೆ. ಘಟನೆ ಬಳಿಕ ಸ್ಥಳದಲ್ಲಿ ಜನರ ಗುಂಪು ಜಮಾಯಿಸಿತ್ತು. ಮಾಹಿತಿ ಪಡೆದು ಪೊಲೀಸರೂ ಘಟನಾ ಸ್ಥಳಕ್ಕೆ ಆಗಮಿಸಿ ಪರಿಸ್ಥಿತಿಯ ಪರಿಶೀಲನೆ ನಡೆಸಿದರು.

ಹೆಜ್ಬೊಲ್ಲಾ ಸಂವಹನ ಘಟಕದ ಕಮಾಂಡರ್ ಹೊಡೆದುರುಳಿಸಿದ ಇಸ್ರೇಲ್

ಟೆಲ್ ಅವೀವ್, ಅ.4– ಇರಾನ್‌ಗೆ ಮತ್ತೊಂದು ಆಘಾತ ಎದುರಾಗಿದ್ದು, ಇರಾನ್ ಬೆಂಬಲಿತ ಹೆಜ್ಬೊಲ್ಲಾ ಬಂಡುಕೋರರ ಮೇಲೆ ದಾಳಿ ಮುಂದುವರೆಸಿರುವ ಇಸ್ರೇಲ್ ಸೇನೆ ಇಂದು ಹೆಜ್ಬೊಲ್ಲಾ ಸಂಘಟನೆಯ ಸಂವಹನ ಘಟಕದ ಕಮಾಂಡರ್‌ನನ್ನು ಹೊಡೆದುರುಳಿಸಿದೆ.

ತನ್ನ ಗುಪ್ತಚರ ಸಂಸ್ಥೆ ನೀಡಿದ್ದ ಮಾಹಿತಿ ಆಧಾರದ ಮೇಲೆ ಬೈರುತ್‌ನಲ್ಲಿ ವಾಯುದಾಳಿ ನಡೆಸಿದ ಇಸ್ರೇಲ್ ಸೇನೆ ಹೆಜ್ಬೊಲ್ಲಾದ ಸಂವಹನ ಘಟಕದ ಕಮಾಂಡರ್ ಮೊಹಮ್ಮದ್ ರಶೀದ್ ಸಕಾಫಿಯನ್ನು ಹೊಡೆದುರುಳಿಸಿದೆ.

ಈ ಬಗ್ಗೆ ಸ್ವತಃ ಇಸ್ರೇಲ್ ಸೇನೆ ಮಾಹಿತಿ ನೀಡಿದ್ದು, ಮೃತ ಸಕಾಫಿ ಹೆಜ್ಬೊಲ್ಲಾ ಭಯೋತ್ಪಾದಕ ಸಂಘಟನೆಯ ಪ್ರಮುಖ ಕಮಾಂಡರ್ ಆಗಿದ್ದ. ಆತ 2000 ರಿಂದ ಸಂಘಟನೆಯ ಸಂವಹನ ಘಟಕದ ಮುಖ್ಯಸ್ಥನಾಗಿದ್ದ. ಹೆಜ್ಬೊಲ್ಲಾದ ಎಲ್ಲಾ ಘಟಕಗಳ ನಡುವೆ ಸಂವಹನ ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸಲು ಸಕಾಫಿ ಗಮನಾರ್ಹ ಪ್ರಯತ್ನಗಳನ್ನು ನಡೆಸಿದ್ದ ಎಂದು ಐಡಿಎಫ್ ಮಾಹಿತಿ ನೀಡಿದೆ. ಬೈರುತ್‌ನ ದಕ್ಷಿಣದ ಉಪನಗರವಾದ ದಹಿಯೆಹ್, ಇರಾನ್ ಬೆಂಬಲಿತ ಹಿಜ್ಬೊಲ್ಲಾದ ಭದ್ರಕೋಟೆಯಾಗಿದ್ದು, ಗುರುವಾರ ಮಧ್ಯರಾತ್ರಿ ವೇಳೆ ಇಸ್ರೇಲ್ ವಾಯುಸೇನೆ ದಾಳಿ ನಡೆಸಿ ಮೊಹಮ್ಮದ್ ರಶೀದ್ ಸಕಾಫಿಯನ್ನು ಹೊಡೆದುರುಳಿಸಿದೆ.

ಮೈಸೂರು ಮಿತ್ರ ಶನಿವಾರ 5 ಅಕ್ಟೋಬರ್ 2024



ಡಿಜೆ ಅಬ್ಬರಕ್ಕೆ ಸ್ವಯಂ ಕಡಿವಾಣ ಹಾಕಿ

• ಮಡಿಕೇರಿ ದಸರಾ ಕೊಡಗಿನ ಸುಂದರ ಸಂಸ್ಕೃತಿ ಪ್ರತಿಬಿಂಬಿಸುವ ಆಚರಣೆಯಾಗಲಿ • ಸಂವಾದದಲ್ಲಿ ಎಸ್‌ಪಿ ಕೆ.ರಾಮರಾಜನ್ ಆಶಯ

ಮಡಿಕೇರಿ, ಅ.4–'ಡಿಜೆ' ಅಬ್ಬರಕ್ಕೆ ಸ್ವಯಂ ಕಡಿವಾಣ ಹಾಕುವ ಮೂಲಕ ಕೊಡಗಿನ ಸುಂದರ ಸಂಸ್ಕೃತಿ ಪ್ರತಿಬಿಂಬಿಸುವ ರೀತಿ ಐತಿಹಾಸಿಕ ಮಡಿಕೇರಿ ದಸರಾ ಜನೋತ್ಸವ ಕಾಣುವಂತಾಗಬೇಕು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಆಶಯ ವ್ಯಕ್ತಪಡಿಸಿದರು.

ಕೊಡಗು ಪ್ರೆಸ್‌ಕ್ಲಬ್ ವತಿಯಿಂದ ಪತ್ರಿಕಾ ಭವನದಲ್ಲಿ ಶುಕ್ರವಾರ ಆಯೋಜಿಸಿದ್ದ ಸಂವಾದದಲ್ಲಿ ಮಾತನಾಡಿದ ಅವರು, ಅಬ್ಬರದ ಡಿಜೆ ರಾಷ್ಟ್ರದ ಯಾವುದೇ ಭಾಗಕ್ಕೆ ತೆರಳಿದರು ನಿಮಗೆ ಕಾಣಸಿಗುತ್ತದೆ. ಹಿರಿಯರಿಂದ ಬಳುವಳಿಯಾಗಿ ಬಂದ ಕೊಡಗಿನ ಸಂಸ್ಕೃತಿಯನ್ನು ನಾವು ಇಲ್ಲೇ ಕಾಣಲು ಸಾಧ್ಯ ಎನ್ನುವುದನ್ನು ಅರ್ಥೈಸಿಕೊಂಡು, ಡಿಜೆ ಬದಲಾಗಿ ಇಲ್ಲಿನ ಸಂಸ್ಕೃತಿ, ವಾಲಗಕ್ಕೆ ಹೆಚ್ಚಿನ ಒತ್ತು ನೀಡಬೇಕು ಎಂದು ಮನವಿ ಮಾಡಿದರು.

ಚಿಕ್ಕ ಮಕ್ಕಳು ಹಾಗೂ ಅನಾರೋಗ್ಯ ಪೀಡಿತರಿಗೆ ಸಂಕಷ್ಟ ತಂದೊಡ್ಡಬಲ್ಲ ಡಿಜೆ ಅಬ್ಬರಕ್ಕೆ ಸ್ವಯಂ ಕಡಿವಾಣ ಹಾಕುವ ಮೂಲಕ ದಸರಾ ಉತ್ಸವ ಆಚರಿಸಲು ನಾವೇ ಬದಲಾಗಬೇಕು ಎಂದು ಅರ್ಥ ಮಾಡಿಕೊಳ್ಳಬೇಕು ಎಂದರು.

ಹೆಚ್ಚಿನ 'ಡಿಜೆ' ಬಳಕೆ ಸಲ್ಲ: ಸಂವಾದದಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಎಸ್‌ಪಿ ರಾಮರಾಜನ್, ಈ ಬಾರಿ ದಸರಾ ಉತ್ಸವದಲ್ಲಿ ಬಳಸುವ ಡಿಜೆಗಳನ್ನು 75 ಡೆಸಿಬಲ್ ಮಿತಿಯಲ್ಲೇ ಇರಬೇಕು. ಹಿಂದೆ ಡಿಜೆ ಬಳಕೆ ಹೆಚ್ಚಾಗಿತ್ತಾದರೂ ಈ ಬಾರಿ ದಶಮಂಟಪಗಳು ಸ್ವಯಂ ಡಿಜೆ ಬಳಕೆಗೆ ಮಿತಿಗಳನ್ನು ಅಳವಡಿಸಿಕೊಳ್ಳುತ್ತಿರುವುದು ಉತ್ತಮ ಬೆಳವಣಿಗೆ ಎಂದು ಅನಿಸಿಕೆ ವ್ಯಕ್ತಪಡಿಸಿದರು.

ಪ್ರಸ್ತುತ ಮೈಸೂರು ದಸರಾ ಉತ್ಸವ ವಿಶ್ವಖ್ಯಾತಿ ಪಡೆದಿದ್ದು, ಅಲ್ಲಿನ ದಸರಾ ವೀಕ್ಷಣೆಗೆ ದೇಶ–ವಿದೇಶಗಳಿಂದ ಹೆಚ್ಚಿನ ಜನರು ಬರುತ್ತಾರೆ. ಇದಕ್ಕೆ ಕಾರಣ ಮೈಸೂರು ದಸರಾದ ವಿಶಿಷ್ಟ ಸಂಸ್ಕೃತಿಯೇ ಆಗಿದೆ. ಅದೇ ರೀತಿ ಮಡಿಕೇರಿ ದಸರಾ ಉತ್ಸವದಲ್ಲಿ ಕೊಡಗಿನ ಸಂಸ್ಕೃತಿಗೆ ಹೆಚ್ಚಿನ ಒತ್ತು ನೀಡುವುದು ಅತ್ಯವಶ್ಯ ಎಂದು ತಿಳಿಸಿದರು.



ಸಂವಾದದಲ್ಲಿ ಎಸ್‌ಪಿ ಕೆ.ರಾಮರಾಜನ್ ಮಾತನಾಡಿದರು.

ತುತ್ತೂರಿ–ಮುಖವಾಡ ನಿಷೇಧ: ಹೆಚ್ಚಿನ ಶಬ್ದದಿಂದ ಮಾಲಿನ್ಯಕ್ಕೆ ಕಾರಣವಾಗಬಹುದಾದ 'ತುತ್ತೂರಿ'(ವೂ..ವೂ.. ಪೆಲ್ಲಾ..) ಬಳಕೆ ಮತ್ತು ಉತ್ಸವ ಸಂದರ್ಭ ದುಷ್ಕೃತ್ಯಕ್ಕೆ ಅವಕಾಶ ಕಲ್ಪಿಸುವ ಮುಖವಾಡಗಳನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಒಂದೊಮ್ಮೆ ಅಂಗಡಿ ಮಳಿಗೆಗಳಲ್ಲಿ ಇವುಗಳ ಮಾರಾಟ ಕಂಡು ಬಂದಲ್ಲಿ ಅವುಗಳನ್ನು ವಶಪಡಿಸಿಕೊಳ್ಳಲಾಗುವುದು ಎಂದು ಎಚ್ಚರಿಸಿದರು.

> "ಕೊಡಗು ಜಿಲ್ಲೆಯ ಕಾಫಿ ಪ್ಲಾಂಟೇಷನ್‌ಗಳಿಗೆ ಈಶಾನ್ಯ ರಾಜ್ಯ ಸೇರಿದಂತೆ ವಿವಿಧೆಡೆಗಳಿಂದ ಕಾರ್ಮಿಕರು ಆಗಮಿಸುತ್ತಾರೆ. ಹೀಗೆ ಬರುವವರಲ್ಲಿ ಸಮಾಜಘಾತಕ ಶಕ್ತಿಗಳು ಇದ್ದಲ್ಲಿ ಅಂತಹವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು. ದೇಶದ ಪ್ರಜೆಗೆ ರಾಷ್ಟ್ರದ ಯಾವುದೇ ಮೂಲೆಗಳಿಗೆ ತೆರಳುವ, ಕಾರ್ಯ ನಿರ್ವಹಿಸುವ ಸ್ವಾತಂತ್ರ್ಯವಿದೆ. ವಲಸೆ ಕಾರ್ಮಿಕರ ಬಗ್ಗೆ ಸಂಶಯಗಳಿದ್ದಲ್ಲಿ ಪೊಲೀಸ್ ಇಲಾಖೆಗೆ ಮಾಹಿತಿ ನೀಡಿದಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.
> –ಕೆ.ರಾಮರಾಜನ್, ಕೊಡಗು ಎಸ್‌ಪಿ

ಬಂದೋಬಸ್ತ್‌ಗೆ ಸಾವಿರ ಪೊಲೀಸ್: ಮಡಿಕೇರಿ ದಸರಾ ಉತ್ಸವದಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಸಾವಿರ ಪೊಲೀಸರನ್ನು ಬಂದೋಬಸ್ತ್‌ಗೆ ನಿಯೋಜಿಸಲಾಗಿದೆ. 10 ರಿಂದ 15 ಪೊಲೀಸರ ಒಳಗೊಂಡ 6 ರಿಂದ 7 'ಜಂಬೋ' ತಂಡಗಳನ್ನು ರಚಿಸಲಾಗಿದೆ. ಈ ತಂಡಗಳು ಉತ್ಸವ ವೇಳೆ ಹೆಚ್ಚಿನ ಜನಸಾಂದ್ರತೆ ಕಡೆಗಳಲ್ಲಿ ಭದ್ರತಾ ತಂಡಗಳನ್ನು ನಿಯೋಜಿಸಲಾಗಿದೆ. ಪಿಕ್ ಪಾಕೆಟ್ ಸೇರಿದಂತೆ ಇತರೆ ದುಷ್ಕೃತ್ಯ ತಡೆಗಟ್ಟಲಾಗುವುದು ಎಂದು ಹೇಳಿದರು.

ಇಬ್ಬರು ಪೊಲೀಸರ 'ಚೀತಾ' ತಂಡ ನಗರದಂಚಿನ ಪ್ರದೇಶಗಳಲ್ಲಿ ಕಾರ್ಯ ನಿರ್ವಹಿಸಲಿವೆ. ದಶಮಂಟಪಗಳಿಗೆ ಓರ್ವ ಪೊಲೀಸ್ ಅಧಿಕಾರಿ ಮತ್ತು 8 ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗುವುದು. ದಸರಾ ಸಂದರ್ಭ ವಾಹನ ಸಂಚಾರ ಮತ್ತು ನಿಲುಗಡೆಗೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಅ.28ಕ್ಕೆ ಸರ್ಕಾರಿ ನೌಕರರ ಸಂಘದ ಚುನಾವಣೆ



ಸುದ್ದಿಗೋಷ್ಠಿಯಲ್ಲಿ ಚುನಾವಣಾಧಿಕಾರಿ ಎಂ.ಕೆ.ರೋಹಿತ್ ಮಾತನಾಡಿದರು.

ವಿರಾಜಪೇಟೆ, ಅ.4–ರಾಜ್ಯ ಸರ್ಕಾರಿ ನೌಕರರ ಸಂಘದ 2024–29ನೇ ಸಾಲಿನ ತಾಲೂಕು ಘಟಕ ಚುನಾವಣಾ ಪ್ರಕ್ರಿಯೆ ಪ್ರಾರಂಭವಾಗಿದ್ದು, ಅ.28ರಂದು ವಿರಾಜಪೇಟೆಯ ಗಾಂಧಿನಗರದಲ್ಲಿ ಚುನಾವಣೆ ನಡೆಯಲಿದೆ ಎಂದು ತಾಲೂಕು ಚುನಾವಣಾಧಿಕಾರಿ ಎಂ.ಕೆ. ರೋಹಿತ್ ತಿಳಿಸಿದರು.

ಪಟ್ಟಣದ ಪ್ರೆಸ್‌ಕ್ಲಬ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗಾಗಲೇ ಚುನಾವಣೆ ವೇಳಾಪಟ್ಟಿ ಹಾಗೂ ಅಧಿಸೂಚನೆ ಹೊರಡಿಸಲಾಗಿದೆ. ಅ.9ರಿಂದ ಅ.18ರ ಸಂಜೆ 5 ಗಂಟೆವರೆಗೆ ನಾಮಪತ್ರ ಸಲ್ಲಿಸಬಹುದು. ಅ.19ರಂದು ನಾಮಪತ್ರ ಪರಿಶೀಲಿಸಲಾಗುವುದು. ಅ.21ರ ಸಂಜೆ 4.30ರೊಳಗೆ ಉಮೇದುವಾರಿಕೆ ವಾಪಸ್ ಪಡೆಯಬಹುದು. ಅ.28 ರಂದು ಮತದಾನ ನಡೆಯಲಿದ್ದು, ಬಳಿಕ ಮತ ಎಣಿಕೆ ಕಾರ್ಯ ನಡೆಯಲಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಸಹಾಯಕ ಚುನಾವಣಾಧಿಕಾರಿ ಎ.ಟಿ.ಬಾಲಕೃಷ್ಣ ಉಪಸ್ಥಿತರಿದ್ದರು.

ಗೋಣಿಕೊಪ್ಪ ದಸರಾದಲ್ಲಿ ರಾಜೇಶ್ ಕೃಷ್ಣನ್ ಮೋಡಿ

ಗೋಣಿಕೊಪ್ಪ, ಅ.4–ಇಲ್ಲಿನ ಕಾವೇರಿ ಕಲಾ ವೇದಿಕೆಯಲ್ಲಿ ಗುರುವಾರ ರಾತ್ರಿ ನಡೆದ ಗೋಣಿಕೊಪ್ಪ ದಸರಾ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಖ್ಯಾತ ಹಿನ್ನೆಲೆ ಗಾಯಕ ರಾಜೇಶ್ ಕೃಷ್ಣನ್ ಇಂಪಾದ ಹಾಡುಗಳ ಮೂಲಕ ಮೋಡಿ ಮಾಡಿದರು.

ಪ್ರೌಢಗಾಯಕ ದಿ.ಎಸ್.ಪಿ.ಬಾಲಸುಬ್ರಹ್ಮಣ್ಯಂ ಹಾಗೂ ನಟ ರಮೇಶ್ ಅರವಿಂದ್ ಅವರ 20ಕ್ಕೂ ಹೆಚ್ಚು ಗೀತೆಗಳನ್ನು ರಾಜೇಶ್ ಕೃಷ್ಣನ್ ಹಾಡಿದರು. ಇದರಿಂದ ರಾತ್ರಿಯ ತಂಪಿನಲ್ಲಿ ಹಾಡುಗಳು ಇಂಪಾದವು. ಇದೇ ವೇಳೆ ಇಂದ್ರಜಿತ್ ಲಂಕೇಶ್ ಪುತ್ರ ಸಮರ್ಜಿತ್ ವೇದಿಕೆಯಲ್ಲಿ ಹೆಜ್ಜೆ ಹಾಕಿದರು.

ಇದಕ್ಕೂ ಮುನ್ನ ದಸರಾ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಶಾಸಕ ಅಜ್ಜಿಕುಟ್ಟೀರ ಎಸ್.ಪೊನ್ನಣ್ಣ ಮಾತನಾಡಿ, ದೇವಿ ಆರಾಧನೆ ಮೂಲಕ ದಸರಾ ಆಚರಿಸಲಾಗುತ್ತಿದೆ ಸರ್ಕಾರದಿಂದ ಮಡಿಕೇರಿ ದಸರಾ ಆಚರಣೆಗೆ 1.5 ಕೋಟಿ ರೂ. ಹಾಗೂ ಗೋಣಿಕೊಪ್ಪ ದಸರಾಕ್ಕೆ 75 ಲಕ್ಷ ರೂ. ಅನುದಾನ ನೀಡಲಾಗಿದೆ ಎಂದರು. ಜಿಲ್ಲಾಧಿಕಾರಿ ವೆಂಕಟ್ ರಾಜಾ ಮಾತನಾಡಿ, ದಸರಾ ಆಚರಣೆಯೊಂದಿಗೆ ಪರಿಸರ ಕಾಳಜಿ ಇರಲಿ. ಕೊಡಗಿನ ಸುಂದರ ಪರಿಸರ ಸಂರಕ್ಷಣೆ ಎಲ್ಲರ ಜವಾಬ್ದಾರಿ ಎಂಬ ಅರಿವು ಮುಖ್ಯ ಎಂದರು.



ಗೋಣಿಕೊಪ್ಪ ದಸರಾ ಸಾಂಸ್ಕೃತಿಕ ಕಾರ್ಯಕ್ರಮವನ್ನು ಶಾಸಕ ಅಜ್ಜಿಕುಟ್ಟೀರ ಎಸ್.ಪೊನ್ನಣ್ಣ, ಜಿಲ್ಲಾಧಿಕಾರಿ ವೆಂಕಟ್ ರಾಜಾ ಉದ್ಘಾಟಿಸಿದರು.



ದಸರಾ ಸಮಿತಿ ಅಧ್ಯಕ್ಷ ಕುಲ್ಲಚಂಡ ಪ್ರಮೋದ್ ಗಣಪತಿ, ಕಾರ್ಯಾಧ್ಯಕ್ಷ ಕೊಳ್ಳಿಮಾಡ ಅಜಿತ್ ಅಯ್ಯಪ್ಪ, ಸಹಾಯಕ ಆಯುಕ್ತ ನರವಡೆ ವಿನಾಯಕ ಕರಭಾರಿ, ಜಿಪಂ ಸಿಇಓ ಆನಂದ್ ಪ್ರಕಾಶ್ ಮೀನಾ, ವಿರಾಜಪೇಟೆ ತಹಸೀಲ್ದಾರ್ ರಾಮಚಂದ್ರ, ಪೊನ್ನಂಪೇಟೆ ತಹಸೀಲ್ದಾರ್ ಮೋಹನ್ ಕುಮಾರ್, ವಿಧಾನಪರಿಷತ್ ಮಾಜಿ ಸದಸ್ಯ ಅರುಣ್ ಮಾಚಯ್ಯ, ಗ್ಯಾರಂಟಿ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ತೀತೀರ ಧರ್ಮಜ ಉತ್ತಪ್ಪ, ಪೊನ್ನಂಪೇಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮೀದೇರಿರ ನವೀನ್, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕಡೇಮಾಡ ಕುಸುಮ ಜೋಯಪ್ಪ, ದಸರಾ ಸಮಿತಿ ಮಾಜಿ ಅಧ್ಯಕ್ಷ ಕೊಪ್ಪೀರ ಸನ್ನಿ ಸೋಮಯ್ಯ, ಕಸಾಪ ಜಿಲ್ಲಾಧ್ಯಕ್ಷ ಎಂ.ಪಿ.ಕೇಶವ ಕಾಮತ್, ಕಾಂಚನ ಪೊನ್ನಣ್ಣ, ನಟ ಇಂದ್ರಜಿತ್ ಲಂಕೇಶ್ ಇದ್ದರು.

ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಎಬಿವಿಪಿ ಪ್ರತಿಭಟನೆ



ವಿವಿಗಳಲ್ಲಿ ಮೂಲಸೌಕರ್ಯ ಒದಗಿಸುವಂತೆ ಆಗ್ರಹಿಸಿ ಎಬಿವಿಪಿ ಕಾರ್ಯಕರ್ತರು ಮಡಿಕೇರಿ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಮಡಿಕೇರಿ, ಅ.4–ರಾಜ್ಯದ ವಿಶ್ವವಿದ್ಯಾನಿಲಯಗಳಲ್ಲಿ ಶೈಕ್ಷಣಿಕ ಹಾಗೂ ಮೂಲ ಸೌಕರ್ಯ ಒದಗಿಸುವಂತೆ ಆಗ್ರಹಿಸಿ ಎಬಿವಿಪಿ ಕಾರ್ಯಕರ್ತರು ಹಾಗೂ ಪದವಿ ಕಾಲೇಜು ವಿದ್ಯಾರ್ಥಿಗಳು ನಗರದ ಜಿಲ್ಲಾಧಿಕಾರಿ ಕಚೇರಿ ಎದುರು ಶುಕ್ರವಾರ ಪ್ರತಿಭಟನೆ ನಡೆಸಿದರು.

ರಾಜ್ಯ ವ್ಯಾಪ್ತಿಯ 460ಕ್ಕೂ ಹೆಚ್ಚಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಖಾಯಂ ಉಪ ನ್ಯಾಸಕರ ಕೊರತೆ ಇದೆ. ನಿಯಮಿತ ಬೋಧನೆ ನಡೆಯದೆ ಹಲವು ವರ್ಷಗಳಿಂದ ವಿದ್ಯಾರ್ಥಿಗಳು ತೀವ್ರ ತೊಂದರೆ ಎದುರಿಸುತ್ತಿದ್ದಾರೆ. ಪದವಿ ತರಗತಿಗಳು ಆರಂಭವಾಗಿ 50 ದಿನ ಕಳೆದಿದ್ದು, ಈಗ ಅತಿಥಿ ಉಪನ್ಯಾಸಕರನ್ನು ನೇಮಿಸುವ ಪ್ರಕ್ರಿಯೆಗೆ ಚಾಲನೆ ನೀಡಲಾಗಿದೆ ಎಂದು ಪ್ರತಿಭಟನಾ ವಿದ್ಯಾರ್ಥಿಗಳು ಆಕ್ರೋಶ ವ್ಯಕ್ತಪಡಿಸಿದರು.

ಖಾಯಂ ಉಪನ್ಯಾಸಕರ ನೇಮಿಸಲು ಶೀಘ್ರ ಕ್ರಮ ವಹಿಸಬೇಕು. ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಅಂಕಪಟ್ಟಿ ನೀಡುವ ವಿಚಾರದಲ್ಲಿ ವಿವಿಗಳು ಹಾಗೂ ಸರ್ಕಾರ ಸ್ಪಷ್ಟ ನಿಲುವು ಕೈಗೊಂಡು ತಾಂತ್ರಿಕ ಸಮಸ್ಯೆಗಳನ್ನು ಬಗೆಹರಿಸುವುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿದರು. ಬಳಿಕ ಅಪರ ಜಿಲ್ಲಾಧಿಕಾರಿ ಐಶ್ವರ್ಯ ಅವರಿಗೆ ಮನವಿ ಸಲ್ಲಿಸಲಾಯಿತು.



ಸ್ವಚ್ಛತೆಯೇ ಸೇವಾ ಅಭಿಯಾನ...

ವಿರಾಜಪೇಟೆ ಪುರಸಭೆ ವತಿಯಿಂದ ಖಾಸಗಿ ಬಸ್ ನಿಲ್ದಾಣ, ಮಾರುಕಟ್ಟೆ ಹಾಗೂ ಇತರೆಡೆ ನಡೆದ ಸ್ವಚ್ಛತೆಯೇ ಸೇವಾ ಅಭಿಯಾನಕ್ಕೆ ಶಾಸಕ ಎ.ಎಸ್.ಪೊನ್ನಣ್ಣ ಚಾಲನೆ ನೀಡಿದರು. ಪುರಸಭೆ ಅಧ್ಯಕ್ಷೆ ಮನೆಯಪಂಡ ದೇಚಮ್ಮ ಕಾಳಪ್ಪ, ತಹಸೀಲ್ದಾರ್ ರಾಮಚಂದ್ರ, ಮುಖ್ಯಾಧಿಕಾರಿ ಚಂದ್ರಕುಮಾರ್, ಉಪಾಧ್ಯಕ್ಷೆ ಫಸಿಯಾ ತಬ್ಸಂ, ಸದಸ್ಯರಾದ ಸಿ.ಕೆ.ಪೃಥ್ವಿನಾಥ್, ಪಿ.ರಂಜಿ ಪೂಣಚ್ಚ, ಡಿ.ಪಿ.ರಾಜೇಶ್, ಮಹ್ಮದ್ ರಾಫಿ, ಎಸ್.ಹೆಚ್. ಮತೀನ್, ಜಲೀಲ್ ಅಹ್ಮದ್, ಅಗಸ್ಟಿನ್ ಬೆನ್ನಿ, ರಜನಿಕಾಂತ್, ಸುನೀತಾ ಜೂನಾ, ನಾಮನಿರ್ದೇಶನ ಸದಸ್ಯರಾದ ಕೆ.ಸಿ.ಶಬರೀಶ್ ಶೆಟ್ಟಿ, ದಿನೇಶ್, ಹಮೀದ್, ಕಚೇರಿ ವ್ಯವಸ್ಥಾಪಕಿ ಸುಜಾತ, ಆರೋಗ್ಯ ನಿರೀಕ್ಷಕರಾದ ಕೋಮಲ, ಸುಲೇಖ, ಸಿಬ್ಬಂದಿ, ಪೌರಕಾರ್ಮಿಕರು ಇದ್ದರು.

ಚಾಮರಾಜನಗರದಲ್ಲಿ ಗಣಪತಿ ವಿಸರ್ಜನೆ ಶೋಭಯಾತ್ರೆ

• ಮೆರವಣಿಗೆಗೆ ಕಲಾತಂಡಗಳ ಮೆರಗು • ರಾರಾಜಿಸಿದ ಕೇಸರಿ ಧ್ವಜ, ಪೊಲೀಸ್ ಬಂದೋಬಸ್ತ್



ಚಾಮರಾಜನಗರದಲ್ಲಿ ಗಣೇಶ ಮೂರ್ತಿ ವಿಸರ್ಜನೆ ಶೋಭಯಾತ್ರೆ ನಡೆಯಿತು.

ಚಾಮರಾಜನಗರ, ಅ.4–ನಗರದ ಶ್ರೀ ವಿದ್ಯಾ ಗಣಪತಿ ಮಂಡಳಿ ವತಿಯಿಂದ ಪ್ರತಿವರ್ಷದಂತೆ ಈ ಬಾರಿಯೂ 62ನೇ ವರ್ಷದ ಗಣೇಶ ಮೂರ್ತಿ ವಿಸರ್ಜನೆ ಶೋಭಯಾತ್ರೆ ಅದ್ದೂರಿಯಾಗಿ ನಡೆಯಿತು.

ಬೆಳಗ್ಗೆ 9.30ಕ್ಕೆ ಗಣಪತಿ ಮೂರ್ತಿಗೆ ಮಂಡಳಿ ಪದಾಧಿಕಾರಿಗಳು ಪೂಜೆ ಸಲ್ಲಿಸಿದರು. ನಂತರ ಶೋಭಾಯಾತ್ರೆ ಆರಂಭಿಸಲಾಯಿತು. ಶ್ರೀರಾಮನ ಅವತಾರದ ಗಣೇಶ ಮೂರ್ತಿಯನ್ನು ಗಣೇಶ ಹಬ್ಬದ ದಿನದಂದು ಪ್ರತಿಷ್ಠಾಪಿಸಲಾಗಿತ್ತು. ಅಂದಿನಿಂದ ಪ್ರತಿದಿನ ಗಣೇಶನಿಗೆ ವಿಶೇಷ ಪೂಜಾ ಕೈಂಕರ್ಯ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲಾಯಿತು.

ನಗರದ ಖಡಕ್ಪುರ ಮೊಹಲ್ಲಾ, ಡಾ.ಬಿ.ಆರ್.ಅಂಬೇಡ್ಕರ್ ಬೀದಿ, ದೇವಾಂಗ 3ನೇ ಬೀದಿ, ನಾಗಪ್ಪಶೆಟ್ಟರ ಚೌಕ, ಮೇಗಲ ನಾಯಕರ ಬೀದಿ, ಶ್ರೀಕನ್ನಿಕಾ ಪರಮೇಶ್ವರಿ ದೇವಸ್ಥಾನ, ಗಾಡಿಪೇಟೆ ಚೌಕ, ದೊಡ್ಡ ಅಂಗಡಿ ಬೀದಿ, ಚಿಕ್ಕಂಗಡಿ ಬೀದಿ, ಸಂತೇಮರಹಳ್ಳಿ ವೃತ್ತ, ನಾಯಕರ ಬೀದಿ, ಭಗೀರಥ, ಉಪ್ಪಾರ ಬಡಾವಣೆ, ಆದಿಶಕ್ತಿ ದೇವಸ್ಥಾನ, ಬಣಜಿಗರ ಬೀದಿ, ಭ್ರಮರಾಂಬ ಬಡಾವಣೆ, ಕುರುಬರ, ಹಳ್ಳದ, ಅಗ್ರಹಾರದ ಬೀದಿ ಸೇರಿದಂತೆ ಪ್ರಮುಖ ರಸ್ತೆಗಳಲ್ಲಿ ಶೋಭಾಯಾತ್ರೆ ಸಾಗಿತು.

ಕಲಾ ತಂಡಗಳು ಸೊಬಗು: ಮೆರವಣಿಗೆ ಹಾದು ಹೋಗುವ ರಸ್ತೆಗಳನ್ನು ಸ್ವಚ್ಛಗೊಳಿಸಿ ತಳಿರು ತೋರಣಗಳಿಂದ ಸಿಂಗರಿಸಿ, ಬಣ್ಣ ಬಣ್ಣದ ರಂಗೋಲಿ ಬಿಟ್ಟು ಸ್ವಾಗತ ಕೋರಲಾಯಿತು. ಮಂಗಳವಾದ್ಯ, ನಂದಿಕಂಬ, ಗೊರವರ ಕುಣಿತ, ಕಂಸಾಳೆ, ಡೊಳ್ಳು ಕುಣಿತ, ಮಹಿಳಾ ವೀರಗಾಸೆ, ಗಾಡಿಗೊಂಬೆ, ಚೆಂಡೆ, ಬ್ಯಾಂಡ್‌ಸೆಟ್, ನಗಾರಿ, ತಮಟೆ, ಕೇರಳದ ಚಿಂಗಾರಿ ಮೇಳ ಹಾಗೂ ಮಹಾಕಾಳಿ ವೇಷಗಳು, ನಾಸಿಕ್ ಡೊಳ್ಳು ಮುಂತಾದ ಕಲಾ ತಂಡಗಳು ಭಾಗವಹಿಸಿ ಮೆರವಣಿಗೆಗೆ ಮೆರಗು ನೀಡಿದವು.



ಗಣೇಶ ಮೂರ್ತಿ ವಿಸರ್ಜನೆಯಲ್ಲಿ ಮಹಾಕಾಳಿ ವೇಷಧಾರಿಗಳು ಗಮನ ಸೆಳೆದರು.

ಪೊಲೀಸ್ ಸರ್ಪಗಾವಲು: ಗಣೇಶ ಮೂರ್ತಿ ವಿಸರ್ಜನೆ ಶೋಭಯಾತ್ರೆಯಲ್ಲಿ ಪೊಲೀಸ್ ಬಿಗಿ ಬಂದೋಬಸ್ತ್ ಮಾಡಲಾಗಿತ್ತು ಮುನ್ನೆಚ್ಚರಿಕೆಯಾಗಿ ಈ ಬಾರಿ ಭದ್ರತೆಗೆ ಹೆಚ್ಚಿನ ಪೊಲೀಸರನ್ನು ನಿಯೋಜಿಸಲಾಗಿತ್ತು. ಹೀಗಾಗಿ ಮೆರವಣಿಗೆಯಲ್ಲಿ ಸಾರ್ವಜನಿಕರಿಗಿಂತ ಪೊಲೀಸರೇ ಅಧಿಕವಾಗಿದ್ದರು.

ನಗರದಲ್ಲಿ 2–3 ದಿನಗಳಿಂದ ಉತ್ತಮ ಮಳೆಯಾಗುತ್ತಿದ್ದು, ಶುಕ್ರವಾರ ಸಂಜೆ 4 ಗಂಟೆಗೆ ಆರಂಭವಾದ ಮಳೆ ರಾತ್ರಿವರೆಗೂ ಎಡಬಿಡದೆ ಸುರಿಯಿತು. ಇದರಿಂದ ಮಳೆಯ ನಡುವೆ ಗಣೇಶ ಮೂರ್ತಿ ವಿಸರ್ಜನೆ ಮೆರವಣಿಗೆ ಸಾಗಿತು.

ಮೆರವಣಿಗೆಯಲ್ಲಿ ಶ್ರೀವಿದ್ಯಾ ಗಣಪತಿ ಮಂಡಳಿ ಅಧ್ಯಕ್ಷ ಸುಂದರ್ ರಾಜ್, ಎಸ್‌ಪಿ ಡಾ.ಬಿ.ಟಿ. ಕವಿತಾ, ನಗರಸಭಾ ಅಧ್ಯಕ್ಷ ಎಸ್.ಸುರೇಶ್, ಮಾಜಿ ಅಧ್ಯಕ್ಷ ಸುರೇಶ್ ನಾಯಕ, ಮುಖಂಡ ಕೆಲ್ಲಂಬಳ್ಳಿ ಸೋಮನಾಯಕ, ವೀರಶೈವ ಅಖಿಲ ಭಾರತ ಮಹಾಸಭಾ ಜಿಲ್ಲಾಧ್ಯಕ್ಷ ಮೂಡ್ಲುಪುರ ನಂದೀಶ್, ಚುಡಾ ಮಾಜಿ ಅಧ್ಯಕ್ಷರಾದ ಕುಲಗಾಣ ಶಾಂತಮೂರ್ತಿ, ಬಾಲಸುಬ್ರಹ್ಮಣ್ಯಂ, ಶ್ರೀವಿದ್ಯಾ ಗಣಪತಿ ಮಂಡಳಿ ಗೌರವಾಧ್ಯಕ್ಷ ಶಿವಣ್ಣ, ಉಪಾಧ್ಯಕ್ಷ ಬುಲೆಟ್ ಚಂದ್ರು, ಪ್ರಧಾನ ಕಾರ್ಯದರ್ಶಿ ವಿರಾಟ್ ಶಿವು, ಖಜಾಂಚಿ ಮಹೇಶ್ ಪಟೇಲ್, ಸುದರ್ಶನ್ ಗೌಡ, ಮಂಜುನಾಥಗೌಡ, ಎಸ್.ಕಿರಣ್, ಮಹೇಂದ್ರ, ರಾಜು, ನಾಗೇಂದ್ರ ಬಾಬು, ರುದ್ರ, ಮಂಡಳಿ ಪದಾಧಿಕಾರಿಗಳು ಹಾಜರಿದ್ದರು.

ಸಾಲಬಾಧೆಯಿಂದ ರೈತ ಆತ್ಮಹತ್ಯೆ



ಬೇಗೂರು, ಅ.4–ಸಾಲಬಾಧೆಯಿಂದ ರೈತ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಗುಂಡ್ಲುಪೇಟೆ ತಾಲೂಕಿನ ಕಾಳನಹುಂಡಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ರಮೇಶ್(50) ಮೃತ ರೈತ. ಈತ ಖಾಸಗಿ ಬ್ಯಾಂಕ್ ಹಾಗೂ ಖಾಸಗಿ ವ್ಯಕ್ತಿಗಳಿಂದ ಸುಮಾರು 5–6 ಲಕ್ಷ ರೂ. ಸಾಲ ಮಾಡಿದ್ದರು. ಆದರೆ, ಕಳೆದ ಮೂರು ವರ್ಷಗಳಿಂದ ಜೋಳ, ಸೂರ್ಯಕಾಂತಿ, ಈರುಳ್ಳಿ ಫಸಲು ಕೈ ಸೇರದ ಹಿನ್ನೆಲೆಯಲ್ಲಿ ಸಾಲ ಹೆಚ್ಚಾಗಿದ್ದರಿಂದ ಬೇಸತ್ತು ತಮ್ಮ ಜಮೀನಿನ ಮರಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಸಂಬಂಧ ಬೇಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿದ್ಯಾರ್ಥಿನಿಲಯಕ್ಕೆ ಸಿಇಓ ದಿಢೀರ್ ಭೇಟಿ



ಚಾಮರಾಜನಗರ ಮೆಟ್ರಿಕ್ ವಿದ್ಯಾರ್ಥಿನಿಲಯಕ್ಕೆ ಭೇಟಿ ನೀಡಿದ ಜಿಪಂ ಸಿಇಓ ಮೋನಾ ರೋತ್ ಸಿಬ್ಬಂದಿಯಿಂದ ಮಾಹಿತಿ ಪಡೆದರು.

ಚಾಮರಾಜನಗರ: ನಗರದ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಬಾಲಕರ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಕ್ಕೆ ಜಿಪಂ ಸಿಇಓ ಮೋನಾ ರೋತ್ ಶುಕ್ರವಾರ ದಿಢೀರ್ ಭೇಟಿ, ಪರಿಶೀಲಿಸಿದರು.

ಹಾಸ್ಟೆಲ್‌ನಲ್ಲಿ ನೀಡುತ್ತಿರುವ ಸೌಲಭ್ಯದ ಬಗ್ಗೆ ವಿದ್ಯಾರ್ಥಿನಿಯರಿಂದ ಮಾಹಿತಿ ಪಡೆದರು. ಅಲ್ಲದೆ, ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ಹಾಜರಾತಿ ಪರಿಶೀಲಿಸಿದರು. ಗ್ರಂಥಾಲಯ, ಅಡುಗೆ ಕೋಣೆ, ದಾಸ್ತಾನು ಕೊಠಡಿ ಹಾಗೂ ಶೌಚಾಲಯವನ್ನು ಸ್ವಚ್ಛವಾಗಿಟ್ಟುಕೊಳ್ಳುವಂತೆ ಸಿಬ್ಬಂದಿಗೆ ಸೂಚಿಸಿದರು. ನಂತರ ಮೆಟ್ರಿಕ್ ಬಾಲಕರ ವಿದ್ಯಾರ್ಥಿನಿಲಯದ 7 ಕೊಠಡಿಗಳ ಕಾಮಗಾರಿ ಪರಿಶೀಲಿಸಿದರು. ಈ ಸಂದರ್ಭದಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಧಿಕಾರಿ ಪ್ರಕಾಶ್ ಹಾಗೂ ಸಿಬ್ಬಂದಿ ಹಾಜರಿದ್ದರು.

ಪ್ಲಾಸ್ಟಿಕ್ ಮುಕ್ತಗೊಳಿಸಲು ಸಾರ್ವಜನಿಕರು ಕೈಜೋಡಿಸಿ

ಗುಂಡ್ಲುಪೇಟೆ, ಅ.4–ಸ್ವಚ್ಛತೆ ಕಾಪಾಡುವ ಮೂಲಕ ಪಟ್ಟಣವನ್ನು ಪ್ಲಾಸ್ಟಿಕ್ ಮುಕ್ತವಾಗಿಸಲು ಸಾರ್ವಜನಿಕರು ಪುರಸಭೆಯೊಂದಿಗೆ ಕೈಜೋಡಿಸಬೇಕು ಎಂದು ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಹೇಳಿದರು.

ಪಟ್ಟಣದ ನೆಹರು ವೃತ್ತದಲ್ಲಿ ಪುರಸಭೆ ವತಿಯಿಂದ ಆಯೋಜಿಸಿದ್ದ ಗಾಂಧಿ ಜಯಂತಿ ಕಾರ್ಯಕ್ರಮಕ್ಕೆ ಸಸಿ ನೆಡುವ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು, ದಿನೇ ದಿನೆ ಅಭಿವೃದ್ಧಿಹೊಂದುತ್ತಿರುವ ಪಟ್ಟಣದಲ್ಲಿ ಸ್ವಚ್ಛತೆ ನಿರ್ವಹಣೆ ಸವಾಲಾಗುತ್ತಿದೆ. ಹಸಿ ಮತ್ತು ಒಣ ಕಸಗಳನ್ನು ಪ್ರತ್ಯೇಕವಾಗಿ ಅಳವಡಿಸಿರುವ ಕಸದ ತೊಟ್ಟಿಗಳಿಗೆ ಹಾಕಬೇಕು. ಇದರಿಂದ ಪಟ್ಟಣದ ಸ್ವಚ್ಛತೆಗೆ ನೆರವಾಗುತ್ತದೆ ಎಂದರು.

ಇತ್ತೀಚಿನ ದಿನಗಳಲ್ಲಿ ಪ್ಲಾಸ್ಟಿಕ್ ಬಳಕೆ ಹೆಚ್ಚಾಗುತ್ತಿರುವುದರಿಂದ ತ್ಯಾಜ್ಯದಿಂದ ಅಪಾರ ಹಾನಿಯುಂಟಾಗುತ್ತಿದೆ. ಆದ್ದರಿಂದ ಸಾರ್ವಜನಿಕರು ಆದಷ್ಟು ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡುವ ಜತೆಗೆ ತ್ಯಾಜ್ಯವನ್ನು ಎಲ್ಲೆಂದರಲ್ಲಿ ಬೀಸಾಡದೆ ಪಟ್ಟಣದ ಸ್ವಚ್ಛತೆಗೆ ಪುರಸಭೆಯೊಂದಿಗೆ ಕೈಜೋಡಿಸಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಚಾಮುಲ್ ನಿರ್ದೇಶಕ ಹೆಚ್.ಎಸ್.ನಂಜುಂಡಪ್ರಸಾದ್, ಪುರಸಭೆ ಅಧ್ಯಕ್ಷ ಕಿರಣ್‌ಗೌಡ, ಉಪಾಧ್ಯಕ್ಷೆ ಹೀನಾಕೌಸರ್, ಮುಖ್ಯಾಧಿಕಾರಿ ವಸಂತಕುಮಾರಿ, ಸದಸ್ಯರಾದ ಮಧು, ಕುಮಾರ್, ಕಪ್ಪಣ್ಣ, ಅಲ್ಲಾಹು, ಮುಖಂಡರಾದ ಕುಮಾರಸ್ವಾಮಿ, ಹೆಚ್.ಎನ್.ಬಸವರಾಜು, ಪಿ.ಬಿ. ರಾಜಶೇಖರ್, ಪುಟ್ಟಸ್ವಾಮಾಚಾರ್, ಭಾಗ್ಯಮ್ಮ ಇದ್ದರು.



ಸ್ವಚ್ಛತಾ ಕಾರ್ಯಕ್ರಮಕ್ಕೆ ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಸಸಿ ನೆಡುವ ಮೂಲಕ ಚಾಲನೆ ನೀಡಿದರು.

ಪೊಲೀಸ್ ಕರ್ತವ್ಯ ಕೂಟದಲ್ಲಿ ಜಿಲ್ಲೆಗೆ 7 ಪದಕ



ಮೈಸೂರಿನ ಕರ್ನಾಟಕ ಪೊಲೀಸ್ ಅಕಾಡೆಮಿ ಸಭಾಂಗಣದಲ್ಲಿ ನಡೆದ ಪೊಲೀಸ್ ಕರ್ತವ್ಯ ಕೂಟದಲ್ಲಿ ಪದಕ ಪಡೆದ ಸಂತೆಮರಳ್ಳಿ ಠಾಣೆ ಪಿಎಸ್‌ಐ ಟಿ.ಎಂ.ತಾಜುದ್ದೀನ್ ಪ್ರಶಸ್ತಿ ಸ್ವೀಕರಿಸಿದರು.

ಯಳಂದೂರು: ಮೈಸೂರಿನ ಕರ್ನಾಟಕ ಪೊಲೀಸ್ ಅಕಾಡೆಮಿ ಸಭಾಂಗಣದಲ್ಲಿ ನಡೆದ 6ನೇ ವಲಯ ಮಟ್ಟದ ಪೊಲೀಸ್ ಕರ್ತವ್ಯ ಕೂಟದಲ್ಲಿ ಚಾಮರಾಜನಗರ ಜಿಲ್ಲೆಗೆ 2 ಚಿನ್ನ, 3 ಬೆಳ್ಳಿ, 2 ಕಂಚು ಸೇರಿ ಒಟ್ಟು 7 ಪದಕ ಹಾಗೂ ಪ್ರಶಸ್ತಿ ಲಭಿಸಿದೆ.

ಸಂತೆಮರಳ್ಳಿ ಪೊಲೀಸ್ ಠಾಣೆ ಪಿಎಸ್‌ಐ ಟಿ.ಎಂ. ತಾಜುದ್ದೀನ್ ಅವರು ತಲಾ 1 ಚಿನ್ನ, ಬೆಳ್ಳಿ ಹಾಗೂ ಕಂಚಿನ ಪದಕಗಳನ್ನು ಮುಡಿಗೇರಿಸಿಕೊಂಡರು. ಚಾಮರಾಜನಗರದ ವಿಶಾಲ್ ಅವರು ಬಾಂಬ್ ನಿಷ್ಕ್ರಿಯ ವಿಭಾಗದಲ್ಲಿ 1 ಚಿನ್ನ, 1 ಕಂಚು, ಮಹದೇಶ್ವರಬೆಟ್ಟ ಠಾಣೆಯ ಸಂಜು ಕಂಪ್ಯೂಟರ್ ವಿಭಾಗದಲ್ಲಿ ಒಂದು ಬೆಳ್ಳಿ ಹಾಗೂ ಗುಂಡ್ಲುಪೇಟೆ ಠಾಣೆಯ ಶಂಭು ಫೋಟೋಗ್ರಫಿ ವಿಭಾಗದಲ್ಲಿ ಒಂದು ಬೆಳ್ಳಿ ಪಡೆದುಕೊಂಡಿದ್ದಾರೆ.

ದಕ್ಷಿಣ ವಲಯ ಡಿಐಜಿಪಿ ಡಾ.ಎಂ.ಬಿ.ಬೋರಲಿಂಗಯ್ಯ ಪ್ರಶಸ್ತಿ ವಿತರಿಸಿದರು. ಪದಕ ಪಡೆದ ಪೊಲೀಸರಿಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ ಹಾಗೂ ಪೊಲೀಸ್ ಅಧಿಕಾರಿಗಳು ಅಭಿನಂದಿಸಿ, ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಎ.ಜಿ.ಲಿಂಗಯ್ಯ ನಿಧನ



ಚಾಮರಾಜನಗರ, ಅ.4– ತಾಲೂಕು ಅಂಕನಶೆಟ್ಟಿಪುರ ಗ್ರಾಮದ ನಿವಾಸಿ ಹಾಗೂ ನಿವೃತ್ತ ಕಾರ್ಯಪಾಲಕ ಇಂಜಿನಿಯರ್ ಎ.ಜಿ.ಲಿಂಗಯ್ಯ(80) ಶುಕ್ರವಾರ ನಿಧನರಾದರು. ಮೃತರು ಪತ್ನಿ ರತ್ನಮ್ಮ, ಪುತ್ರ ಮಲ್ಲಿಕಾರ್ಜುನಸ್ವಾಮಿ, ಪುತ್ರಿ ವನಜಾಕ್ಷಿ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಶನಿವಾರ ಮಧ್ಯಾಹ್ನ ಸತ್ತಿ ರಸ್ತೆಯ ವೆಂಕಟಯ್ಯನಛತ್ರ ಸರ್ಕಲ್ ಬಳಿಯ ಮೃತರ ತೋಟದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲ ತಿಳಿಸಿದೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಜಮೀನು ಬೇಕಾಗಿದೆ
100x100 ಅಳತೆಯ ಜಮೀನು ಬಾಡಿಗೆಗೆ/ಲೀಸ್‌ಗೆ ಮೈಸೂರು ರಿಂಗ್ ರೋಡ್ ಟಚ್, ಹಿನಕಲ್ ಬ್ರಿಡ್ಜ್ ಇಂದ ಬೋಗಾದಿ ಸಿಗ್ನಲ್ ವರೆಗೆ
9988448229

SBIT TRAVELS
Group Tours-5N6D
Bali
Nov:15, 20 | Dec:5 | Jan:14, 19, 21, 29
Baku
Nov:1 | Dec:1, 6 | Jan:9, 13, 20, 29
Singapore & Malaysia
Oct: 27 | Nov: 1, 12, 16, 27
Dec: 1, 3 | Jan:10, 12, 18, 20, 25
9343524127
(Saraswathipuram, Mysuru)

SOBHA DEVELOPERS
SITE FOR SALE
ಬೋಗಾದಿ ಮುಖ್ಯ ರಸ್ತೆಯ ಪ್ರತಿಷ್ಠಿತ "ಶೋಭ ರಿಟ್ರೀಟ್" ಲೇಔಟ್‌ನಲ್ಲಿ ಸೈಟುಗಳು ಲಭ್ಯ.
9886048471

ನಿವೇಶನ ಮಾರಾಟಕ್ಕಿದೆ
30x40 ದಕ್ಷಿಣ ದಿಕ್ಕು, ಧಾತ್ರಿನಗರ, ಎಂಐಟಿ ಕಾಲೇಜು ಹತ್ತಿರ, ಕೆಸರೆ
ಬ್ಯಾಂಕ್ ಲೋನ್ ಸೌಲಭ್ಯವಿರುತ್ತದೆ
ಸಂಪರ್ಕಿಸಿ: 9739826533

ಸಿಪಾಯಿ ಪ್ರಾಪರ್ಟೀಸ್
1. ಕುಬೇರಾನಂದ ಸಾಗರ ಲೇಔಟ್, East Face 30x40 ಅಳತೆಯ ಸೈಟ್ ಮಾರಾಟಕ್ಕಿದೆ ಬೆಲೆ 25 ಲಕ್ಷ ನೆಗೋಷಿಯೇಬಲ್
2. ಇಲವಾಲ ಬಸ್ ನಿಲ್ದಾಣ ಹಿಂಭಾಗದಲ್ಲಿರುವ ಬಸವಸಾಗರ ಫೇಸ್ 2ನೇ ಹಂತದಲ್ಲಿ 30x40 ಅಳತೆಯ ನಾರ್ತ್ ಫೇಸ್ ಸೈಟ್ ಮಾರಾಟಕ್ಕಿದೆ ಬೆಲೆ 30 ಲಕ್ಷ ನೆಗೋಷಿಬಲ್ ಮತ್ತು 60 ಅಡಿ ರಸ್ತೆಯಲ್ಲಿ 40x60ಅಳತೆಯ ಸೈಟ್‌ಗಳು ಮಾರಾಟಕ್ಕಿವೆ ಬೆಲೆ 60 ಲಕ್ಷ ನೆಗೋಷಿಬಲ್
ನಂಜುಂಡಸ್ವಾಮಿ ಹೆಚ್.ಎಸ್, ಮಾಜಿ ಸೈನಿಕರು ಮೊ: 9483862050
ಶರತ್‌ಕುಮಾರ್ ಮೊ. 7829779070

SITE FOR SALE
ದಟ್ಟಗಳ್ಳಿ ಹತ್ತಿರದ ಕ್ರೈಸ್ಟ್ ಪಬ್ಲಿಕ್ ಸ್ಕೂಲ್ ಹತ್ತಿರ 20×30 ಅಳತೆ ಸೈಟ್ ಲಭ್ಯ
9886048471

ಶ್ರೀ ಗೌರೀಶಂಕರ ಟ್ರಾವೆಲ್ಸ್
24–11–24 (6 ದಿನ): ಗುರುವಾಯೂರು, ಮುನ್ನಾರ್, ತ್ರಿವೇಂಡ್ರಂ, ಕಾಲಡಿ, ಆಲಪ್ಪಿ, ಕೊಚ್ಚಿನ್, ತಿರುಪ್ಪೂರು, ಇತ್ಯಾದಿ.
12–12–24 (9 ದಿನ): ಅಹಮದಾಬಾದ್, ಮಾತೃ ಗಯಾ, ದ್ವಾರಕ, ನಾಗೇಶ್ವರ್, ಸೋಮನಾಥ್, ಪೋರ್‌ಬಂದರ್, ಓಂಕಾರೇಶ್ವರ, ಉಜ್ಜಯಿನಿ, ಎಸ್‌ವಿಪಿ ಸ್ಟ್ಯಾಚ್ಯು, ಇತ್ಯಾದಿ.
(ವಿಮಾನ, ಬಸ್, ಊಟ, ರೂಂ)
Mob: 9620002114

ಹೊಸ ಮನೆ ಮಾರಾಟಕ್ಕಿದೆ
20x30 S/E Ground & First Floor
ವಿನಾಯಕ ಗಾರ್ಡನ್ ಸಿಟಿ ಗೋಲ್ಡ್ ನರಸೀಪುರ ರೋಡ್ ರಾಜಶೇಖರ್ Hospital Opp.
8310972636
9886481265

WANTED
40X50 OR 40X60 Site with MUDA or 11A Khata Approved around yelawala, Belavadi Hootagalli, Anandasagar
(Immediate Registration)
8867779326

MUDA SITE FOR SALE
ವಿಜಯನಗರ 4ನೇ ಹಂತ "ಯುರೇಖ ಎನ್‌ಕ್ಲೇವ್"ನಲ್ಲಿ 30x40 North Facing ಸೈಟ್.
9886048471

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

SITE FOR SALE
30x40 East, MUDA Khatha, Bhairava Enclave, Ganigara Hundi, Bogadi Road, Mysore.
Mob: 9663166355

HOUSE SALE
Kuvempunagar
MUDA,2+1 BHK, Residential Old House, 35x55,N/F,Park Opposite,
Price -2.10 Cr,
Near Vijaya Bank Circle,
Contact Owners,Brokers Excuse
9035412545

ಹೊಸ ಮನೆ ಮಾರಾಟಕ್ಕಿದೆ
3BHK 30X40
Built up Area 1500 SF
ಮುಡಾ ಅಪ್ರೂವ್
ಸೆಂಟ್ ಜೋಸೆಫ್ ಶಾಲೆಯ ಹತ್ತಿರ ಹಯಿಲಾಳು ಮೈಸೂರು
8217851695

SITE FOR SALE
N/E Corner 60x70 Suvarna Nagara bhogadi Road
8050821108

SK CONSTRUCTION
ಹೊಸ ಮನೆ ಕಟ್ಟಬೇಕೆ ಚಿಂತೆ ಬೇಡ ನಿಮ್ಮ ಕೈಗೆಟಕುವ ಬೆಲೆಯಲ್ಲಿ ಅತಿ ಉತ್ತಮ ಗುಣಮಟ್ಟದಲ್ಲಿ Engineer, Plan, 3D Eleivation ಸಹಿತ ನಾವೆ ಲೋನ್ ಮಾಡಿ ನಿಮ್ಮ ಕನಸಿನ ಮನೆ ಕಟ್ಟಿಕೊಡುತ್ತೇವೆ.
9620528490

FOR RENT
2BHK, 16 HOUSES SUITABLE FOR P.G HOSTEL ETC.
Housing Board, Hootagalli, Mysore
9980685348
8970326846

ಪ್ರವಾಸ
12 ದಿನಗಳ ಗುಜರಾತ್ ಮತ್ತು ಮಧ್ಯ ಪ್ರದೇಶ 4 ಜ್ಯೋತಿರ್ಲಿಂಗಗಳೊಂದಿಗೆ ಅಹಮದಾಬಾದ್ ಭಾವನಗರ ದ್ವಾರಕ ಪ್ರವಾಸ 14–10–24.
7 ದಿನಗಳ ಕೇರಳ ಗುರುವಾಯೂರ್, ಮುನ್ನಾರ್, ಕಲಾಡಿ, ಕೊಚ್ಚಿನ್, ಆಲಪ್ಪಿ 13–10–24.
ಸುವರ್ಣ ಯಾತ್ರಾ
8660233673 / 9019462508

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, Kuvempunagar, Mysuru
MYSURU 9611028523 BANGALORE 9343142258

HOUSE FOR SALE
30'x40' Duplex 3 BHK house at Vijayanagar 4th Stage, Mysore. Contact:
Mob: 63660-01419
BROKERS EXCUSE

HOUSE FOR SALE
20x30 East face, Ground, First, Second Floor, #83, 2nd Cross, Aravinda Nagar, Near Ashokapuram Railway Station, Mysuru.
9742992606, 9742883552

airtel
AIRTEL
Sales Promoter
Salary 20000
Incentive up to 5000
7899857834

ವಾಣಿಜ್ಯ ನಿವೇಶನ ಮಾರಾಟಕ್ಕಿದೆ
1) 50x80 ಪಶ್ಚಿಮ ಮುಖ KHB 3ನೇ ಹಂತ ಆದಿಚುಂಚನಗಿರಿ 80 ಅಡಿ ಮುಖ್ಯರಸ್ತೆ ಅಪೊಲೋ ಆಸ್ಪತ್ರೆ ರಸ್ತೆ, ಕುವೆಂಪುನಗರ, ಮೈಸೂರು
2) 45x60 ಉತ್ತರ ಮುಖ ಎನ್. ಬ್ಲಾಕ್ KSRTC ಡಿಪೋ ಹತ್ತಿರ 80 ಅಡಿ ಮುಖ್ಯರಸ್ತೆ, ಕುವೆಂಪುನಗರ, ಮೈಸೂರು
9448166798

ನಿರ್ಮಲ ಸರ್ವೀಸ್
ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

ಕೇರಳ ಕೊಳ್ಳೇಗಾಲದ ಶ್ರೀ ಭದ್ರಕಾಳಿ ಶ್ರೀ ಭಗವತಿ ಜ್ಯೋತಿಷ್ಯರು
ಪಂಡಿತ॥ ಕುಮಾರ್ ಗುರುನಂದನ್
9972290933
ಇವರು ಕೇರಳದ ಮಡಯಿಕಾವು ಶ್ರೀರಾಜರಾಜೇಶ್ವರಿ ಭದ್ರಕಾಳಿ ಶ್ರೀ ಭಗವತಿ, ಶಕ್ತಿಯಿಂದ, ಅಕಪೂಜಾ, ಗುರುಸಿ ಕರೀಂಕಳಸ, ತವಪಲಿದೀಪ, ರಕ್ತಪುಷ್ಪಾಂಜಲಿ ಮತ್ತು ಕೊಳ್ಳೇಗಾಲದ ಚೌಡಿ, ಭೂತರಾಯ, ಆಗೋಚರ, ಕಾಟೇರಿ, ಪ್ರಯೋಗದಿಂದ, ಸ್ತ್ರೀ ಪುರುಷ, ಪ್ರೇಮ ದಾಂಪತ್ಯ ಸಮಸ್ಯೆ, ವ್ಯಾಪಾರ, ಸಂತಾನ, ಮದುವೆ, ಸಾಲ ಬಾಧೆ, ಶತ್ರುಸಂಹಾರ, ವಿದೇಶ ಪ್ರಯಾಣ, ರಾಜಕೀಯ, ತನ್ನವರೆ ತನಗೆ ಶತ್ರು, ಪ್ರೇತಬಾಧೆ, ಇನ್ನೂ ಯಾವುದೇ ಗುಪ್ತಗೂಢ, ಸಮಸ್ಯೆಗಳಿಗೆ ಮೇಲಿನ ಪೂಜಾ ಶಕ್ತಿಯಿಂದ 2 ದಿನದಲ್ಲಿ ಪರಿಹಾರ ಶತಃಸಿದ್ಧ
ವಿಳಾಸ: ನಂ.19, ಶಿವಕಾಂಪ್ಲೆಕ್ಸ್, ಅಂಬಾರಿ ಹೋಟೆಲ್ ಪಕ್ಕ, ದೇವೇಗೌಡ ಸರ್ಕಲ್, ಮೈಸೂರು

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

SKANDA PROPERTIES
We Build Your Dream House
Construction Packages Starting from

Call: 9379888558

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

MUDA APPROVED SITES FOR SALE
ಗದ್ದಿಗೆ ರಸ್ತೆಯಲ್ಲಿರುವ ಸೆಂಟ್ ಫ್ರಾನ್ಸಿಸ್ ಸ್ಕೂಲ್ ಹಿಂಭಾಗದಲ್ಲಿರುವಂತಹ "ಸುವರ್ಣನಗರ" ಬಡಾವಣೆಯ ಪಕ್ಕದಲ್ಲಿರುವಂತಹ ಸಾನ್ವಿ ಬಡಾವಣೆಯಲ್ಲಿ 30x40, 30x43 ಅಳತೆಯ ಸೈಟುಗಳು ಮಾರಾಟಕ್ಕಿದೆ. ಬೆಲೆ 23 ಲಕ್ಷ ನೆಗೋ.
Mob: 9483862050,
7829779070 / 7892846068

FOR SALE
1. Properties at Kuvempu Nagar Starting @ 35L
2. 20x30 Site @Vijaya Nagar 4th stg
3. 14x100 Old Hs @ Ramavilas Rd
4. Old Hs @ Krishnamurthy Puram
5. Properties For Sale at Vidyaranyapuram
6. 20x30 Site Near SBM Lyt, Bogadhi
7. Ready to Move Apartments @ Hebbal
8. Commercial Properties @ Saraswathi Puram, Kuvempu Ngr & Hunsur Rd
PRAKRUTHI PROPERTIES
95386 90359, 90359 90359

ಜಾಗ ಬೇಕಾಗಿದೆ
ಫ್ಯಾಮಿಲಿ ರೆಸ್ಟೋರೆಂಟ್ ನಡೆಸಲು ಉತ್ತಮವಾದ ಜಾಗ ಇದ್ದಲ್ಲಿ ಸಂಪರ್ಕಿಸಿ.
Mob: 9900661620

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

SITE FOR SALE
30x40 East and North facing, MUDA Khatha, Bavani Enclave, next to KNS Calisto Lay-out, Kergalli, Mysore.
Mob: 9663166355

SITE FOR SALE
40x60 NW Corner, Opp. to CA site, MUDA Khatha, D. Ravishankar Layout, Near Christ Public School, attached to Judicial Layout, New Kantharaj Urs Road, Dattagalli, Mysuru.
Mob: 9663166355

SITE FOR SALE
30x40 East, MUDA Khatha, Dr. Dayanagar, Next to ESS ESS Layout, K. Hemmanahalli, Bogadi Road, Mysuru.
Mob: 9663166355



Solar Water Heater
SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

HOUSE FOR SALE
in Yadavagiri
20 years old house, cellar & first floor (43x63), North facing.
Mob: 9620961369

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8880558064

ಮನೆ ಮಾರಾಟಕ್ಕಿದೆ
ಹೊಸದಾಗಿ ಕಟ್ಟಿರುವ ಮನೆ 21 ಚದರಡಿ ಇದ್ದು, ಡೂಪ್ಲೆಕ್ಸ್ ಮನೆ, 30x40 ಕಾರ್ನರ್ ನಿವೇಶನ ಸಂಖ್ಯೆ 23, ಶ್ರೀನಗರ ಬಡಾವಣೆ, ವಿಬಿ ಸಿಟಿ ಪಕ್ಕ, ಕೆ.ಆರ್.ಎಸ್. ರಸ್ತೆ, ಮೈಸೂರು.
9538072720, 9886217207

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9113601866

ಹೊಸ ಮನೆ ಮಾರಾಟಕ್ಕಿದೆ
20/40 East facing
MUDA with clear documents
3BHK , Own Borewell
Police layout ,near Ring road
Call: 9380284276

ಬೇಕಾಗಿದ್ದಾರೆ
ಮೈಸೂರಿನ ಹೆಬ್ಬಾಳಿನಲ್ಲಿರುವ ಪೆಟ್ರೋಲ್ ಬಂಕ್‌ನಲ್ಲಿ ಕೆಲಸಕ್ಕಾಗಿ ಪುರುಷರು/ಮಹಿಳೆಯರು ಸಮಯ ಬೆಳಿಗ್ಗೆ 8 ರಿಂದ ಸಂಜೆ 5ರವರೆಗೆ ಬೇಕಾಗಿದ್ದಾರೆ.
ಸಂಬಳ: 15,000/–
8892258814

SITE WANTED IMMEDIATELY
40x60 E/N Face
Suncity Homes
Hunsur Main Road.
Only owner's can call
Call: 9448958332

ತಕ್ಷಣ ಬೇಕಾಗಿದ್ದಾರೆ
ವಿದ್ಯಾರ್ಹತೆ: ಪಿಯುಸಿ, ಯಾವುದೇ ಡಿಗ್ರಿ, ಬಿಬಿಎ (Pass or Fail). ಹುದ್ದೆ: Front Office. ಸಂಬಳ: 15,000. ಅನುಭವ: 1 ರಿಂದ 3 ವರ್ಷ. ವಿ.ಸೂ. ಪುರುಷ ಅಭ್ಯರ್ಥಿಗಳಿಗೆ ಮಾತ್ರ
9880151303, 8762361391

10 ಗುಂಟೆ ಜಮೀನು ಮಾರಾಟಕ್ಕಿದೆ
ಶ್ರೀರಾಂಪುರ ರಿಂಗ್ ರಸ್ತೆ ಇಂದ 15 ಕಿ.ಮಿ. ದೂರದಲ್ಲಿ 10 ಗುಂಟೆ ಜಮೀನು 14 ಲಕ್ಷಗಳಿಗೆ ಮಾರಾಟಕ್ಕಿದೆ.
7411110087 (Owner)

ADMISSION OPEN
Tally Prime with GST
Certification course, 100% job opportunity. Regular / Weekly / Flexible batches. Free basic computer & instalment available. Excellent Trainer: BS Sir (Commerce Tally Resource person)
Register for one day free workshop.
Mob: 8762851170
Classes at SSI Education, Saraswathipuram

ಹೊಸ ಮನೆ ಮಾರಾಟಕ್ಕೆ ಇದೆ
ರಮಾಬಾಯಿನಗರ ರೈಲ್ವೆ ಬಡಾವಣೆ ನಿಯರ್ ಜೆ.ಪಿ. ನಗರ
3 BHK 20x40
ಸೌತ್‌ವೆಸ್ಟ್ ಕಾರ್ನರ್ ಮನೆ.
9448307057, 9036286661

ತಕ್ಷಣ ಬೇಕಾಗಿದ್ದಾರೆ
1) ಹೌಸ್ ಕೀಪಿಂಗ್ ಕೆಲಸಕ್ಕೆ ಮಹಿಳೆಯರು(ಊಟದ ವ್ಯವಸ್ಥೆ ಇರುತ್ತದೆ) ಸ್ಥಳ: ಒಂಟಿಕೊಪ್ಪಲ್, ಹಿನಕಲ್, ಬೆಳವಾಡಿ
2) ಸೆಕ್ಯೂರಿಟಿ ಸೂಪರ್‌ವೈಸರ್– (ಕೆ.ಆರ್.ಎಸ್, ಬೆಳಗೊಳ, ಕೂರ್ಗಳ್ಳಿ)
9739166772
9880419847

ಕೆಲಸಕ್ಕೆ ಬೇಕಾಗಿದ್ದಾರೆ
ಯುವತಿಯರು ಮತ್ತು ಮಹಿಳೆಯರು ಕೆಲಸಕ್ಕೆ ಬೇಕಾಗಿದ್ದಾರೆ. ಬೆಳಿಗ್ಗೆ 8 ರಿಂದ ಸಂಜೆ 6ರ ವರೆಗೂ
ಸಂಪರ್ಕಿಸಿ:
9606714441
8618233992
0821-4242351

Wanted immediately
1) Office Assistant cum Car Driver
2) Marketing Manager (Male)
(For Real Estate office)
* Age: Below 35 years with minimum 2-3 years experience. Preference: Hootagalli surrounding people.
MYSORE PROPERTIES, Hootagalli
Call: 9448958332

ತಕ್ಷಣ ಬೇಕಾಗಿದ್ದಾರೆ
ವಿದ್ಯಾರ್ಹತೆ: 7th, SSLC, ಪಿಯುಸಿ, ಡಿಪ್ಲೊಮ, ಡಿಗ್ರಿ, ಪಾಸ್ ಅಥವಾ ಫೇಲ್.
ಸಂಬಳ: 15,000 ರಿಂದ 32000.
ವಿ.ಸೂ.: ಪುರುಷ ಅಭ್ಯರ್ಥಿಗಳಿಗೆ ಮಾತ್ರ ಅವಕಾಶ. ಸಂಪರ್ಕಿಸಿ:
9880151303, 8762361391

MUDA APPROVED SITE FOR SALE
VINYAS SILICON VALLY BASTIPURRA K.R.S TO YELAWALA MAIN ROAD
30X50 W/F RS. 50 LAKHS
20X30 W/F RS. 20 LAKHS
NEGOSIABLE
9341384844

VOKKALIGA MATRIMONY
Degree/BE/MBA/MCA/MBBS/Govt. Employee
ವಧು–ವರರಿಗಾಗಿ ಸಂಪರ್ಕಿಸಿ
(Contact for all caste)
9343175000

WANTED
Female customer care Executive for a Reputed Matrimony Consultancy
Any Degree / Diploma PUC, Computer knowledge Must
9343175000

LAYOUT SUITABLE LAND FOR SALE
9acre General Land, Gaddige Road
Near Mahalingeshwara Temple, Mysore
9663166355

SITE FOR SALE
30X40 SITE FOR SALE NEAR JP NAGAR RING ROAD 30X50 SITE FOR SALE IN OTHER'S BANKERS LAYOUT 20X30 SITE FOR SALE IN BOGADI 2ND STAGE CONACT
9880344263

ಶ್ರೀ ವಿಶ್ವಕರ್ಮ ವಿವಾಹ ವೇದಿಕೆ
ಕುವೆಂಪುನಗರ, ಮೈಸೂರು
ವಿಶ್ವಕರ್ಮ ಮತದವರು ವಧು ವರರಿಗಾಗಿ ಸಂಪರ್ಕಿಸಿ:
9731502119

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಪಿ.ಜಿ.ಗೆ ಬೇಕಾಗಿದೆ
ಅಡುಗೆ ಭಟ್ಟ–ಸಹಾಯಕರು, ಮಹಿಳೆಯರು ಗಂಡಸರು ಮತ್ತು ಪಿ.ಜಿ. ನೋಡಿಕೊಳ್ಳಲು ಹುಡುಗರು ಬೇಕಾಗಿದ್ದಾರೆ.
6366200865

ಬೇಕಾಗಿದ್ದಾರೆ
ಮೈಸೂರಿನ ಕಾಳಿದಾಸ ರಸ್ತೆ–ಜಯಲಕ್ಷ್ಮೀಪುರಂನಲ್ಲಿ ಇರುವ ಶುದ್ಧ ಸಸ್ಯಾಹಾರಿ ಹೋಟೆಲ್‌ಗೆ ಅನುಭವ ಇರುವ ದೋಸಾ ಭಟ್ರು (Dosa Chef) - 2, ಕೌಂಟರ್ (Parcel packing) - 2, ಸರ್ವಿಸ್ (Waiter - supplier) - 2, ನಾರ್ತ್ ಭಟ್ರುಗೆ ಸಹಾಯಕ (North Assistant) - 1, ಸೌತ್ ಕಿಚನ್ allrounder (South Assistant) - 1 ಚಾಟ್ಸ್ ಮಾಸ್ಟರ್ (Chaats Master) 1 ಕೆಲಸಕ್ಕೆ ಬೇಕಾಗಿದ್ದಾರೆ. ಉತ್ತಮ ಸಂಬಳ, ಊಟ ಮತ್ತು ವಸತಿ ಸೌಲಭ್ಯ ಇದೆ
7899028086

SITE FOR SALE
PRICE 63 LAKHS
30X50 MUDA
KBL SILICON CITY
INFOSYS BACK SIDE
9538003006

ಅನುಬಂಧ ಮ್ಯಾರೇಜಸ್
ವಧು–ವರರನ್ನು ಹುಡುಕಲು ಸಹಾಯ ಬೇಕೇ? ನಮಗೆ ಕರೆ ಮಾಡಿ
6361740552

SC ಆದಿಕರ್ನಾಟಕ (ಬಲಗೈ)
MBBS, MD, MS, BE, M.Tech, BAMS, MSc, MBA, Mcom, MCA, MA, PhD, BSC, BCom, BCA, BA, BEd ವಧುವರರಿಗೆ ಸಂಪರ್ಕಿಸಿ:
"ನವಿಲೂರು ರಂಗಸ್ವಾಮಿ ಮೈಸೂರು ಸಿಟಿ ವಧುವರರ ಮಾಹಿತಿ ಕೇಂದ್ರ
ಎನ್.ಆರ್.ಮೊಹಲ್ಲಾ, ಮೈಸೂರು
8711974172

Omni Van for Sale
Good condition, 2007 Model OMNI VAN for Sale (Clear Documents) 1st Owner
1.6 Lakh (Nego)
7204404170

ಮನೆ ಮಾರಾಟಕ್ಕಿದೆ
20x30 ಅಳತೆಯ ಪೂರ್ವ ದಿಕ್ಕಿನ ಎರಡು ಅಂತಸ್ತಿನ ಮನೆ # 10938 ವಿಜಯನಗರ 4ನೇ ಹಂತ, 2ನೇ ಫೇಸ್, ಸಂಕಲ್ಪ ಅಪಾರ್ಟ್‌ಮೆಂಟ್ ಹಿಂಭಾಗ
9591761616

ಶಿರಡಿ ಪ್ರವಾಸ
31–10–24, (5 ದಿನಗಳು) ಕೊಲ್ಹಾಪುರ, ಭೀಮಾಶಂಕರ, ನಾಸಿಕ್, ತ್ರಯಂಬಕೇಶ್ವರ, ಶಿರಡಿ, ಗೃಹ್ನೇಶ್ವರ, ಎಲ್ಲೋರ, ಶನಿಸಿಂಗಾಪುರ, ತುಳಜಾಪುರ, ಪಂಡರಾಪುರ. ಮೈತ್ರಿ ಟ್ರಾವೆಲ್ಸ್
6360422209

WANTED
To Work On Service Division
Qualification : SSLC, PUC, ITI, Pass Or Fail,
Age: 18 To 24 Years
Smart Phone, Driving Licence, Two Wheeler Required
(first Prefrence To Freshers)
Working Place: Mysore
7975368452

ಸೈಟುಗಳು ಮಾರಾಟಕ್ಕಿವೆ
20x30, 30x40 ಶ್ರೀರಾಂಪುರ ರಿಂಗ್ ರೋಡ್ ಹತ್ತಿರ ಮೈಸೂರು
8050345574

HOUSE FOR LEASE
3BHK ground floor East facing 7th cross, Anikethana road P&T block, Kuvempunagar, Near Gnanaganaga school
9052674614

SITE FOR SALE
Golden Palms Corner Site (Muda Khata) Vajayamangala Village Varana Hobli 30x50 N/E
9900012734

SITE FOR SALE
Kuberananda Sagara Yelawala, South Face Site No. 787, I Face, Near Park 30x40 (1165 Sqft) 2800/- Sqft.
9945392347

FOR SALE
T.W. Doors, Steel Windows Steel door frames, T.W. Dining table with chairs, Steel Cots, New Stainless Steel Utensils Etc.
7483125243

ಹೊಸ ಮನೆ ಮಾರಾಟಕ್ಕಿದೆ
ವಿಜಯನಗರ 4ನೇ ಹಂತ 2ನೇ ಫೇಸ್ 20x30 ಪೂರ್ವ ದಿಕ್ಕಿನ Duplex ಹೊಸ ಮನೆ ಮಾರಾಟಕ್ಕಿದೆ. ಬೆಲೆ 86 ಲಕ್ಷ ಆಸಕ್ತರು ಸಂಪರ್ಕಿಸಿ:
8867567754

ಕಂಕಣ ಭಾಗ್ಯ ವಧುವರರ ಮಾಹಿತಿ ಕೇಂದ್ರ
ಮಡಿವಾಳ, ಕುರುಬ, ಲಿಂಗಾಯಿತರು ನಾಯಕ, ಉಪ್ಪಾರ ಹಾಗೂ ವಿಧುರ, ವಿಧವೆಯರು ವಿಚ್ಛೇದಿತರು ಸಂಪರ್ಕಿಸಬಹುದು.
8951092977

ಬೇಕಾಗಿದ್ದಾರೆ
ಮೈಸೂರಿನ ಲ್ಯಾಂಡ್ ಡೆವಲಪರ್ಸ್ ಮತ್ತು ರಿಯಲ್ ಎಸ್ಟೇಟ್ ಕಛೇರಿಯಲ್ಲಿ ಕೆಲಸ ಮಾಡಲು ಯುವತಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ ಪಿ.ಯು.ಸಿ ಡಿಗ್ರಿ
8861042449

ಮೈಸೂರು ಮಿತ್ರ 45
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಕೋಟೆ ಬಳಿ ಬೋನಿಗೆ ಬಿದ್ದ ಚಿರತೆ



ಹೆಚ್.ಡಿ.ಕೋಟೆ, ಅ.4– ಅರಣ್ಯ ಇಲಾಖೆ ಇರಿಸಿದ್ದ ಬೋನಿಗೆ ಶುಕ್ರವಾರ ಮುಂಜಾನೆ 6 ವರ್ಷದ ಗಂಡು ಚಿರತೆ ಬಿದ್ದಿದೆ. ಪಟ್ಟಣದ ಡ್ರೈವರ್ ಕಾಲೋನಿ ಸಮೀಪವಿರುವ ರೈತ ಗುಂಟಮಲ್ಲು ಅವರ ಜಮೀನಿನ ಬಳಿ ಚಿರತೆಗಳ ಹಾವಳಿ ಹೆಚ್ಚಾಗಿದ್ದು, ರೈತರ ಕುರಿ, ಮೇಕೆ, ಹಸುಗಳನ್ನು ಬಲಿ ಪಡೆಯುತ್ತಿತ್ತು.

ಚಿರತೆ ಸೆರೆ ಹಿಡಿಯುವಂತೆ ರೈತರು ಆರ್‌ಎಫ್‌ಓ ಪೂಜಾ ಅವರಿಗೆ ಮನವಿ ಸಲ್ಲಿಸಿದ್ದರು. ಈ ಹಿನ್ನೆಲೆಯಲ್ಲಿ ಅಧಿಕಾರಿಗಳು ಜಮೀನಿನಲ್ಲಿ ಬೋನು ಇರಿಸಿದ್ದರು. ಸೆ.25ರಂದು ಅರಣ್ಯ ಇಲಾಖೆ ಇರಿಸಿದ್ದ ಬೋನಿಗೆ 7 ವರ್ಷದ ಚಿರತೆ ಬಿದ್ದಿತ್ತು. ಇದೀಗ ಅದೇ ಸ್ಥಳದಲ್ಲೇ ಶುಕ್ರವಾರ ಬೆಳಗ್ಗೆ 6 ವರ್ಷದ ಚಿರತೆ ಬೋನಿಗೆ ಬಿದ್ದಿದೆ. ಚಿರತೆಯು ನಿನ್ನೆ ಯಷ್ಟೇ ರೈತ ಚೆನ್ನನಾಯಕ ಅವರ ಹಸು ಬಲಿ ಪಡೆದಿತ್ತು ಎನ್ನಲಾಗಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯ ಇಲಾಖೆಯ ಡಿಆರ್‌ಎಫ್‌ಓ ಪರಮೇಶ್ ಹಾಗೂ ಸಿಬ್ಬಂದಿ ಪರಿಶೀಲನೆ ನಡೆಸಿದರು.

ಈ ವೇಳೆ ರೈತ ಮಹಿಳೆ ರತ್ನಮ್ಮ ಮಾತನಾಡಿ, ಈ ಭಾಗದಲ್ಲಿ ಚಿರತೆ ಹಾವಳಿ ಹೆಚ್ಚಾಗಿದೆ. ನಮಗೆ ಬೆಳಗ್ಗೆ ವಿದ್ಯುತ್ ನೀಡುತ್ತಿಲ್ಲ. ಬದಲಿಗೆ ರಾತ್ರಿ ವೇಳೆ ವಿದ್ಯುತ್ ನೀಡುತ್ತಿದ್ದಾರೆ. ಚಿರತೆ ಹಾವಳಿ ಹೆಚ್ಚಾಗಿರುವುದರಿಂದ ರಾತ್ರಿ ವೇಳೆ ಜಮೀನಿಗೆ ತೆರಳಿ ನೀರು ಹಾಯಿಸಲು ಸಾಧ್ಯವಾಗುತ್ತಿಲ್ಲ.

ಈ ಭಾಗದಲ್ಲಿ ಇನ್ನೂ ಮೂರ್ನಾಕು ಚಿರತೆಗಳಿದ್ದು, ಅವುಗಳ ಸೆರೆಗೆ ಅರಣ್ಯ ಇಲಾಖೆ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದ ಅವರು ಚಿರತೆ ಗುರುವಾರ ನಮ್ಮ ಹಸುವನ್ನು ಬಲಿ ಪಡೆದಿದ್ದು, ಸೂಕ್ತ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದರು. ಅರಣ್ಯ ಇಲಾಖೆ ಅಧಿಕಾರಿಗಳು ಚಿರತೆಯನ್ನು ನಾಗರಹೊಳೆ ಅಭಯಾರಣ್ಯಕ್ಕೆ ಬಿಟ್ಟಿದ್ದಾರೆ.

ಮಾಂಸ ಮಾರುಕಟ್ಟೆಯಿಂದ ಮಕ್ಕಳು, ನಾಗರಿಕರಿಗೆ ತೊಂದರೆ

ಮಾರುಕಟ್ಟೆ ಸ್ಥಳಾಂತರಕ್ಕೆ ಸಾರ್ವಜನಿಕರ ಒತ್ತಾಯ



ತಿ.ನರಸೀಪುರದ ಹೃದಯ ಭಾಗದಲ್ಲಿರುವ ಮಾಂಸ ಮಾರುಕಟ್ಟೆ

ಪುರಸಭೆಗೆ ಲಕ್ಷಾಂತರ ರೂ. ಆದಾಯ ನಷ್ಟ



ಕಳೆದ 10 ವರ್ಷಗಳ ಹಿಂದೆ 70 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ತರಕಾರಿ ಮಾರುಕಟ್ಟೆ ಮಳಿಗೆ ನಿರುಪಯುಕ್ತವಾಗಿದ್ದು, ಪುರಸಭೆಗೆ ಲಕ್ಷಾಂತರ ರೂ. ಆದಾಯ ನಷ್ಟವಾಗಿದೆ. ಅಲ್ಲದೇ ಮಳಿಗೆಗಳು ಅನೈತಿಕ ಚಟುವಟಿಕೆಗಳ ತಾಣವಾಗಿದೆ. ಹೀಗಾಗಿ ಅಲ್ಲಿಗೆ ಕೂಡಲೇ ಡೆಂಗ್ಯೂ, ಟೈಫಾಯಿಡ್ ಸೇರಿದಂತೆ ಅನೇಕ ಸಾಂಕ್ರಾಮಿಕ ರೋಗಗಳಿಗೆ ಆಹ್ವಾನ ನೀಡುವಂತಿರುವ ಮಾಂಸ ಮಾರುಕಟ್ಟೆಯನ್ನು ಸ್ಥಳಾಂತರಿಸಿ ಶಾಲಾ ಮಕ್ಕಳು ಹಾಗೂ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆ ತಪ್ಪಿಸಿ ಪುರಸಭೆ ಆರ್ಥಿಕ ನಷ್ಟವನ್ನು ತಪ್ಪಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಮುಂದಾಗಬೇಕಿದೆ.

-ರಾಜೇಶ್ವರಿ ರಾಘವೇಂದ್ರ, ಪುರಸಭೆ ಉಪಾಧ್ಯಕ್ಷೆ.

ತಿ.ನರಸೀಪುರ, ಅ.4– ಸ್ವಚ್ಛತೆ ಮರೀಚಿಕೆಯಾಗಿರುವ ಪಟ್ಟಣದ ಮಾಂಸ ಮಾರುಕಟ್ಟೆಯಿಂದ ಸಾರ್ವಜನಿಕರು ಹಾಗೂ ಶಾಲಾ ಮಕ್ಕಳು ತೀವ್ರ ತೊಂದರೆ ಅನುಭವಿಸುತ್ತಿದ್ದು, ಮಾರುಕಟ್ಟೆ ಸ್ಥಳಾಂತರಿಸುವಂತೆ ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಪಟ್ಟಣದ ಹೃದಯ ಭಾಗದಲ್ಲಿ ಲಿಂಕ್ ರಸ್ತೆಗೆ ಹೊಂದಿಕೊಂಡಂತಿರುವ ಮಾಂಸ ಮಾರುಕಟ್ಟೆ ಶುಚಿತ್ವವಿಲ್ಲದೇ ಗಬ್ಬು ನಾರುತ್ತಿದೆ. ವಿನಾಯಕ ಕಾಲೋನಿಗೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆಯ ಪಕ್ಕದಲ್ಲೇ ಗೂಡಂಗಡಿಗಳಂತಿರುವ ಪೆಟ್ಟಿಗೆ ಅಂಗಡಿಗಳಲ್ಲಿ ಮಾಂಸ ಮಾರಾಟ ಮಾಡುತ್ತಿದ್ದು ಶಾಲಾ ಮಕ್ಕಳು, ಸಾರ್ವಜನಿಕರು ತೀವ್ರ ತೊಂದರೆಗೆ ಒಳಗಾಗಿದ್ದಾರೆ.

ಮಂಗಳವಾರ, ಶುಕ್ರವಾರ ಹಾಗೂ ಭಾನುವಾರ ಮಾಂಸ ಖರೀದಿಗೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವ ಗ್ರಾಹಕರು ರಸ್ತೆ ಬದಿಯಲ್ಲೇ ದ್ವಿಚಕ್ರ ವಾಹನಗಳನ್ನು ನಿಲ್ಲಿಸುವುದರಿಂದ ಸುಗಮ ಸಂಚಾರಕ್ಕೆ ಅಡಚಣೆಯಾಗಿದೆ. ಇದರಿಂದ ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದ್ದು, ಪುರಸಭೆಗೆ ಹಿಡಿಶಾಪ ಹಾಕುವಂತಾಗಿದೆ. ಅಲ್ಲದೇ ಪ.ಜಾತಿ/ವರ್ಗದ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ವಿನಾಯಕ ಕಾಲೋನಿಯಲ್ಲಿದ್ದು ಮಕ್ಕಳಿಗೆ ತೀವ್ರ ತೊಂದರೆ ಎದುರಾಗಿದೆ.

ಮಾಂಸ ಮಾರುಕಟ್ಟೆಯಲ್ಲಿ ಅನೈರ್ಮಲ್ಯ ತಾಂಡವಾಡುತ್ತಿದ್ದು, ಮೇಕೆ ಮರಿಗಳನ್ನು ಅಲ್ಲೇ ಕತ್ತರಿಸಿ ಅದರ ತ್ಯಾಜ್ಯ ಹಾಗೂ ಶುಚಿಗೊಳಿಸಿದ ನೀರನ್ನು ರಸ್ತೆಗೆ ಸುರಿಯುತ್ತಿರುವುದರಿಂದ ಸಾರ್ವಜನಿಕರಿಗೆ ಓಡಾಡಲು ಹಿಂಸೆಯಾಗುತ್ತಿದೆ. ಅಲ್ಲದೇ ಮೇಕೆಗಳನ್ನು ಕತ್ತರಿಸಿ ಕಂಡ ಕಂಡಲ್ಲಿ ತ್ಯಾಜ್ಯ ಸುರಿಯುತ್ತಿರುವುದರಿಂದ ಅಸಹ್ಯಕರ ವಾತಾವರಣ ನಿರ್ಮಾಣವಾಗಿ ಸಾಂಕ್ರಾಮಿಕ ರೋಗದ ಭೀತಿ ಎದುರಾಗಿದೆ.

ಸೌಲಭ್ಯ ಕಲ್ಪಿಸಿ ಸ್ಥಳಾಂತರ



ತರಕಾರಿ ಮಾರುಕಟ್ಟೆಗಾಗಿ ನಿರ್ಮಿಸಲಾದ ಮಳಿಗೆಗಳು ಸಮರ್ಪಕವಾಗಿ ನಿರ್ಮಾಣವಾಗಿಲ್ಲ. ಈಗ ಮಟನ್ ಮಾರ್ಕೆಟ್‌ಗೆ ಟೆಂಡರ್ ಕರೆಯಲಾಗಿದೆ. ತರಕಾರಿ ಮಾರ್ಕೆಟ್ ಮಾಡುವ ಉದ್ದೇಶದಿಂದ ನಿರ್ಮಿಸಲಾದ ಮಳಿಗೆಗಳಿಗೆ ಮಾಂಸ ಮಾರಾಟಗಾರರನ್ನು ಸ್ಥಳಾಂತರಿಸಲು ಅವರಿಗೆ ಸಮರ್ಪಕ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕಾಗುತ್ತೆ. ಇದಕ್ಕಾಗಿ 10 ಲಕ್ಷ ರೂ. ಮೀಸಲಿರಿಸಲಾಗಿದೆ. ಮಾಂಸ ಮಾರಾಟಗಾರರನ್ನು ಸ್ಥಳಾಂತರಿಸಿದರೆ ಮತ್ತೆ ಸಮಸ್ಯೆ ಎದುರಾಗುವುದರಿಂದ ಮಾಂಸ ಮಾರಾಟಕ್ಕೆ ಬೇಕಾದ ಅನುಕೂಲತೆಗಳಾದ ಗೋಡೆಗೆ ಟೈಲ್ಸ್, ಸಮರ್ಪಕ ನೀರಿನ ವ್ಯವಸ್ಥೆ ಹಾಗೂ ವಿದ್ಯುತ್ ಸೌಲಭ್ಯ ಕಲ್ಪಿಸಿ ಆಧುನಿಕವಾಗಿ ಮಾರ್ಪಡಿಸಿ ನಂತರ ಅವರನ್ನು ಸ್ಥಳಾಂತರಿಸಲಾಗುವುದು.

-ಬಿ.ಕೆ.ವಸಂತ ಕುಮಾರಿ, ಪುರಸಭೆ ಮುಖ್ಯಾಧಿಕಾರಿ.

ಮಳಿಗೆಗಳಿಗೆ ಹೋಗಲು ನಿರಾಕರಣೆ: ಪುರಸಭೆ ವತಿಯಿಂದ ತರಕಾರಿ ಮಾರುಕಟ್ಟೆಗಾಗಿ 70 ಲಕ್ಷ ರೂ. ವೆಚ್ಚದಲ್ಲಿ 32 ಮಳಿಗೆಗಳನ್ನು ನಿರ್ಮಿಸಲಾಗಿದ್ದು, ತರಕಾರಿ ಮಾರಾಟಗಾರರು ಮೂಲ ಸೌಕರ್ಯ ಇಲ್ಲದ ನೆಪ ಹೇಳಿ ಮಳಿಗೆಗಳಿಗೆ ಹೋಗಲು ನಿರಾಕರಿಸುತ್ತಿರುವುದರಿಂದ ಮಳಿಗೆ ನಿರುಪಯುಕ್ತವಾಗಿದೆ. ಇದೀಗ ಪುರಸಭೆಯವರು ಮಾಂಸ ಮಾರಾಟಗಾರರನ್ನು ಆ ಮಳಿಗೆಗಳಿಗೆ ಹೋಗುವಂತೆ ಹೇಳುತ್ತಿದ್ದರೂ, ಅವರು ಕೂಡ ಮೂಲ ಸೌಕರ್ಯದ ನೆಪ ಹೇಳುತ್ತಿದ್ದಾರೆ. ತರಕಾರಿ ಮಾರಾಟಗಾರರು ಹಾಗೂ ಮಾಂಸ ಮಾರಾಟಗಾರರು ಮಳಿಗೆಗಳಿಗೆ ಹೋಗಲು ನಿರಾಕರಿಸುತ್ತಿರುವುದರಿಂದ 10 ವರ್ಷಗಳ ಹಿಂದೆ 70 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಾಗಿರುವ ಮಳಿಗೆ ನಿರುಪಯುಕ್ತವಾಗಿದೆ.

ವಿವಿಧ ವಿಭಾಗಗಳಿಗೆ ದಸಂಸ ಪದಾಧಿಕಾರಿಗಳ ನೇಮಕ



ದಸಂಸ ಜಿಲ್ಲಾ, ತಾಲೂಕು ಹಾಗೂ ಪಟ್ಟಣ ವಿಭಾಗದ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ತಿ.ನರಸೀಪುರ, ಅ.4– ದಲಿತ ಸಂಘರ್ಷ ಸಮಿತಿ ಜಿಲ್ಲಾ, ತಾಲೂಕು ಹಾಗೂ ಪಟ್ಟಣ ವಿಭಾಗಗಳಿಗೆ ಪದಾಧಿಕಾರಿಗಳನ್ನು ಮರುನೇಮಕ ಮಾಡಲಾಗಿದ್ದು, ಮೈಸೂರು ಜಿಲ್ಲಾ ಸಂಘಟನಾ ಸಂಚಾಲಕರಾಗಿ ಕೆಂಪಯ್ಯನಹುಂಡಿ ಆರ್.ರಾಜು ಅವರನ್ನು ನೇಮಕ ಮಾಡಲಾಯಿತು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ನಡೆದ ದಸಂಸ ಪದಾಧಿಕಾರಿಗಳ ಸಭೆಯಲ್ಲಿ ಜಿಲ್ಲಾ ಸಂಚಾಲಕ ಆಲಗೂಡು ಡಾ.ಚಂದ್ರಶೇಖರ್ ಉಪಸ್ಥಿತಿಯಲ್ಲಿ ಸಮಿತಿಗೆ ಪದಾಧಿಕಾರಿಗಳನ್ನು ನೇಮಕ ಮಾಡಲಾಯಿತು.

ಮೈಸೂರು ವಿಭಾಗೀಯ ಸಂಚಾಲಕರಾಗಿ ಕನ್ನಾಯಕನಹಳ್ಳಿ ಮರಿಸ್ವಾಮಿ, ತಾಲೂಕು ಪದಾಧಿಕಾರಿಗಳಾಗಿ ನಿಲಸೋಗೆ ಕುಮಾರ(ಸಂಚಾಲಕ), ಸೋಮನಾಥಪುರ ಗೋವಿಂದರಾಜು, ತೊಟ್ಟವಾಡಿ ರಾಚಪ್ಪ, ಕೊಳತ್ತೂರು ಪ್ರಭಾಕರ್ (ಸಂಘಟನಾ ಸಂಚಾಲಕರು), ಕುಪ್ಯಾ ಗವಿಸಿದ್ದಯ್ಯ(ಖಜಾಂಚಿ), ಹೆಮ್ಮಿಗೆ ಬಿ.ಮಲ್ಲೇಶ್ ಅವರನ್ನು ಸಾಂಸ್ಕೃತಿಕ ವಿಭಾಗಕ್ಕೆ ನೇಮಕ ಮಾಡಲಾಯಿತು.

ಚೌಹಳ್ಳಿ ಪರಶುರಾಮ್, ಟಿ.ದೊಡ್ಡಪುರ ಉಮೇಶ್, ಹೆಮ್ಮಿಗೆ ಬಿ.ಪ್ರಸನ್ನ, ಬೆಟ್ಟಹಳ್ಳಿ ರವಿಕಾಂತ್, ಕುರುಬೂರು ಶಿವರಾಜು, ಬೆನಕನಹಳ್ಳಿ ನಾರಾಯಣಸ್ವಾಮಿ, ಸೋಸಲೆ ಶಿವಕುಮಾರ್, ಉಕ್ಕಲಗೆರೆ ಮಹದೇವಸ್ವಾಮಿ, ಮಾರನಪುರ ಕೇಶವಮೂರ್ತಿ, ಕೂಡ್ಲೂರು ಶಿವನಂಜು, ಮಾದಿಗಹಳ್ಳಿ ಚಿನ್ನಸ್ವಾಮಿ, ಕೆಂಪಯ್ಯನಹುಂಡಿ ಜಯಣ್ಣ, ಯಡದೊರೆ ಕೃಷ್ಣ ಅವರನ್ನು ಕಾರ್ಯಕಾರಣಿ ಸದಸ್ಯರಾಗಿ ಹಾಗೂ ಪಟ್ಟಣ ಪದಾಧಿಕಾರಿಗಳಾಗಿ ಗಿರೀಶ್(ಸಂಚಾಲಕ), ವಿನಯ್ ಕುಮಾರ್, ಮುನ್ನಬುಡಲ್ ಸಾಬ್, ನಿಂಗರಾಜು ಅವರನ್ನು ಸಂಘಟನಾ ಸಂಚಾಲಕರನ್ನಾಗಿ ಜಿ.ಸಂಜಯ್ ಅವರನ್ನು ಖಜಾಂಜಿಯಾಗಿ ನೇಮಕ ಮಾಡಲಾಯಿತು.

ಗ್ರಾಮೀಣ ಜನರ ಆರೋಗ್ಯಕ್ಕೆ ಆದ್ಯತೆ



ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್ ಮಾತನಾಡಿದರು.

ಸರಗೂರು, ಅ.4– ಗ್ರಾಮೀಣ ಜನರ ಆರೋಗ್ಯಕ್ಕೆ ಹೆಚ್ಚು ಒತ್ತು ನೀಡಲಾಗುವುದು ಎಂದು ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್ ತಿಳಿಸಿದರು.

ತಾಲೂಕಿನ ಮುಳ್ಳೂರು ಗ್ರಾಪಂನಲ್ಲಿ ನಡೆದ ಗ್ರಾಮ ಆರೋಗ್ಯ ವಿಶೇಷ ಸಭೆಯಲ್ಲಿ ಮಾತನಾಡಿದ ಅವರು, ಉತ್ತಮ ಆರೋಗ್ಯ ಸೇವೆ ಎಲ್ಲರಿಗೂ ಸಿಗುವಂತೆ ಮಾಡುವುದು. ಎಲ್ಲರೂ ಅದನ್ನು ಬಳಸಿಕೊಳ್ಳುವಂತೆ ಪ್ರೋತ್ಸಾಹಿಸುವುದು. ಸ್ಥಳೀಯ ಆರೋಗ್ಯದ ಅಗತ್ಯಗಳನ್ನು ಪೂರೈಸಿಕೊಳ್ಳಲು ವ್ಯವಸ್ಥೆಯಲ್ಲಿ ಸೂಕ್ತ ಬದಲಾವಣೆಗೆ ಅವಕಾಶ ಮಾಡಿಕೊಡುವುದು. ಆರೋಗ್ಯ ಉಪ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳನ್ನು ಬಲಪಡಿಸುವುದರ ಜೊತೆ ಗ್ರಾಮೀಣ ಭಾಗದ ಜನರಿಗೆ ಉತ್ತಮ ಆರೋಗ್ಯ ಸೇವೆ ಕಲ್ಪಿಸುವ ಬಗ್ಗೆ ಮಾಹಿತಿ ನೀಡಿದರು. ಇದೇ ವೇಳೆ ಮಧುಮೇಹ, ಅಧಿಕ ರಕ್ತದೊತ್ತಡ, ಕ್ಷಯರೋಗ, ಅಪೌಷ್ಟಿಕತೆ ಮತ್ತು ರಕ್ತಹೀನತೆ, ಬಾಲ್ಯವಿವಾಹ, ನೈರ್ಮಲ್ಯ ಕುಡಿಯುವ ನೀರು ಮತ್ತು ಸ್ವಚ್ಛತೆ, ಮಾನಸಿಕ ಕಾಯಿಲೆ ಬಗ್ಗೆ ಸಂಕ್ಷಿಪ್ತವಾಗಿ ಮಾಹಿತಿ ನೀಡಿದರು. ಇದೇ ವೇಳೆ ಆಶಾ, ಅಂಗನವಾಡಿ ಕಾರ್ಯಕರ್ತೆಯರು ಈ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಬೇಕು ಎಂದು ತಿಳಿಸಿದರು.

ಈ ವೇಳೆ ಗ್ರಾಪಂ ಅಧ್ಯಕ್ಷ ಚಿನ್ನಮ್ಮ, ಪಿಡಿಓ ನಾಗೇಂದ್ರ, ಪ್ರಭಾರ ಆರೋಗ್ಯಾಧಿಕಾರಿ ನಾಗೇಂದ್ರ, ಅಂಗನವಾಡಿ ಮೇಲ್ವಿಚಾರಕಿ ರಂಜಿತಾ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ರವಿರಾಜ್, ಆರೋಗ್ಯ ಇಲಾಖೆ ಸಿಬ್ಬಂದಿ ಉಮೇಶ್, ನೀಲಮ್ಮ, ವೀರಭದ್ರ, ಸುವೇಶ್, ಗ್ರಾಪಂ ಸದಸ್ಯರಾದ ಸಿದ್ದರಾಜು ಸೇರಿದಂತೆ ಇನ್ನಿತರರಿದ್ದರು.

ರಾಷ್ಟ್ರಮಟ್ಟದ ಬಾಲ್ ಬ್ಯಾಡ್ಮಿಂಟನ್‌ನಲ್ಲಿ ಸಾಧನೆ



ಬಾಲ್ ಬ್ಯಾಡ್ಮಿಂಟನ್‌ನಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಹುಣಸೂರು, ಅ.4– ಬಾಲ್ ಬ್ಯಾಡ್ಮಿಂಟನ್ ಅಸೋಸಿಯೇಷನ್ ಆಫ್ ಇಂಡಿಯಾ ವತಿಯಿಂದ ಸೆ.25ರಿಂದ 29ರವರೆಗೆ ಹೆಹಲಿಯ ರೋಟಕ್‌ನಲ್ಲಿ ನಡೆದ ರಾಷ್ಟ್ರಮಟ್ಟದ 43ನೇ ಸಬ್ ಜೂನಿಯರ್ ಬಾಲ್ ಬ್ಯಾಡ್ಮಿಂಟನ್ ಕ್ರೀಡಾಕೂಟದಲ್ಲಿ ತಾಲೂಕಿನ ಮೂಳ್ಳೂರು ಶಾಲೆಯ ಬಾಲಕಿಯರಾದ ಸ್ನೇಹ, ಮಾನ್ಯ 5ನೇ ಸ್ಥಾನ ಪಡೆಯುವ ಮೂಲಕ ಶಾಲೆಗೆ ಕೀರ್ತಿ ತಂದಿದ್ದಾರೆ.

ಸಾಧನೆಗೈದ ಬಾಲಕಿಯರನ್ನು ಶಾಲಾ ಮುಖ್ಯ ಶಿಕ್ಷಕ ಹೆಚ್.ಎಸ್.ಮೋಹನ್ ಕುಮಾರ್, ಎಸ್‌ಡಿಎಂಸಿ ಅಧ್ಯಕ್ಷ ನಟರಾಜು ಹಾಗೂ ಸದಸ್ಯರು, ಗ್ರಾಮಸ್ಥರು ಅಭಿನಂದಿಸಿದ್ದಾರೆ. ಈ ವೇಳೆ ದೈಹಿಕ ಶಿಕ್ಷಣ ಶಿಕ್ಷಕ ಹಾಗೂ ತರಬೇತುದಾರ ಎಸ್.ರಮೇಶ್, ಸಹ ಶಿಕ್ಷಕರಾದ ಜೆ.ಜಗದೀಶ್, ಕೆ.ಸಿ.ಶ್ಯಾಮ್, ಜಿ.ಎನ್.ಪ್ರೇಮಕುಮಾರಿ ಹಾಗೂ ಪೋಷಕರು ಗ್ರಾಮದ ಮುಖಂಡರು ಹಾಜರಿದ್ದರು.

ಮಹಿಳಾ, ಮಕ್ಕಳ ದಸರಾ ಉಪಸಮಿತಿ ಅಧ್ಯಕ್ಷರಾಗಿ ನೇಮಕ

ಹೆಚ್.ಡಿ.ಕೋಟೆ, ಅ.4– ಮಹಿಳಾ ಮತ್ತು ಮಕ್ಕಳ ದಸರಾ ಉಪಸಮಿತಿ ಅಧ್ಯಕ್ಷರಾಗಿ ಜಿಪಂ ಮಾಜಿ ಅಧ್ಯಕ್ಷೆ ಹೆಚ್.ಆರ್.ಭಾಗ್ಯಲಕ್ಷ್ಮಿ ನೇಮಕಗೊಂಡಿದ್ದಾರೆ.



ನಾಡಹಬ್ಬ ಮೈಸೂರು ದಸರಾ ಮಹೋತ್ಸವ– 2024ರ ಅಂಗವಾಗಿ ಮಹಿಳಾ ಮತ್ತು ಮಕ್ಕಳ ದಸರಾ ಉಪ ಸಮಿತಿಗೆ ಅಧಿಕಾರೇತರ ಸದಸ್ಯರನ್ನು ಆಯ್ಕೆ ಮಾಡಲಾಗಿದ್ದು, ಜಿಪಂ ಮಾಜಿ ಅಧ್ಯಕ್ಷೆ ಹೆಚ್.ಆರ್.ಭಾಗ್ಯಲಕ್ಷ್ಮಿ ಅವರನ್ನು ನೇಮಕ ಮಾಡಲಾಗಿದೆ.

ಅಧ್ಯಕ್ಷರಾಗಿ ನೇಮಕವಾಗಲು ಕಾರಣರಾದ ಸಿಎಂ ಸಿದ್ದರಾಮಯ್ಯ, ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ, ಶಾಸಕ ಅನಿಲ್ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದ ಭಾಗ್ಯಲಕ್ಷ್ಮಿ ಅವರು, ನನಗೆ ಜವಾಬ್ದಾರಿಯುತ ಹುದ್ದೆ ನೀಡಿದ್ದು, ಪ್ರಾಮಾಣಿಕವಾಗಿ ನಿರ್ವಹಿಸುತ್ತೇನೆ ಎಂದರು.

ಬೆಳ್ಳಿ ಬಸಪ್ಪ, ಸಿಡಿಲು ಮಲ್ಲಿಕಾರ್ಜುನಸ್ವಾಮಿ ಮೆರವಣಿಗೆ



ನವರಾತ್ರಿ ಅಂಗವಾಗಿ ಬೆಟ್ಟದಪುರದಲ್ಲಿ ಉಪ್ಪಾರ ಸಮಾಜದಿಂದ ಬೆಳ್ಳಿ ಬಸಪ್ಪ ಹಾಗೂ ಸಿಡಿಲು ಮಲ್ಲಿಕಾರ್ಜುನಸ್ವಾಮಿ ಉತ್ಸವ ಮೂರ್ತಿಯನ್ನು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಈ ವೇಳೆ ಅರ್ಚಕ ಸತೀಶ್ ಕಶ್ಯಪ್, ಗ್ರಾಮಸ್ಥರಿದ್ದರು.

ಮೂಗೂರು: ವಿದ್ಯುತ್ ಕಂಬಕ್ಕೆ ಲಾರಿ ಡಿಕ್ಕಿ



ಮೂಗೂರು, ಅ.4– ಕಬ್ಬು ತುಂಬಿದ ಲಾರಿ ಡಿಕ್ಕಿ ಹೊಡೆದ ಪರಿಣಾಮ ವಿದ್ಯುತ್ ಕಂಬ ಮುರಿದು ಹೋಗಿರುವ ಘಟನೆ ಗ್ರಾಮದ ಅಂಬೇಡ್ಕರ್ ಕಾಲೋನಿಯಲ್ಲಿ ಗುರುವಾರ ರಾತ್ರಿ ನಡೆದಿದೆ. ಮೂಗೂರಿನಿಂದ ಕಾರ್ಖಾನೆಗೆ ಲಾರಿ (ಕೆಎ.11, ಎ.6146)ಯಲ್ಲಿ ಕಬ್ಬು ಸಾಗಿಸಲಾಗುತ್ತಿತ್ತು. ಈ ವೇಳೆ ಗ್ರಾಮದ ಅಂಬೇಡ್ಕರ್ ಕಾಲೋನಿಯ ಮುಖ್ಯರಸ್ತೆಯ ವಿದ್ಯುತ್ ಕಂಬಕ್ಕೆ ಲಾರಿ ಡಿಕ್ಕಿ ಹೊಡೆದಿದೆ. ಪರಿಣಾಮ ಕಂಬ ಮುರಿದು ಹೋಗಿದ್ದು, ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಚೆಸ್ಕಾಂ ಸಿಬ್ಬಂದಿ ಕಂಬವನ್ನು ತೆರವುಗೊಳಿಸಿ ಸಂಚಾರಕ್ಕೆ ಅನುವು ಮಾಡಿಕೊಟ್ಟರು. ಘಟನೆಯಿಂದ ವಿದ್ಯುತ್ ಕಡಿತಗೊಂಡಿತ್ತು.

ಈ ರಸ್ತೆಯಲ್ಲಿ ಅಧಿಕ ಪ್ರಮಾಣದಲ್ಲಿ ಕಬ್ಬು ಸಾಗಣೆ ಮಾಡುವುದರಿಂದ ಇಲ್ಲಿನ ನಿವಾಸಿಗಳಿಗೆ ಸಮಸ್ಯೆಯಾಗುತ್ತಿದೆ. ಆದ್ದರಿಂದ ಈ ಮಾರ್ಗದಲ್ಲಿ ಲಾರಿ ಸಂಚಾರವನ್ನು ಸ್ಥಗಿತಗೊಳಿಸಿ ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಮುಂಬರುವ 3 ತಿಂಗಳಲ್ಲಿ ಮಹಾ ಯೋಜನೆಯ ನೀಲಿನಕ್ಷೆ

ಹುಣಸೂರು ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಹೆಚ್.ಪಿ.ಅಮರನಾಥ್



ಸುದ್ದಿಗೋಷ್ಠಿಯಲ್ಲಿ ಹೆಚ್.ಪಿ.ಅಮರನಾಥ್ ಮಾತನಾಡಿದರು.

ಹುಣಸೂರು, ಅ.4– ಹುಣಸೂರು ನಗರ ಯೋಜನಾ ಪ್ರಾಧಿಕಾರ, ಹುಣಸೂರು ನಗರ ಮತ್ತು ನಗರ ವ್ಯಾಪ್ತಿಯೊಳಗಿರುವ 12 ಗ್ರಾಮಗಳನ್ನು ಒಳಗೊಂಡ ಮಹಾ ಯೋಜನೆಯ ನೀಲಿ ನಕ್ಷೆಯನ್ನು ಮುಂದಿನ 3 ತಿಂಗಳಲ್ಲಿ ರೂಪಿಸಲಿದೆ ಎಂದು ಪ್ರಾಧಿಕಾರದ ಅಧ್ಯಕ್ಷ ಹೆಚ್.ಪಿ.ಅಮರ್‌ನಾಥ್ ತಿಳಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿಂದಿನ ಆಡಳಿತ ಮಂಡಳಿ ಈ ಕುರಿತು ಮೊದಲ ಹೆಜ್ಜೆ ಇಟ್ಟಿತ್ತಾದರೂ ಕಾರ್ಯಗತವಾಗಿರಲಿಲ್ಲ. ಇದೀಗ ನೀಲಿ ನಕ್ಷೆ ತಯಾರಿಸುವ ಕುರಿತಾದ ಟೆಂಡರ್ ಪ್ರಕ್ರಿಯೆ ಸಂಪನ್ನಗೊಂಡಿದ್ದು, ದೊಡ್ಡಹುಣಸೂರು, ಚಿಕ್ಕಹುಣಸೂರು, ಗೋವಿಂದನಹಳ್ಳಿ, ಬೆಳ್ತೂರು, ಬೀಜಗನಹಳ್ಳಿ, ಮೂಕನಹಳ್ಳಿ, ನಿಲುವಾಗಿಲು, ನಿಲುವಾಗಿಲು ಕೊಪ್ಪಲು ಸೇರಿದಂತೆ 12 ಗ್ರಾಮಗಳು ನಗರ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿದ್ದು, ಮುಂದಿನ 3 ತಿಂಗಳಲ್ಲಿ ಮಹಾ ಯೋಜನೆಯ ನೀಲಿನಕ್ಷೆ ಹೊರಬರಲಿದೆ ಎಂದು ತಿಳಿಸಿದರು.

39 ಬಡಾವಣೆ ಅಂಗೀಕಾರ: ನನ್ನ ಅಧ್ಯಕ್ಷತೆಯಲ್ಲಿ ಸೆ.26 ರಂದು ಮೊದಲ ಸಭೆ ನಡೆದಿದ್ದು, ಬಡಾವಣೆಗೆ ಅನುಮತಿ ಕೋರಿ ಒಟ್ಟು 44 ಅರ್ಜಿಗಳು ಸಲ್ಲಿಕೆಯಾಗಿದ್ದವು. ಈ ಪೈಕಿ 5 ಬಡಾವಣೆಗಳಲ್ಲಿ ನ್ಯೂನತೆ ಕಂಡು ಬಂದಿದ್ದು, ಸಮಿತಿ ಸದಸ್ಯರೊಂದಿಗೆ ಎಲ್ಲಾ 44 ಬಡಾವಣೆಗಳಿಗೂ ಭೇಟಿ ನೀಡಿ ಪರಿಶೀಲಿಸಿ, ಪ್ರಾಧಿಕಾರದ ನೀತಿ ನಿಯಮಗಳನ್ನು ತಿಳಿಸುವ ಝೋನಲ್ ರೆಜಿಸ್ಟ್ರೇಷನ್ (ಝಡ್‌ಆರ್) ನಿಯಮದಡಿ 5 ಬಡಾವಣೆಗಳಿಗೆ ಅನುಮತಿ ನೀಡುವುದನ್ನು ಮುಂದೂಡಲಾಗಿದೆ. ಸಂಬಂಧಪಟ್ಟ ಬಡಾವಣೆ ಮಾಲೀಕರಿಗೆ ನ್ಯೂನತೆ ಕುರಿತು ಮಾಹಿತಿ ಒದಗಿಸಲಾಗಿದೆ ಎಂದರು.

ಹುಣಸೂರು ನಗರ ವ್ಯಾಪ್ತಿಯಲ್ಲಿ 19 ಯೋಗ್ಯ ಸಿಎ ಸೈಟುಗಳು ಲಭ್ಯವಿದ್ದು, ಸಿಎ ಸೈಟುಗಳಿಗಾಗಿ 3 ಅರ್ಜಿಗಳು ಬಂದಿದ್ದು, ಪ್ರಾಧಿಕಾರದ ನೀತಿ ನಿಯಮಾನುಸಾರವಾಗಿ ಇರದ ಕಾರಣ ಸೈಟ್ ನಿರಾಕರಿಸಲಾಗಿದೆ. ಪ್ರಾಧಿಕಾರದ ಆಡಳಿತದಲ್ಲಿ ಪಾರದರ್ಶಕತೆ ಕಾಪಾಡಿಕೊಳ್ಳುವ ಸಲುವಾಗಿ ಈಗಾಗಲೇ 4 ಸಿಸಿ ಕ್ಯಾಮರಾ ಅಳವಡಿಸಲಾಗಿದೆ. ಅಷ್ಟೇ ಅಲ್ಲದೆ ಸರ್ಕಾರವೂ ಈಗಾಗಲೇ ಹುಣಸೂರು ನಗರ ಯೋಜನಾ ಪ್ರಾಧಿಕಾರದ ವೆಬ್‌ಸೈಟ್ ಚಾಲ್ತಿಗೊಳಿಸುವ ಕಾರ್ಯ ಯಶಸ್ವಿಯಾಗಿದ್ದು, ಸಾರ್ವಜನಿಕರು www.hunsur.tpa.gov.inಗೆ ಲಾಗ್ ಇನ್ ಆಗುವ ಮೂಲಕ ಪ್ರಾಧಿಕಾರದ ಸಮಗ್ರ ಚಟುವಟಿಕೆಗಳ ಮತ್ತು ಮಾಹಿತಿ ತಿಳಿಯಬಹುದಾಗಿದೆ ಎಂದರು.

ಕೆರೆ ಅಭಿವೃದ್ಧಿಗೆ 80 ಲಕ್ಷ: ನಗರದ ಪುರಾತನ ವಳ್ಳಮ್ಮನಕಟ್ಟೆ ಕೆರೆ ಸಮಗ್ರ ಅಭಿವೃದ್ಧಿಗೆ 80 ಲಕ್ಷ ರೂ. ಯೋಜನೆ ರೂಪಿಸಿದ್ದು, ಶೀಘ್ರ ಅಭಿವೃದ್ಧಿ ಕಾರ್ಯಕ್ಕೆ ಭೂಮಿಪೂಜೆ ನೆರವೇರಲಿಸಲಾಗುವುದು. ಕೆರೆ ಒತ್ತುವರಿಯನ್ನು ಯಾವುದೇ ಮುಲಾಜಿಲ್ಲದೇ ತೆರವುಗೊಳಿಸಿ ಕೆರೆ ಅಭಿವೃದ್ಧಿ ಕಾರ್ಯ ನಡೆಸಲಾಗುವುದೆಂದು ಮಾಹಿತಿ ನೀಡಿದರು.

ಪ್ರಾಧಿಕಾರದ ಸದಸ್ಯರಾದ ಅಫ್ರೋಜ್ ಅಹಮ್ಮದ್, ಕುಮಾರ್, ಎಸ್.ಜಯರಾಂ, ಸ್ವಾಮಿಗೌಡ, ಕಾನೂನು ಸಲಹೆಗಾರ ಚಂದ್ರಶೇಖರ್ ಇದ್ದರು.

ಪ್ರಾಧಿಕಾರ ರಚನೆಗಾಗಿ ಕ್ರಮ

ಹುಣಸೂರಿಗೆ 2017ರಲ್ಲಿ ಯೋಜನೆ ಪ್ರಾಧಿಕಾರವನ್ನು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ತಂದಿದ್ದು, ಮುಂದಿನ ದಿನಗಳಲ್ಲಿ ಜಿಲ್ಲೆಯಾಗುವುದು ನಿಶ್ಚಿತ. ಈ ಹಿನ್ನೆಲೆಯಲ್ಲಿ ಹುಣಸೂರು ನಗರ ಯೋಜನಾ ಪ್ರಾಧಿಕಾರವನ್ನು ಹುಣಸೂರು ಅಭಿವೃದ್ಧಿ ಪ್ರಾಧಿಕಾರವಾಗಿ ಮೇಲ್ದರ್ಜೆಗೇರಿಸಲು ಕ್ರಮವಹಿಸುತ್ತೇನೆ. 2017ರಲ್ಲಿ ಪ್ರಾಧಿಕಾರ ಪಡೆದ ಶಿರಾ ತಾಲೂಕಿನಲ್ಲಿ ಇದೀಗ ಅಭಿವೃದ್ಧಿ ಪ್ರಾಧಿಕಾರ ಅಸ್ತಿತ್ವಕ್ಕೆ ಬಂದಿದ್ದು, ಅದರ ಕುರಿತು ಮಾಹಿತಿ ಕಲೆ ಹಾಕುತ್ತಿದ್ದೇವೆ. ಅಭಿವೃದ್ಧಿ ಪ್ರಾಧಿಕಾರವಾಗಲು ಕನಿಷ್ಠ 1 ಲಕ್ಷ ಜನಸಂಖ್ಯೆ ಮತ್ತು 2500 ಹೆಕ್ಟೇರ್ ಭೂ ಪ್ರದೇಶ ಹೊಂದಿರುವ ಅಗತ್ಯವಿದೆ. ಹುಣಸೂರು ನಗರ ಮತ್ತು ಗ್ರಾಮಗಳನ್ನು ಒಳಗೊಂಡಂತೆ ಒಟ್ಟು 3771 ಹೆಕ್ಟೇರ್ ಭೂ ಪ್ರದೇಶವಿದ್ದು, ಜನಸಂಖ್ಯೆ ಮಾಹಿತಿ ಕಲೆಹಾಕಲಾಗುತ್ತಿದೆ.

- ಅಮರ್‌ನಾಥ್, ಪ್ರಾಧಿಕಾರದ ಅಧ್ಯಕ್ಷ

ಪ್ರತಿಯೊಬ್ಬರೂ ಕಣ್ಣಿನ ಸುರಕ್ಷತೆಗೆ ಹೆಚ್ಚು ಒತ್ತು ನೀಡಿ

ನೇತ್ರ ತಜ್ಞೆ ಡಾ.ನೇತ್ರ ಹರ್ಷ ಸಲಹೆ



ಕಾರ್ಯಕ್ರಮದಲ್ಲಿ ನೇತ್ರ ತಜ್ಞೆ ಡಾ.ನೇತ್ರ ಹರ್ಷ ಮಾತನಾಡಿದರು.

ಸರಗೂರು, ಅ.4– ಪ್ರತಿಯೊಬ್ಬರೂ ಕಣ್ಣಿನ ಸುರಕ್ಷತೆಗೆ ಹೆಚ್ಚು ಒತ್ತು ನೀಡಬೇಕು ಎಂದು ಬೆಂಗಳೂರಿನ ವಿಠಲ ಇಂಟರ್‌ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಆಪಾಲ್ಮೊಲಜಿ ಆಸ್ಪತ್ರೆಯ ನೇತ್ರ ತಜ್ಞೆ ಡಾ.ನೇತ್ರ ಹರ್ಷ ಸಲಹೆ ನೀಡಿದರು.

ಪಟ್ಟಣದ ವಿವೇಕಾನಂದ ಸ್ಮಾರಕ ಆಸ್ಪತ್ರೆ ವತಿಯಿಂದ ಆಯೋಜಿಸಿದ್ದ ವಿಶ್ವ ದೃಷ್ಟಿ ದಿನಾಚರಣೆ ಹಾಗೂ ಉಚಿತ ಕಣ್ಣಿನ ಆರೋಗ್ಯ ತಪಾಸಣೆ ಶಿಬಿರವನ್ನು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಡಯಾಬಿಟಿಕ್ ರೆಟಿನೋಪತಿ ಅಂದರೆ ಸಕ್ಕರೆ ಕಾಯಿಲೆ ಇರುವವರಲ್ಲಿ ಕಣ್ಣಿನ ನರ ಸಮಸ್ಯೆಯನ್ನು ಪತ್ತೆಹಚ್ಚಿ ಲೇಸರ್ ಮೂಲಕ ಚಿಕಿತ್ಸೆ ನೀಡುವುದಾಗಿದೆ. ಈ ಸಮಸ್ಯೆಯುಳ್ಳವರು ಇಲ್ಲಿನ ವಿವೇಕಾನಂದ ಸ್ಮಾರಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಬಹುದಾಗಿದೆ. ಕಣ್ಣು ಸೂಕ್ಷ್ಮವಾದ ಅಂಗವಾಗಿದ್ದು, ಪ್ರತಿಯೊಬ್ಬರೂ ಅದರ ಸುರಕ್ಷತೆಗೆ ಹೆಚ್ಚಿನ ಒತ್ತು ನೀಡಬೇಕು. ಕಣ್ಣಿನ ದೃಷ್ಟಿ ಸಮರ್ಪಕವಾಗಿದ್ದರೇ ಪ್ರಸ್ತುತ ಮನುಷ್ಯನಿಗೆ ಅದುವೇ ದೊಡ್ಡ ವರದಾನವಾಗಿದ್ದು, ಕಣ್ಣಿಗೆ ಧೂಳು ಬೀಳದಂತೆ ಸೂಕ್ತ ಕನ್ನಡಕವನ್ನು ಬಳಸಿ ಎಂದು ಸಲಹೆ ನೀಡಿದರು.

ಮೈಸೂರಿನ ಕೆ.ಆರ್.ಆಸ್ಪತ್ರೆ ಕಣ್ಣಿನ ಶಸ್ತ್ರಚಿಕಿತ್ಸಾ ತಜ್ಞ ಡಾ.ಚೇತನ್ ಕುಮಾರ್ ಮಾತನಾಡಿ, ಈ ವರ್ಷ ವಿಶ್ವ ಸಂಸ್ಥೆಯ ಘೋಷವಾಕ್ಯ 'ನಿಮ್ಮ ಮಕ್ಕಳ ಕಣ್ಣನ್ನು ಪ್ರೀತಿಸಿ' ಎಂಬುದರ ಬಗ್ಗೆ ಪ್ರಸ್ತಾಪಿಸಿ, ಕಣ್ಣಿನ ದೋಷ ನಿವಾರಣೆಗೆ ಹಲವು ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ಅಲ್ಲದೇ ವಿವೇಕಾನಂದ ಆಸ್ಪತ್ರೆಯಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರಗಳನ್ನು ನಡೆಸಿ ಅಗತ್ಯವಿದ್ದವರಿಗೆ ಉಚಿತವಾಗಿ ಶಸ್ತ್ರ ಚಿಕಿತ್ಸೆ ನಡೆಸಲಾಗುತ್ತಿದೆ. ಕೋವಿಡ್ ನಂತರ ಇಲ್ಲಿವರೆಗೂ ಆಸ್ಪತ್ರೆಯಲ್ಲಿ 1732ಕ್ಕಿಂತ ಹೆಚ್ಚು ಕಣ್ಣಿನ ಶಸ್ತ್ರಚಿಕಿತ್ಸೆ ಮಾಡಲಾಗಿದೆ. ಸಾರ್ವಜನಿಕರು ಇಂತಹ ಶಿಬಿರಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಮನವಿ ಮಾಡಿದರು.

ಪದ್ಮಶ್ರೀ ಪುರಸ್ಕೃತ, ನಿವೃತ್ತ ಐಪಿಎಸ್ ಅಧಿಕಾರಿ ಚಮನ್ ಲಾಲ್ ಮಾತನಾಡಿ, ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸಂಸ್ಥೆ 40 ವರ್ಷಗಳಿಂದ ಸರ್ಕಾರದ ಜೊತೆಗೂಡಿ ಆರೋಗ್ಯ ಸೇವೆ ನೀಡುತ್ತಿದೆ. ಇಲ್ಲಿ ಜಲ ಸಂಪತ್ತು, ಅರಣ್ಯ ಸಂಪತ್ತು, ಭೂ ಸಂಪತ್ತು ಹೇರಳವಾಗಿದೆ. ಪ್ರಕೃತಿ ಸೌಂದರ್ಯ ಸವಿಯಲು ದೇವರು ನಮಗೆ ಕಣ್ಣು ಕೊಟ್ಟಿದ್ದಾನೆ. ಜೊತೆಗೆ ಅದನ್ನು ಕಾಪಾಡಲು ಕೌಶಲ್ಯ ಭರಿತ ವೈದ್ಯರನ್ನು ಕೊಟ್ಟಿದ್ದಾರೆ. ಪ್ರತಿಯೊಬ್ಬರೂ ಕಣ್ಣಿನ ಆರೋಗ್ಯದ ಬಗ್ಗೆ ಎಚ್ಚರ ವಹಿಸಿ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಡಾ.ಕುಮಾರ್, ಇತರ ಆರೋಗ್ಯ ಸೇವೆ ಜೊತೆಗೆ ಡಯಾಬಿಟಿಕ್ ರೆಟಿನೋಪತಿ ಮತ್ತು ಮಕ್ಕಳ ಕಣ್ಣಿನ ಚಿಕಿತ್ಸೆ ಬಗ್ಗೆ ವಿಶೇಷ ಕಾಳಜಿ ವಹಿಸಿ ಅಂಧತ್ವದಿಂದ ಬೆಳಕಿನೆಡೆಗೆ ತರಲು ನಮ್ಮ ವಿವೇಕಾನಂದ ಸ್ಮಾರಕ ಆಸ್ಪತ್ರೆಯ ವೈದ್ಯರ ತಂಡ ಶ್ರಮಿಸುತ್ತಿದೆ ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕು ಎಂದು ಹೇಳಿದರು.

ನೇತ್ರ ತಜ್ಞ ಡಾ.ನರೇಂದ್ರ ರಾಮಕೃಷ್ಣ ಮಾತನಾಡಿ, ಕಣ್ಣು ಸೂಕ್ಷ್ಮವಾದ ಅಂಗ. ಕಣ್ಣಿಗೆ ಏನಾದರೂ ತೊಂದರೆಯಾದರೆ ಸಾರ್ವಜನಿಕರು ತಕ್ಷಣ ತಜ್ಞರಿಂದ ಚಿಕಿತ್ಸೆ ಪಡೆಯಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಡಾ.ವಿನಯ್ ಕುಮಾರ್, ವಿವೇಕಾನಂದ ಸ್ಮಾರಕ ಆಸ್ಪತ್ರೆ ವ್ಯವಸ್ಥಾಪಕ ಸಂಧ್ಯಾ, ವೈದ್ಯರಾದ ಡಾ.ಅಭಿಷೇಕ್, ಡಾ.ಅನುಶ್ರೀ, ರಾಕೇಶ್, ಪುಟ್ಟಮ್ಮ, ಅಪ್ರೋಶ್ ಪಾಷ, ಎಂ.ಪಿ.ರಮೇಶ್, ಗೋಪಾಲಕೃಷ್ಣ, ರೂಪೇಶ್, ಮಮತ, ಕವಿತ, ಸುಚಿತ್ರ, ಶ್ಯಾಮಲ, ದೀಪಿಕಾ, ಭೂಮಿ, ಇನ್ನಿತರರಿದ್ದರು.

ಮೈಸೂರಲ್ಲಿ ದಸರಾ ಮೆರಗು ಹೆಚ್ಚಿಸಿದ ವಿಂಟೇಜ್ ಕಾರುಗಳ ರ‍್ಯಾಲಿ

40ಕ್ಕೂ ಹೆಚ್ಚು ಕಾರು, ಬೈಕುಗಳ ಪ್ರದರ್ಶನ, 20ಕ್ಕೂ ಹೆಚ್ಚು ಕಾರುಗಳ ಸಂಚಾರ





ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಎಂಜಿಎಸ್ ವಿಂಟೇಜ್ ಮತ್ತು ಕ್ಲಾಸಿಕ್ ಕಲೆಕ್ಷನ್ ವತಿಯಿಂದ ಶುಕ್ರವಾರ ಆಯೋಜಿಸಿದ್ದ ವಿಂಟೇಜ್ ಕಾರುಗಳ ರ‍್ಯಾಲಿಗೆ 'ಸ್ಟಾರ್ ಆಫ್ ಮೈಸೂರ್' ಮತ್ತು 'ಮೈಸೂರು ಮಿತ್ರ' ಪತ್ರಿಕೆಗಳ ವ್ಯವಸ್ಥಾಪಕ ಸಂಪಾದಕರಾದ ವಿಕ್ರಮ್ ಮುತ್ತಣ್ಣ ಮತ್ತು ಮಾಜಿ ಸಂಸದ ಪ್ರತಾಪ್ ಸಿಂಹ ಚಾಲನೆ ನೀಡಿದರು. ಈ ವೇಳೆ ಉದ್ಯಮಿ ಗೋಪಿನಾಥ್ ಶೆಣೈ, ಸಾವಿತ್ರಿ ಗೋಪಿನಾಥ್ ಶೆಣೈ, ಸಂದೀಪ್ ನಾಯಕ್, ಆಲೈನ್, ಉದ್ಯಮಿ ಮಾಧವ ಶೆಣೈ, ಗಿರಿಧರ್ ಉಪಸ್ಥಿತರಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಎಫ್‌ಐಆರ್ ದಾಖಲಾಗುತ್ತಿದ್ದಂತೆ ಅವರ ಮನೆ ಬಳಿ ಜನರು ಸೇರುತ್ತಿಲ್ಲ. ಈ ಹಿಂದೆ ದೇವರಾಜ ಅರಸು ಅವರು ಅಧಿಕಾರ ಕಳೆದುಕೊಂಡಾಗ ಕೂಡ ಅವರಿಂದಲೂ ಜನರು ಅಂತರ ಕಾಯ್ದುಕೊಂಡಿದ್ದರು. ಅಧಿಕಾರವಿಲ್ಲದಿದ್ದರೆ ಮನೆ ಬಳಿ ಒಂದು ಸತ್ತ ನಾಯಿಯೂ ಬರುವುದಿಲ್ಲ. ಆದರೆ, ಜನ ನಾನು ಅಧಿಕಾರದಲ್ಲಿ ಇಲ್ಲದಿದ್ದರೂ ಸಾಕಷ್ಟು ಪ್ರೀತಿ ನೀಡುತ್ತಿದ್ದಾರೆ.

ಹಲವಾರು ಕಾರಣಗಳಿಂದ ಈ ಬಾರಿ ಲೋಕಸಭಾ ಟಿಕೆಟ್ ಕೈ ತಪ್ಪಿದಾಗ ನನಗಿಂತಲೂ ಸಾಕಷ್ಟು ಜನರು ಬೇಸರ ಹೊಂದಿದ್ದಾರೆ. ಸೂರ್ಯನಿಗೆ ಗ್ರಹಣ ಹಿಡಿಯುತ್ತದೆ. ಅಂತಹದರಲ್ಲಿ ನಾನು ಯಾವ ಲೆಕ್ಕ. ಎಲ್ಲವೂ ಸರಿಯಾಗುತ್ತದೆ.

-ಪ್ರತಾಪ್ ಸಿಂಹ, ಮಾಜಿ ಸಂಸದ

ಮೈಸೂರು, ಅ.4(ಜಿಎ)–ಪಾರಂಪರಿಕ ನಗರ ಮೈಸೂರಿನಲ್ಲಿ ದಸರಾ ಸಂಭ್ರಮ ಕಳೆಗಟ್ಟಿದ್ದು, ಶುಕ್ರವಾರ ವಿಂಟೇಜ್ ಕಾರುಗಳು ನಗರದಲ್ಲಿ ಸಂಚರಿಸುವ ಮೂಲಕ ಮತ್ತಷ್ಟು ಮೆರಗು ಹೆಚ್ಚಿಸಿದೆ.

ಮೈಸೂರು ನಗರದ ಹೊರ ವಲಯದ ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿರುವ ಎಂಜಿಎಸ್ ವಿಂಟೇಜ್ ಮತ್ತು ಕ್ಲಾಸಿಕ್ ಕಲೆಕ್ಷನ್ (ಎಂ.ಗೋಪಿನಾಥ್ ಶೆಣೈ ಅವರು ಸಂಗ್ರಹಿಸಿರುವ ಕಾರುಗಳು) ವತಿಯಿಂದ ದಸರಾ ಮಹೋತ್ಸವದ ಅಂಗವಾಗಿ ವಿಂಟೇಜ್ ಮತ್ತು ಕ್ಲಾಸಿಕ್ ಕಾರುಗಳ ರ‍್ಯಾಲಿ ಏರ್ಪಡಿಸಲಾಗಿತ್ತು. ಶತಮಾನದ ಇತಿಹಾಸವನ್ನು ಹೊಂದಿದ್ದ ವಿಂಟೇಜ್ ಕಾರುಗಳು ನಗರದೆಲ್ಲೆಡೆ ಸಂಚರಿಸುವ ಮೂಲಕ ಮೈಸೂರಿಗೆ ಆಗಮಿಸಿರುವ ಪ್ರವಾಸಿಗರನ್ನು ಆಕರ್ಷಿಸಿತು.

ರ‍್ಯಾಲಿಗೆ 'ಸ್ಟಾರ್ ಆಫ್ ಮೈಸೂರ್', ಮತ್ತು 'ಮೈಸೂರು ಮಿತ್ರ' ಪತ್ರಿಕೆಗಳ ವ್ಯವಸ್ಥಾಪಕ ಸಂಪಾದಕರಾದ ವಿಕ್ರಮ್ ಮುತ್ತಣ್ಣ ಮತ್ತು ಮಾಜಿ ಸಂಸದ ಪ್ರತಾಪ್ ಸಿಂಹ ಚಾಲನೆ ನೀಡಿದರು.

ರ‍್ಯಾಲಿಯಲ್ಲಿ ಅಮೆರಿಕ, ಆಸ್ಟ್ರೇಲಿಯಾ, ಜರ್ಮನಿ ಮೊದಲಾದ ದೇಶಗಳ ಕಾರುಗಳಾದ ಮ್ಯಾರಿಸ್ ಮೈನರ್, ಅಸ್ಟಿನ್, ರೋಲ್ಸ್ ರಾಯ್ಸ್ ಸೇರಿದಂತೆ ನಾನಾ ಕಾರುಗಳು ನಗರದೆಲ್ಲೆಡೆ ಸಂಚರಿಸುವ ಮೂಲಕ ವಾಹನ ಪ್ರಿಯರ ಮೋಡಿ ಮಾಡಿತು.

ಬೆಂಗಳೂರು ಸೇರಿದಂತೆ ಗೋವಾ, ಹೈದರಾಬಾದ್, ಚನ್ನೈ, ಪಾಂಡಿಚೇರಿ ಮೊದಲಾದ ನಗರಗಳಿಂದ ಕಾರು ಪ್ರಿಯರು ತಮ್ಮ ಕಾರುಗಳನ್ನು ತಂದು ಪ್ರದರ್ಶನಕ್ಕೆ ಇರಿಸಿದ್ದು, ವಿಶೇಷವಾಗಿತ್ತು. 40ಕ್ಕೂ ಹೆಚ್ಚು ಕಾರು ಮತ್ತು ಬೈಕ್‌ಗಳು ಪ್ರದರ್ಶನದಲ್ಲಿ ಭಾಗವಹಿಸಿದ್ದವು. 20ಕ್ಕೂ ಹೆಚ್ಚು ವಿಂಟೇಜ್ ಕಾರುಗಳು ಸಂಚರಿಸಿ ಮೋಡಿ ಮಾಡಿದವು.

ರ‍್ಯಾಲಿಯೂ ಇನ್ಫೋಸಿಸ್ ರಸ್ತೆಯ ಮೂಲಕ ತೆರಳಿ ನಗರದೆಲ್ಲೆಡೆ ಸಂಚರಿಸಿ ಮಧ್ಯಾಹ್ನ 12.15ಕ್ಕೆ ಕುರುಬಾರಹಳ್ಳಿ ವೃತ್ತದ ಬಳಿ ಇರುವ ಬಹರ್ಚಿನ್ ಬಂಗಲೆಯಲ್ಲಿ ಮುಕ್ತಾಯಗೊಂಡಿತು. ಮಧ್ಯಾಹ್ನ 2.30ಕ್ಕೆ ಬಹರ್ಚಿನ್ ಬಂಗಲೆಯಿಂದ ಆರಂಭವಾದ ರ‍್ಯಾಲಿ ದೇವೇಗೌಡ ವೃತ್ತ–ಬನ್ನೂರು ರಿಂಗ್ ರಸ್ತೆ–ಮಣಿಪಾಲ್ ಆಸ್ಪತ್ರೆ ಜಂಕ್ಷನ್–ಕೆಆರ್‌ಎಸ್ ರಸ್ತೆ ಮೂಲಕ ಸಾಗಿ ಹೆಬ್ಬಾಳ ಕೈಗಾರಿಕಾ ಪ್ರದೇಶದಲ್ಲಿರುವ ವಿಂಟೇಜ್ ಕಾರ್ಸ್ ಆವರಣವನ್ನು ಮಧ್ಯಾಹ್ನ 3.30ಕ್ಕೆ ತಲುಪಿತು.

ವಿಂಟೇಜ್ ಮತ್ತು ಕ್ಲಾಸಿಕ್ ಕಾರುಗಳು ಸಂಚರಿಸಿದ ರಸ್ತೆಯುದ್ದಕ್ಕೂ ಪ್ರವಾಸಿಗರು ಉತ್ಸಕರಾಗಿ ವೀಕ್ಷಿಸಿ, ತಮ್ಮ ಮೊಬೈಲ್‌ಗಳಲ್ಲಿ ಸೆಲ್ಫಿ ಮತ್ತು ಫೋಟೋಗಳನ್ನು ಕ್ಲಿಕ್ಕಿಸಿಕೊಂಡ ದೃಶ್ಯಗಳು ಕಂಡು ಬಂದಿತು.

ರ‍್ಯಾಲಿಗೆ ಚಾಲನೆ ನೀಡಿದ ಮಾಜಿ ಸಂಸದ ಪ್ರತಾಪ್ ಸಿಂಹ ಮಾತನಾಡಿ, ನಾನಾ ದೇಶಗಳ ತರಹವೇರಿ ಕಾರುಗಳು ಒಂದಕ್ಕಿಂತ ಒಂದು ವಿಭಿನ್ನವಾಗಿದ್ದು, 80–100 ವರ್ಷಗಳ ಹಳೆಯ ಕಾರುಗಳ ನಿರ್ವಹಣೆ ಮಾಡುವುದು ಸುಲಭದ ಕೆಲಸವಲ್ಲ ಎಂದು ಎಂ.ಗೋಪಿನಾಥ್ ಶೆಣೈ ಅವರು ಸಂಗ್ರಹಿಸಿರುವ ಕಾರುಗಳು ಉತ್ಸಾಹಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ಮೊದಲ ವರ್ಷ ರ‍್ಯಾಲಿ ಏರ್ಪಡಿಸಿದ್ದಾಗ 'ಸ್ಟಾರ್ ಆಫ್ ಮೈಸೂರ್', 'ಮೈಸೂರು ಮಿತ್ರ' ಪತ್ರಿಕೆಗಳ ವ್ಯವಸ್ಥಾಪಕ ಸಂಪಾದಕರಾದ ವಿಕ್ರಮ್ ಮುತ್ತಣ್ಣ ಅವರ ಗಮನಕ್ಕೆ ತಂದಾಗ ಅವರು ತಮ್ಮ ಪತ್ರಿಕೆಯ ಮುಖ ಪುಟದಲ್ಲಿ ಪ್ರಕಟಿಸಿದ ನಂತರ ಮತ್ತಷ್ಟು ಮನ್ನಣೆ ಗಳಿಸಿತು. ಪತ್ರಿಕೆಯ ಸಂಸ್ಥಾಪಕ ಸಂಪಾದಕರಾದ ಡಾ.ಕೆಬಿ.ಗಣಪತಿ ಅವರು ಎರಡನೇ ವರ್ಷದ ರ‍್ಯಾಲಿಯಲ್ಲಿ ಭಾಗವಹಿಸಿ, ರ‍್ಯಾಲಿ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಅವರಿಗೂ ಈ ರೀತಿಯ ವಿಂಟೇಜ್ ಕಾರುಗಳು ಎಂದರೆ ಇಷ್ಟ. ಅವರು ಮೊದಲ ಬಾರಿ ಸಂಸದನಾಗಿ ಆಯ್ಕೆಯಾದಾಗ ನನ್ನ ಬೆನ್ನು ತಟ್ಟಿ ಶುಭ ಹಾರೈಸಿದ್ದರು. ಅವರಿಗೆ ನಾನೂ ಆಭಾರಿ ಎಂದು ಸ್ಮರಿಸಿದರು. ಕಾರ್ಯಕ್ರಮದಲ್ಲಿ ಉದ್ಯಮಿ ಗೋಪಿನಾಥ್ ಶೆಣೈ, ಸಾವಿತ್ರಿ ಗೋಪಿ ನಾಥ್ ಶೆಣೈ, ಸಂದೀಪ್ ನಾಯಕ್, ಆಲೈನ್, ಉದ್ಯಮಿ ಮಾಧವ ಶೆಣೈ, ಗಿರಿಧರ್ ಉಪಸ್ಥಿತರಿದ್ದರು.





ಮೈಸೂರಲ್ಲಿ ಆನ್‌ಲೈನ್ ಬೆಟ್ಟಿಂಗ್ ವಿರುದ್ಧ ಸೈಕಲ್ ಜಾಥಾ



ಮೈಸೂರು, ಅ. 4(ಆರ್‌ಕೆ)– ನವಭಾರತ ನಿರ್ಮಾಣ ಸೇವಾ ಟ್ರಸ್ಟ್ ವತಿಯಿಂದ ಆನ್‌ಲೈನ್ ಬೆಟ್ಟಿಂಗ್ ಹಾಗೂ ಗೇಮಿಂಗ್ ವಂಚನೆ ಬಗ್ಗೆ ಮೈಸೂರಲ್ಲಿ ಇಂದು ಟ್ರಿಣ್ ಟ್ರಿಣ್ ಸೈಕಲ್ ಜಾಗೃತಿ ಜಾಥಾ ಏರ್ಪಡಿಸಲಾಗಿತ್ತು.

ಟ್ರಸ್ಟ್ ಅಧ್ಯಕ್ಷರಾದ ಮಾಜಿ ನಗರಪಾಲಿಕೆ ಸದಸ್ಯ ಕೆ.ವಿ. ಶ್ರೀಧರ್ ಹೆಬ್ಬಾಳು ದಸರಾ ಅಂಗವಾಗಿ ಏರ್ಪಡಿಸಿದ್ದ ಸೈಕಲ್ ಜಾಥಾವನ್ನು ಡಿಸಿಪಿ ಎಂ. ಮುತ್ತುರಾಜ್, ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ಹಾಗೂ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ ಎಸ್.ಟಿ. ರವಿಕುಮಾರ್ ಅರಮನೆ ಬಲರಾಮ ದ್ವಾರದ ಶ್ರೀ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿ ಉದ್ಘಾಟಿಸಿ, ಟ್ರಿಣ್ ಟ್ರಿಣ್ ಸೈಕಲ್ ಸವಾರಿ ಮಾಡಿದರು.

'ಆನ್‌ಲೈನ್ ಬೆಟ್ಟಿಂಗ್, ಆನ್‌ಲೈನ್ ಗೇಮಿಂಗ್ ಭವಿಷ್ಯಕ್ಕೆ ಮಾರಿ', 'ಪೋಷಕರೇ ಆನ್‌ಲೈನ್ ಬೆಟ್ಟಿಂಗ್‌ನಿಂದ ನಿಮ್ಮ ಮಕ್ಕಳನ್ನು ರಕ್ಷಿಸಿ', 'ಬುದ್ಧಿವಂತರಾಗಿರಿ–ಎಚ್ಚರವಾಗಿರಿ–ಸುರಕ್ಷಿತವಾಗಿರಿ', 'ಕುತೂಹಲಕ್ಕೆಂದು ಶುರು ಮಾಡಿದ ಬೆಟ್ಟಿಂಗ್ ಜೈಲು ಸೇರಿಸುತ್ತದೆ', 'ಹದಗೆಟ್ಟರೆ ಹವಾಮಾನ–ಬದುಕುವುದು ಅನುಮಾನ', 'ಪರಿಸರ ಉಳಿಸಿ–ಆರೋಗ್ಯ ಕಾಪಾಡಿ' ಎಂಬಿತ್ಯಾದಿ ಘೋಷಣಾ ಫಲಕದೊಂದಿಗೆ 100ಕ್ಕೂ ಹೆಚ್ಚು ಯುವಕರು ಸೈಕಲ್ ಸವಾರಿ ಮಾಡಿ ಸಾರ್ವಜನಿಕರಿಗೆ ಅರಿವು ಮೂಡಿಸಿದರು.

ಸೈಕಲ್ ಜಾಥಾವು ಹಾರ್ಡಿಂಜ್ ಸರ್ಕಲ್, ಅರಮನೆ ಪೂರ್ವ ದ್ವಾರ, ಗನ್‌ಹೌಸ್ ಸರ್ಕಲ್, ಸಯ್ಯಾಜಿರಾವ್ ರಸ್ತೆ ಶಿವರಾಂ ಪೇಟೆ, ಸಂತೆಪೇಟೆ, ಡಿ. ದೇವರಾಜ ಅರಸು ರಸ್ತೆ ಹಳೇ ಡಿಸಿ ಕಚೇರಿ, ಕ್ರಾಫರ್ಡ್ ಭವನದ ಮೂಲಕ ಕುಕ್ಕರಹಳ್ಳಿ ಕೆರೆ ಬಳಿಗೆ ತೆರಳಿ ಅಂತ್ಯಗೊಂಡಿತು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಕೃಷ್ಣಂ ಪ್ರಣಯ ಸಖಿ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕೃಷ್ಣಂ ಪ್ರಣಯ ಸಖಿ (ಕ) ದೇವರ (ಕ)	1+3 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ದೇವರ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಭೈರಾದೇವಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ದೇವರ (ತೆ)	4 ಪ್ರದರ್ಶನಗಳು
ರಾಜಕಮಲ್	
ಜೋಕರ್ ಪೋಲಿಕಾ ಡ್ಯೂಕ್ಸ್ (ಇಂ)	4 ಪ್ರದರ್ಶನಗಳು
ಸಂಗಂ	
ಭೈರಾದೇವಿ (ಕ)	4 ಪ್ರದರ್ಶನಗಳು
ಲಿಡೋ	
ಉಪೇಂದ್ರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಕೃಷ್ಣಂ ಪ್ರಣಯ ಸಖಿ (ಕ)	4 ಪ್ರದರ್ಶನಗಳು
ಪ್ರಭಾ	
ಭೀಮ (ಕ)	2 ಪ್ರದರ್ಶನಗಳು
ರಾಜಯೋಗ (ಕ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಜೋಕರ್ ಫೋಲಿಕಾ ಡ್ಯೂಕ್ಸ್ (ಇಂ): ಬೆ.10.05ಕ್ಕೆ, ಸಂ.4.05ಕ್ಕೆ, ರಾ.7ಕ್ಕೆ, ರಾ.9.55ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ಮ.1ಕ್ಕೆ.
ಸ್ಕ್ರೀನ್ 2	ದೇವರ 1 (ತೆ): ರಾ.10ಕ್ಕೆ.
ಸ್ಕ್ರೀನ್ 3	ಸ್ತ್ರೀ 2 (ಹಿಂ): ಬೆ.10.05ಕ್ಕೆ, ದೇವರ 1 (ತೆ): ಮ.1ಕ್ಕೆ, ಅನ್ನ (ಕ): ಸಂ.4.30ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ರಾ.7ಕ್ಕೆ, ಕಳಿಂಗ (ತೆ): ರಾ.10.10ಕ್ಕೆ.
ಸ್ಕ್ರೀನ್ 4	ಪುಷ್ಪಕ ವಿಮಾನಂ (ಮ): ಬೆ.10.20ಕ್ಕೆ, ಭೈರಾದೇವಿ (ಕ): ಮ.1.05ಕ್ಕೆ, ದೇವರ 1 (ತೆ): ಮ.3.45ಕ್ಕೆ, ರಾ.7.05ಕ್ಕೆ, ತೆಕ್ಕು ವಡಕ್ಕು (ಮ): ರಾ.10.30ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಇಬ್ಬನಿ ತಬ್ಬಿದ ಇಳೆಯಲಿ (ಕ): ಮ.1.10ಕ್ಕೆ, ಸ್ವಾಗ್ (ತೆ): ಸಂ.4.10ಕ್ಕೆ, ತೆಕ್ಕು ವಡಕ್ಕು (ಮ): ರಾ.7.10ಕ್ಕೆ, ಗುಮಾಸ್ತಾನ್ (ಮ): ರಾ.9.40ಕ್ಕೆ.
ಸ್ಕ್ರೀನ್ 2	ಜೋಕರ್ ಫೋಲಿಕಾ ಡ್ಯೂಕ್ಸ್ (ಇಂ): ಮ.1.45ಕ್ಕೆ, ದೇವರ 1 (ತೆ): ಸಂ.4.40ಕ್ಕೆ, ರಾ.8ಕ್ಕೆ.
ಸ್ಕ್ರೀನ್ 3	ಭೈರಾದೇವಿ (ಕ): ಮ.1.40ಕ್ಕೆ, ಸಂ.4.15ಕ್ಕೆ, ಜೋಕರ್ ಫೋಲಿಕಾ ಡ್ಯೂಕ್ಸ್ (ಇಂ): ಸಂ.6.50ಕ್ಕೆ, ರಾ.9.40ಕ್ಕೆ.
ಸ್ಕ್ರೀನ್ 4	ದೇವರ 1 (ಕ): ಮ.1.30ಕ್ಕೆ, ದೇವರ 1 (ತೆ): ಸಂ.6.05ಕ್ಕೆ, ರಾ.9.20ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ನಾಳೆಯಿಂದ ದಸರಾ ಮೆಗಾ ಇವೆಂಟ್ ಯುವ ದಸರಾ

ಸುರಕ್ಷತೆಗಾಗಿ 1239 ಪೊಲೀಸರ ನಿಯೋಜನೆ; ಮಹಿಳೆಯರಿಗೆ ಪ್ರತ್ಯೇಕ ಆಸನ ವ್ಯವಸ್ಥೆ

● ಎಸ್ಪಿ ವಿಷ್ಣುವರ್ಧನ್ ವ್ಯವಸ್ಥೆಯ ಕುರಿತು ವಿವರಣೆ ● ಹೊರ ವಲಯದ ಅಂಜಿಕೆ ತೊರೆದು ಕಾರ್ಯಕ್ರಮಕ್ಕೆ ಬನ್ನಿ



ಮೈಸೂರು, ಅ.4(ಎಂಟಿವೈ)– ಮೈಸೂರು ತಾಲೂಕಿನ ಉತ್ತನಹಳ್ಳಿ ಬಳಿ ನಡೆಯುವ ಯುವ ದಸರಾ ಕಾರ್ಯಕ್ರಮದ ಭದ್ರತೆಗೆ ಹಿರಿಯ ಅಧಿಕಾರಿಗಳೂ ಸೇರಿದಂತೆ 1239 ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಸುರಕ್ಷತೆ ದೃಷ್ಟಿ ಯಿಂದ ಸಿಸಿ ಕ್ಯಾಮರಾ ಅಳವಡಿಸಲಾಗಿದೆ ಎಂದು ಎಸ್ಪಿ ಹಾಗೂ ಯುವ ದಸರಾ ಉಪ ಸಮಿತಿ ಉಪ ವಿಶೇಷಾಧಿಕಾರಿ ಎನ್.ವಿಷ್ಣುವರ್ಧನ್ ತಿಳಿಸಿದ್ದಾರೆ.

ಯುವ ದಸರಾ ಕಾರ್ಯಕ್ರಮದ ಸಿದ್ಧತೆ ಕುರಿತಂತೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮಕ್ಕೆ ಈಗಾಗಲೇ ವೇದಿಕೆ ಸಿದ್ಧವಾಗುತ್ತಿದೆ. ಕಾರ್ಯಕ್ರಮಕ್ಕೆ ಅವಶ್ಯವಿರುವ ಬೆಳಕಿನ ವ್ಯವಸ್ಥೆ ಮಾಡಲಾಗಿದೆ. ಪ್ರತಿ ವರ್ಷ ಮಹಾರಾಜ ಕಾಲೇಜು ಮೈದಾನದಲ್ಲಿ ಈ ಕಾರ್ಯಕ್ರಮ ನಡೆಯುತ್ತಿತ್ತು. ಸಂಚಾರ ದಟ್ಟಣೆ ತಡೆಯುವ ಉದ್ದೇಶದಿಂದ ಈ ಬಾರಿ ಮೈಸೂರು ಹೊರವಲಯದ ಉತ್ತನಹಳ್ಳಿ ಬಳಿ ಆಯೋಜಿಸಲಾಗಿದೆ. ಕಾರ್ಯಕ್ರಮ ನಡೆಯುವ ಸ್ಥಳ ನಿರ್ಜನ ಪ್ರದೇಶ, ಮಹಿಳೆಯರಿಗೆ ಭದ್ರತೆ ಇಲ್ಲ ಎಂಬ ದೂರುಗಳ ಹಿನ್ನೆಲೆಯಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಸಾರ್ವಜನಿಕರು ಯಾವುದೇ ಆತಂಕ ಇಲ್ಲದೆ ಕಾರ್ಯಕ್ರಮ ವೀಕ್ಷಿಸಬಹುದು ಎಂದು ಭರವಸೆ ನೀಡಿದರು.

ಭಾರೀ ಭದ್ರತೆ: ಕಾರ್ಯಕ್ರಮದ ಭದ್ರತೆಗೆ 4 ಎಸ್ಪಿ, 12 ಡಿವೈಎಸ್‌ಪಿ, 37 ಸಿಪಿಐ, 76 ಎಎಸ್‌ಐ, 600 ಹೆಚ್‌ಸಿ, ಪಿಸಿ, 100 ಮಹಿಳಾ ಪೊಲೀಸರು, 300 ಹೋಂ ಗಾರ್ಡ್‌ಗಳು ಸೇರಿದಂತೆ ಒಟ್ಟು 1239 ಸಿಬ್ಬಂದಿ ನಿಯೋಜಿಸಲಾಗಿದೆ ಜತೆಗೆ 6 ಕೆಎಸ್‌ಆರ್‌ಪಿ, 10 ಡಿಎಆರ್, 10 ಎಎಸ್‌ಸಿ ತಂಡ, 4 ಕ್ಯೂಆರ್‌ಟಿ, 2 ಆಂಬುಲೆನ್ಸ್, 2 ಅಗ್ನಿಶಾಮಕ ವಾಹನ, 1 ಮೊಬೈಲ್ ಕಮಾಂಡಿಂಗ್ ವಾಹನ ಬಳಸಲಾಗುತ್ತಿದೆ. ಸಂಚಾರ ದಟ್ಟಣೆ ನಿರ್ವಹಣೆಗೆ 2 ಪಿಐ, 6 ಪಿಎಸ್‌ಐ, 10 ಎಎಸ್‌ಐ, 50 ಹೆಚ್‌ಸಿ, ಪಿಸಿ ಸಿಬ್ಬಂದಿ ನಿಯೋಜಿಸಲಾಗಿದೆ. ಕಾರ್ಯಕ್ರಮ ನಡೆಯುವ ಸ್ಥಳ ಹಾಗೂ ಮಾರ್ಗದಲ್ಲಿ ಹೆಚ್ಚುವರಿ ಸಿಸಿಟಿವಿ ಅಳವಡಿಸಲಾಗಿದೆ. ಮೂರು ಪೆಟ್ರೋಲಿಂಗ್ ತಂಡ ಗಸ್ತು ತಿರುಗಲಿದೆ. 10 ವಾಚ್ ಟವರ್ ನಿರ್ಮಿಸಲಾಗಿದ್ದು, ಸಾರ್ವಜನಿಕರಿಗೆ ಅಗತ್ಯ ಮಾಹಿತಿ ನೀಡಲು 5–6 ಹೆಲ್ಪ್ ಡೆಸ್ಕ್ ತೆರೆಯಲಾಗಿದೆ. 3 ಕಡೆ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದ್ದು, ಸುಮಾರು 3 ಸಾವಿರ ವಾಹನ ನಿಲ್ಲಿಸಬಹುದು ಎಂದರು.

ಮಹಿಳೆಯರಿಗೆ ಪ್ರತ್ಯೇಕ ಆಸನ ವ್ಯವಸ್ಥೆ: ಯುವ ದಸರಾ ವೀಕ್ಷಣೆಗೆ ಬರುವ ಮಹಿಳೆಯರ ಸುರಕ್ಷತೆಗೆ ಕ್ರಮ ಕೈಗೊಳ್ಳಲಾಗಿದೆ. ಮಹಿಳೆಯರಿಗಾಗಿ ಪ್ರತ್ಯೇಕ ಆಸನದ ವ್ಯವಸ್ಥೆ ಮಾಡಲಾಗಿದೆ. ಪುರುಷರಿಲ್ಲದೆ ಗುಂಪು ಗುಂಪಾಗಿ ಬರುವ ಮಹಿಳೆಯರು, ಈ ಪ್ರತ್ಯೇಕ ಎನ್‌ಕ್ಲೋಸರ್‌ನಲ್ಲಿ ಕುಳಿತು ಯುವ ದಸರಾ ವೀಕ್ಷಿಸಬಹುದು. ಇದಕ್ಕಾಗಿ 5 ಸಾವಿರ ಆಸನದ ವ್ಯವಸ್ಥೆ ಮಾಡಲಾಗಿದೆ ಕಾರ್ಯಕ್ರಮ ವೀಕ್ಷಣೆಗೆ ಬರುವ ಗಣ್ಯರು, ವಿವಿಐಪಿಗಳು, ಸಾರ್ವಜನಿಕರ ಭದ್ರತೆಗೆ ಸೂಕ್ತ ಬಂದೋಬಸ್ತ್ ಮಾಡಲಾಗಿದೆ ಎಂದು ತಿಳಿಸಿದರು.

ಚಾಮುಂಡಿಬೆಟ್ಟದ ತಪ್ಪಲಿಗೆ ಹೊಂದಿಕೊಂಡಂತೆ ಇರುವ ಸ್ಥಳದಲ್ಲಿ ಕಾರ್ಯಕ್ರಮ ನಡೆಯುತ್ತಿರುವುದರಿಂದ ಈ ಮಾರ್ಗ ಹಾಗೂ ಕಾರ್ಯಕ್ರಮದ ಸ್ಥಳದ ಸುತ್ತಮುತ್ತ ಕಾಡು ಪ್ರಾಣಿಗಳ ಹಾವಳಿ ತಪ್ಪಿಸಲು ಅಗತ್ಯ ಮುಂಜಾಗ್ರತಾ ಕ್ರಮ ಕೈಗೊಳ್ಳುವಂತೆ ಅರಣ್ಯ ಇಲಾಖೆಗೆ ಪತ್ರ ಬರೆಯಲಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮ ಸ್ಥಳಕ್ಕೆ ಬರುವ ರಸ್ತೆ ಹಾಗೂ ರಿಂಗ್ ರಸ್ತೆಯಲ್ಲಿ ವಿದ್ಯುತ್ ದೀಪಾಲಂಕಾರ ಮಾಡಲಾಗುತ್ತಿದೆ. ಕಾರ್ಯಕ್ರಮದ ಸ್ಥಳ ದೂರ ಎಂಬ ಆತಂಕ ಜನರಿಂದ ವ್ಯಕ್ತವಾಗಿದ್ದರಿಂದ, ಪ್ರತಿದಿನ ನಿಗಧಿತ ಸಮಯದಲ್ಲಿ ಕಾರ್ಯಕ್ರಮ ಆರಂಭವಾಗಿ ಸೂಕ್ತ ಸಮಯದಲ್ಲಿ ಮುಕ್ತಾಯವಾಗಲಿದೆ ಎಂದರು.

ಯುವ ದಸರಾದಲ್ಲಿ ಎ.ಆರ್.ರೆಹಮಾನ್, ಇಳಯರಾಜ, ಶ್ರೇಯಾ ಘೋಷಾಲ್ ಸಂಗೀತ ಸಂಜೆ

ಅ.6ರಿಂದ 10ರವರೆಗೆ ಯುವ ದಸರಾ ನಡೆಯಲಿದ್ದು, ಅ.6ರಂದು ಸಂಜೆ ಅಶ್ವಿನಿ ಪುನೀತ್ ರಾಜಕುಮಾರ್ ಚಾಲನೆ ನೀಡಲಿದ್ದಾರೆ. ಈ ಬಾರಿಯ ಯುವ ದಸರಾ ಕಾರ್ಯಕ್ರಮಕ್ಕೆ ಭಾರತೀಯ ಸಂಗೀತ ಲೋಕದ ದಿಗ್ಗಜರಾದ ಎ.ಆರ್.ರೆಹಮಾನ್ ಹಾಗೂ ಇಳಯರಾಜ ಪ್ರಮುಖ ಆಕರ್ಷಣೆ. ಅ.6ರಿಂದ ಬಾಲಿವುಡ್ ಹಿನ್ನೆಲೆ ಗಾಯಕಿ ಶ್ರೇಯಾ ಘೋಷಾಲ್ ತಂಡದಿಂದ ಬಾಲಿವುಡ್ ನೈಟ್ಸ್, ಅ.7ರಂದು ಸಂಗೀತ ಸಂಯೋಜಕ ರವಿ ಬಸ್ರೂರು ತಂಡದಿಂದ ರಸಸಂಜೆ ಹಾಗೂ ಸ್ಯಾಂಡಲ್‌ವುಡ್ ನೈಟ್ಸ್ ಕಾರ್ಯಕ್ರಮ; ಅ.8ರಂದು ಬಾಲಿವುಡ್ ಗಾಯಕ ರಾಪರ್ ಬಾದ್‌ಷಾ ಹಾಗೂ ತಂಡದವರ ಸಂಗೀತ ರಸಸಂಜೆ ಕಾರ್ಯಕ್ರಮವಿರಲಿದೆ. ಅ.9ರಂದು ಸಂಜೆ ಮ್ಯೂಸಿಕ್ ಮಾಂತ್ರಿಕ ಎ.ಆರ್.ರೆಹಮಾನ್ ಹಾಗೂ ತಂಡದಿಂದ ಸಂಗೀತ ರಸಸಂಜೆ ಹಾಗೂ ಅ.10ರ ಗುರುವಾರ ಹಿರಿಯ ಸಂಗೀತ ನಿರ್ದೇಶಕ ಇಳಯ ರಾಜ ಅವರಿಂದ ಸಂಗೀತ ರಸಸಂಜೆ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಯುವ ದಸರಾಕ್ಕೆ ಭಾರೀ ಭದ್ರತೆ; ಕಲಾಪ್ರೇಮಿಗಳ ಸುರಕ್ಷತೆಗೂ ಆದ್ಯತೆ

● ಜಿಲ್ಲಾಧಿಕಾರಿ ಲಕ್ಷ್ಮೀಕಾಂತ್ ರೆಡ್ಡಿ ಭರವಸೆ ● ನಿತ್ಯವೂ 200 ರಿಂದ 250 ಬಸ್ ವ್ಯವಸ್ಥೆ

ಮೈಸೂರು,ಅ.4(ಎಂಟಿವೈ)– ದಸರಾ ಅಂಗವಾಗಿ ಮೈಸೂರಿನ ಹೊರವಲಯದ ಉತ್ತನಹಳ್ಳಿ ಬಳಿ ಆಯೋಜಿಸಿರುವ ಯುವ ದಸರಾ ಕಾರ್ಯಕ್ರಮ ವೀಕ್ಷಣೆಗೆ ಬರುವವರ ಸುರಕ್ಷತೆಗೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಸ್ಪಷ್ಟಪಡಿಸಿದ್ದಾರೆ.

ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬಾರಿ ಯುವ ದಸರಾ ಕಾರ್ಯಕ್ರಮದ ಸ್ಥಳ ಬದಲಾವಣೆಯಾಗಿದ್ದಕ್ಕೆ ಸಾಕಷ್ಟು ಪರ–ವಿರೋಧ ಚರ್ಚೆ ನಡೆಯುತ್ತಿದೆ. ಬರುವವರ ಸುರಕ್ಷತೆ–ಭದ್ರತೆ ಸಂಬಂಧಪಟ್ಟಂತೆ ಕೆಲವು ಊಹಾಪೋಹದ ಮಾತು ಕೇಳಿ ಬರುತ್ತಿದೆ. ಆದರೆ ವೀಕ್ಷಣೆಗೆ ಬರುವವರ ಸುರಕ್ಷತೆಗೂ ಹೆಚ್ಚಿನ ಒತ್ತು ನೀಡಲಾಗುತ್ತಿದೆ ಎಂದು ತಿಳಿಸಿದರು.

ವಾಹನ ನಿಲುಗಡೆಗೆ ವ್ಯವಸ್ಥೆ ಕಲ್ಪಿಸಲಾಗಿದೆ. ಅಲ್ಲದೆ, ಮೈಸೂರು ನಗರ ಬಸ್ ನಿಲ್ದಾಣ, ಗ್ರಾಮಾಂತರ ಬಸ್ ನಿಲ್ದಾಣದಿಂದ ಕಾರ್ಯಕ್ರಮದ ಸ್ಥಳಕ್ಕೆ ಪ್ರತಿದಿನ 200 ರಿಂದ 250 ಬಸ್ ವ್ಯವಸ್ಥೆ ಮಾಡಲು ನಿರ್ಧರಿಸಲಾಗಿದೆ. ಈ ಸಂಬಂಧ ಸಾರಿಗೆ ಸಂಸ್ಥೆಯ ಅಧಿಕಾರಿಗಳೊಂದಿಗೆ ಚರ್ಚಿಸಿ, ಬಸ್‌ಗಳ ವೇಳಾಪಟ್ಟಿ ಹಾಗೂ ನಿಲುಗಡೆ ಸ್ಥಳದ ಬಗ್ಗೆ ಮಾಹಿತಿ ನೀಡುವುದಾಗಿ ಸ್ಪಷ್ಟಪಡಿಸಿದರು.

ಯುವ ದಸರಾಗೆ ಪಾಸ್ ಇಲ್ಲ: 95 ಸಾವಿರ ಜನ ಉಚಿತವಾಗಿ ವೀಕ್ಷಿಸಬಹುದು

ಉತ್ತನಹಳ್ಳಿ ಬಳಿ ನಡೆಯುವ ಯುವ ದಸರಾ ಕಾರ್ಯಕ್ರಮಕ್ಕೆ ಪ್ರತಿದಿನ ಸುಮಾರು ಒಂದು ಲಕ್ಷ ಜನ ಬರುವ ನಿರೀಕ್ಷೆಯಿದೆ. ಕಾರ್ಯಕ್ರಮದ ವೇದಿಕೆ ಮುಂಭಾಗ ಟಿಕೆಟ್ ಪಡೆದವರಿಗಾಗಿ 5 ಸಾವಿರ ಆಸನದ ವ್ಯವಸ್ಥೆ ಮಾಡಲಾಗಿದೆ. ಅದನ್ನು ಹೊರತುಪಡಿಸಿದರೆ ಯುವ ದಸರಾ ಕಾರ್ಯಕ್ರಮ ವೀಕ್ಷಣೆಗೆ ಯಾವುದೇ ಪಾಸ್ ವ್ಯವಸ್ಥೆ ಇಲ್ಲ. ಮೊದಲು ಬಂದವರಿಗೆ ಆದ್ಯತೆ. ಸುಮಾರು 90ರಿಂದ 95 ಸಾವಿರ ಮಂದಿ ಕಾರ್ಯಕ್ರಮವನ್ನು ಉಚಿತವಾಗಿ ವೀಕ್ಷಿಸಬಹುದಾಗಿದೆ. ಅದಕ್ಕಾಗಿ ಆಸನ, ವಿದ್ಯುತ್ ದೀಪ ಸೇರಿದಂತೆ ಅಗತ್ಯ ವ್ಯವಸ್ಥೆ ಮಾಡಲಾಗಿದೆ.

-ಜಿ. ಲಕ್ಷ್ಮೀಕಾಂತರೆಡ್ಡಿ, ಜಿಲ್ಲಾಧಿಕಾರಿ

ಮಹಿಳಾ ಮತ್ತು ಮಕ್ಕಳ ದಸರಾಕ್ಕೆ ಚಾಲನೆ

ಮಹಿಳೆಯರು ಮೂಢನಂಬಿಕೆ ಬಿಡಿ; ವೈಚಾರಿಕ ಮನೋಭಾವ ಬೆಳೆಸಿಕೊಳ್ಳಿ

ಮಹಿಳೆಯರಿಗೆ ಸಚಿವ ಎಚ್.ಸಿ.ಮಹದೇವಪ್ಪ ಕಿವಿಮಾತು



ಮೈಸೂರಿನ ಜೆ.ಕೆ.ಮೈದಾನದಲ್ಲಿ ನಡೆದ ಮಹಿಳಾ ದಸರಾವನ್ನು ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟಿಸಿದರು.



ಮಹಿಳಾ ದಸರಾದಲ್ಲಿ ಮಹಿಳಾ ಸಂಘಗಳು ತಯಾರಿಸಿರುವ ವಸ್ತುಗಳ ಮಾರಾಟ ಮೇಳವನ್ನು ಸಚಿವ ಡಾ.ಹೆಚ್.ಸಿ.ಮಹದೇವಪ್ಪ ವೀಕ್ಷಿಸುತ್ತಿರುವುದು.

ಮೈಸೂರು,ಅ.4– ಜಗತ್ತಿನಲ್ಲಿ ಅತೀ ಹೆಚ್ಚು ಮೂಢನಂಬಿಕೆಗೆ ಒಳಗಾಗುತ್ತಿರುವವರೇ ಹೆಣ್ಣು ಮಕ್ಕಳು. ಮಹಿಳೆಯರು ಮೂಢನಂಬಿಕೆಗೆ ಒಳಗಾಗದೆ ವೈಜ್ಞಾನಿಕ ಮನೋಭಾವವನ್ನು ಬೆಳೆಸಿಕೊಳ್ಳಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಮಹಿಳೆಯರಿಗೆ ಸಲಹೆ ನೀಡಿದರು.

ಇಂದು ನಾಡಹಬ್ಬ ದಸರಾ ಅಂಗವಾಗಿ ಮಹಿಳಾ ಮತ್ತು ಮಕ್ಕಳ ದಸರಾ ಉಪಸಮಿತಿ ವತಿಯಿಂದ ನಗರದ ಜೆ.ಕೆ ಗ್ರೌಂಡ್‌ನಲ್ಲಿ ಆಯೋಜಿಸಲಾಗಿದ್ದ, ಮಹಿಳಾ ದಸರಾವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇಂದು ಸಾವಿರಾರು ಸಂಖ್ಯೆಯಲ್ಲಿ ಮಹಿಳೆಯರು ಆಗಮಿಸಿ ಮಹಿಳಾ ಹಬ್ಬಕ್ಕೆ ಕಳೆ ತಂದಿರುವುದು ಸಂತಸವಾಗಿದೆ. ಮಹಿಳೆಯರು ಯಾರ ಮೇಲೂ ಅವಲಂಬಿತರಾಗದೆ ಸರ್ಕಾರದ ಯೋಜನೆಗಳು ಹಾಗೂ ಕಡ್ಡಾಯ ಶಿಕ್ಷಣದ ಮೂಲಕ ಸ್ವಾವಲಂಬಿಯಾಗಿ ಬದುಕು ನಡೆಸುವಲ್ಲಿ ಸಫಲರಾಗಬೇಕು ಎಂದರು.

ಸ್ವಾವಲಂಬನೆ ಜೀವನ ನಡೆಸುವ ಅನೇಕ ಮಹಿಳೆಯರು ಇಂದು ಕರಕುಶಲ ಪ್ರದರ್ಶನ ಮತ್ತು ಅಳಿವಿನ ಅಂಚಿನಲ್ಲಿರುವ ಗುಡಿ ಕೈಗಾರಿಕೆಗಳ ಉಳಿಸುವ ಕೆಲಸವನ್ನು ಮಾಡುತ್ತಿದ್ದಾರೆ. ಅಂತಹವರ ಜೀವನ ಸುಖಕರವಾಗಿ ಸಾಗಬೇಕು. ಮೂಢನಂಬಿಕೆಯನ್ನು ಅನುಸರಿಸುವಲ್ಲಿ ಮಹಿಳೆಯರೇ ಹೆಚ್ಚಾಗಿರುವುದರಿಂದ ಇಂದು ಮೂಢನಂಬಿಕೆಯ ಹೆಸರಿನಲ್ಲಿ ಎಷ್ಟೋ ಹೆಣ್ಣುಮಕ್ಕಳು ಶೋಷಣೆಗೆ ಒಳಗಾಗುತ್ತಿದ್ದಾರೆ. ಇದರಿಂದ ಹೊರಬರಲು ಮೊದಲು ಸುಶಿಕ್ಷಿತರಾಗಿ ವೈಜ್ಞಾನಿಕವಾಗಿ ಚಿಂತನೆ ನಡೆಸಬೇಕು ಎಂದು ತಿಳಿಸಿದರು.

ಮೂಢನಂಬಿಕೆಗೆ ಹೆಣ್ಣುಮಕ್ಕಳು ಬಲಿಯಾಗಬಾರದೆಂದರೆ ಸಂವಿಧಾನ ಶಿಲ್ಪಿ ಅಂಬೇಡ್ಕರ್ ಅವರ ಸಂವಿಧಾನವನ್ನು ತಿಳಿದುಕೊಳ್ಳಬೇಕು. ಮಹಿಳೆಯರು ಮಾಟ–ಮಂತ್ರ, ಯಂತ್ರ–ತಂತ್ರ, ಶಾಸ್ತ್ರಗಳ ಮೊರೆ ಹೋಗುವುದನ್ನು ಬಿಟ್ಟು, ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ, ಶೈಕ್ಷಣಿಕವಾಗಿ ಮುಂದೆ ಬಂದು ಸ್ವಾವಲಂಬನೆ ಜೀವನ ನಡೆಸಬೇಕು ಎಂದರು.

ಮಹಿಳೆಯರ ಶಿಕ್ಷಣಕ್ಕಾಗಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಅನೇಕ ಕೆಲಸಗಳನ್ನು ಮಾಡಿದ್ದಾರೆ. 17ನೇ ಶತಮಾನದಲ್ಲಿ ಬಸವಣ್ಣನವರು ಲಿಂಗ ತಾರತಮ್ಯದ ವಿರುದ್ಧ ಹೋರಾಡಿ ಸ್ವಂತ ಮನೆ ಬಿಟ್ಟು ಹೊರ ನಡೆದ ರೀತಿಯಾಗಿ ಮಹಿಳೆಯರ ಸಮಾನತೆಗಾಗಿ ತಮ್ಮ ಕಾನೂನು ಮಂತ್ರಿ ಪದವಿಯನ್ನೇ ತ್ಯಾಗ ಮಾಡಿದ ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ಈ ಸಮಯದಲ್ಲಿ ನೆನೆಯಬೇಕು ಎಂದರು.

ಈ ಸಂದರ್ಭದಲ್ಲಿ ವಸ್ತು ಪ್ರದರ್ಶನ ಮಾರಾಟ ಮಳಿಗೆಗಳಿಗೆ ಭೇಟಿ ನೀಡಿ ಮಹಿಳೆಯರಿಗೆ ಶುಭಾಶಯ ತಿಳಿಸಿದರು.

ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಉಪಾಧ್ಯಕ್ಷೆ ಡಾ. ಪುಷ್ಪ ಅಮರ್‌ನಾಥ್ ಮಾತನಾಡಿ, ಕರ್ನಾಟಕದಲ್ಲಿ ಮಹಿಳೆಯರಿಗೆ ವಿಶೇಷವಾದ ಶಕ್ತಿಯಿದ್ದು, ಈ ಬಾರಿ ಸುಭದ್ರ ಸರ್ಕಾರದಲ್ಲಿ ನವರಾತ್ರಿಯನ್ನು ಆಚರಿಸುತ್ತಿದ್ದೇವೆ. ಮಹಿಳೆ ಮನಸ್ಸು ಮಾಡಿದರೆ ಏನನ್ನಾದರೂ ಸಾಧಿಸಬಹುದು. ಇಂದು ನಾನಾ ಕ್ಷೇತ್ರದಲ್ಲಿ ಮಹಿಳಾ ಮಣಿಗಳು ಕಾರ್ಯ ನಿರ್ವಹಿಸುತ್ತಿರುವುದನ್ನು ನೋಡಬಹುದು. ನಮ್ಮ ಸರ್ಕಾರ ಮಹಿಳೆಯರ ಏಳಿಗೆಯನ್ನು ಬಯಸುವ ಸರ್ಕಾರವಾಗಿದ್ದು, ಈ ದೃಷ್ಟಿಯಲ್ಲಿ ಪಂಚ ಗ್ಯಾರಂಟಿಗಳನ್ನು ಜಾರಿಗೆ ತಂದಿರುವ ಮೂಲಕ ಮಹಿಳೆಯರ ಸ್ವಾವಲಂಬನೆ ಜೀವನಕ್ಕೆ ದಾರಿ ತೋರಿಸಿದೆ ಎಂದರು.

ಇಂದು ನಾರಿಶಕ್ತಿ ಗಂಡಿಗಿಂತಲೂ ಒಂದು ಹೆಜ್ಜೆ ಮುಂದೆ ಇದ್ದಾರೆ. ಮೊದಲು ಮನುಷ್ಯ ನಂತರ ಧರ್ಮ. ಧರ್ಮದ ಹೆಸರಿನಲ್ಲಿ ಮಹಿಳೆಯರು ಮೂಢನಂಬಿಕೆಗೆ ಒಳಗಾಗಬಾರದು. ಕುಟುಂಬ ಮತ್ತು ಸಮಾಜವನ್ನು ಸರಿ ದಾರಿಯಲ್ಲಿ ಸಾಮಾಜಿಕ ಅಂಶಗಳಾದ ಆರ್ಥಿಕ, ಶೈಕ್ಷಣಿಕ ಆರೋಗ್ಯ ಎಲ್ಲಾ ಕ್ಷೇತ್ರಗಳಲ್ಲಿ ಮಹಿಳೆಯರು ಮುಂದೆ ಬಂದು ಸರ್ವತೋಮುಖ ಅಭಿವೃದ್ಧಿಯತ್ತ ಮುಖ ಮಾಡಬೇಕು ಎಂದರು.

ರಾಜ್ಯ ಮಹಿಳಾ ಅಯೋಗದ ಅಧ್ಯಕ್ಷರಾದ ಡಾ. ನಾಗಲಕ್ಷ್ಮಿ ಚೌಧರಿ ಅವರು ಮಾತನಾಡಿ, ಮೌಢ್ಯ ಅಂಧಕಾರವನ್ನು ತೊಲಗಿಸುವಲ್ಲಿ ಮಹಿಳೆಯರು ಬದಲಾಗಬೇಕು. ಅಂಬೇಡ್ಕರ್ ಅವರ ಆಶಯದಂತೆ ಮಹಿಳೆಯರು ಶಿಕ್ಷಣ, ಸಂಘಟನೆ ಹೋರಾಟದ ಮಂತ್ರಗಳನ್ನು ಮೈ ಗೂಡಿಸಿಕೊಳ್ಳಬೇಕು. ಮಹಿಳೆಯರಿಗೆ ಶಿಕ್ಷಣದ ಅವಶ್ಯಕತೆ ಇದೆ. ನಮ್ಮ ಹಕ್ಕುಗಳನ್ನು ನಾವು ಪಡೆದು ಕೊಳ್ಳಬೇಕು. ಹೆಣ್ಣಿನ ಸ್ವರೂಪವೇ ದಸರಾ. ಹೆಣ್ಣು ಅಂದರೆ ಶಕ್ತಿ, ಶಾಂತಿ, ನೆಮ್ಮದಿ, ಸಹನಾ ಶೀಲತೆ, ಸಮೃದ್ಧಿಯ ಪ್ರತಿರೂಪ ಎಂದರು.

ಈ ಬಾರಿ ವಿಶೇಷವಾಗಿ ಮೇಳದಲ್ಲಿ ಚಾಮುಂಡೇಶ್ವರಿ ಒಕ್ಕೂಟ, ಸಿರಿಧಾನ್ಯ ಮಾರಾಟ ಕೇಂದ್ರ, ಕೊಲ್ಲಾಪುರದಮ್ಮ ಸ್ತ್ರೀಶಕ್ತಿ ಸ್ವಹಾಯ ಸಂಘ, ಅನ್ನಪೂರ್ಣೇಶ್ವರಿ ಸ್ತ್ರೀಶಕ್ತಿ ಕೇಂದ್ರ ಸೇರಿದಂತೆ 30ಕ್ಕೂ ಹೆಚ್ಚು ಮಳಿಗೆಗಳು ತಲೆ ಎತ್ತಿದ್ದವು. ಸೀರೆ ಮಾರಾಟ, ಮಹಿಳಾ ಆಭರಣಗಳು, ಚುರುಮುರಿ, ತಿಂಡಿತಿನಿಸುಗಳು, ಬಟ್ಟೆ, ಹೊಸ ಪ್ರಾಡೆಕ್ಟ್, ಪೇಂಟಿಂಗ್ಸ್ ಸೇರಿದಂತೆ ಸ್ತ್ರೀ ಸ್ವಾವಲಂಬನೆ ಸಾರುವ ಮಳಿಗೆಗಳನ್ನು ಸ್ಥಾಪಿಸಲಾಗಿದೆ. ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ದಸರಾ ಉಪಸಮಿತಿಯ ವಿಶೇಷಾಧಿಕಾರಿಗಳಾದ ಪ್ರಿಯದರ್ಶಿನಿ, ಉಪಾಧ್ಯಕ್ಷರು, ಕಾರ್ಯದರ್ಶಿಗಳು, ಸಮಿತಿಯ ಸದಸ್ಯರು ಸೇರಿದಂತೆ ಅನೇಕ ಮಹಿಳೆಯರು ಉಪಸ್ಥಿತರಿದ್ದರು.

ದಸರಾ ಕ್ರೀಡಾಕೂಟದ ನಾನಾ ವಿಭಾಗದಲ್ಲಿ ಗೆಲುವಿಗೆ ಸೆಣಸಾಟ

ಡಿಸ್ಕಸ್ ಥ್ರೋನಲ್ಲಿ ಮೈಸೂರಿನ ಮಹಮ್ಮದ್ ಸಕ್ಲೈನ್ ಅಹ್ಮದ್, ಮೋಹಿತ್ ಎನ್ ರಾಜ್‌ಗೆ ಪದಕ



ಮೈಸೂರು, ಅ.4(ಎಂಕೆ)– ದಸರಾ ಕ್ರೀಡಾಕೂಟದಲ್ಲಿ ಪದಕ ಪೈಪೋಟಿ ನಡೆಸಿರುವ ಕ್ರೀಡಾಪಟುಗಳು ವಿವಿಧ ವೈಯಕ್ತಿಕ ಕ್ರೀಡೆಗಳಲ್ಲಿ ಗೆಲುವು ದಾಖಲಿಸಿದ್ದಾರೆ.

ಪುರುಷರ ವಿಭಾಗದ ಫ್ರೀಸ್ಟೈಲ್–400 ಮೀಟರ್ ಈಜು ಸ್ಪರ್ಧೆಯಲ್ಲಿ ಬೆಂಗಳೂರಿನ ದರ್ಶನ್ ಚಿನ್ನ, ವಿ.ಧ್ರುವ ಬೆಳ್ಳಿ, ಬೆಳಗಾವಿಯ ಸ್ಮರಣ್ ಸುಜಿತ್ ಮಂಗಳೂರಕರ್ ಕಂಚು ಜಯಿಸಿದರೆ, ಮಹಿಳಾ ವಿಭಾಗದಲ್ಲಿ ಬೆಂಗಳೂರಿನ ಶಾಮನ್ವಿ ಹೆಚ್.ಗೌಡ ಚಿನ್ನ, ವಿ.ಪ್ರೀತಾ ಬೆಳ್ಳಿ, ಚಿಕ್ಕಬಳ್ಳಾಪುರದ ಲಿಪಿಕಾ ದೇವ್ ಕಂಚಿನ ಪದಕ ಜಯಿಸಿದರು.

ಪುರುಷರ ವಿಭಾಗದ ಬ್ರೆಸ್ಟ್ ಸ್ಟ್ರೋಕ್– 100 ಮೀಟರ್ ಈಜು ಸ್ಪರ್ಧೆಯಲ್ಲಿ ದಾವಣಗೆರೆಯ ಎಲ್.ಮಣಿಕಂಠ ಚಿನ್ನ, ಬೆಳಗಾವಿಯ ಸ್ಮರಣ್ ಸುಜಿತ್ ಮಂಗಳೂರುಕರ್ ಬೆಳ್ಳಿ, ಹಾಸನದ ಎಚ್.ಕೆ.ರಥನ್ ಗೌಡ ಕಂಚು ಗೆದ್ದರೆ, ಮಹಿಳಾ ವಿಭಾಗದಲ್ಲಿ ಬೆಂಗಳೂರಿನ ವಿ.ಹಿತಾಶಿ ಚಿನ್ನ, ಎಂ.ವಿ.ರಿಷಿಕಾ ಬೆಳ್ಳಿ ಹಾಗೂ ಬೆಳಗಾವಿ ಸಮಿಯಾ ಮೆನ್ಸೆ ಕಂಚು ಗೆದ್ದರು.

ಪುರುಷರ ವಿಭಾಗದ ಬ್ಯಾಕ್ ಸ್ಟ್ರೋಕ್– 200 ಮೀಟರ್ ಈಜು ಸ್ಪರ್ಧೆಯಲ್ಲಿ ಬೆಳಗಾವಿಯ ಧವಲ್ ಡಿ. ಹನಮನ್ನವರ್ ಚಿನ್ನ, ದಕ್ಷಿಣ ಕನ್ನಡದ ವಾಫಿ ಅಬ್ದುಲ್ ಹಕೀಮ್ ಬೆಳ್ಳಿ, ದಾವಣಗೆರೆಯ ಎಲ್.ಮಣಿಕಂಠ ಕಂಚು ಗೆದ್ದರೆ, ಮಹಿಳಾ ವಿಭಾಗದಲ್ಲಿ ಮಹಿಳಾ ಚಿನ್ನ ಬೆಂಗಳೂರಿನ ನೈಶಾ ಶೆಟ್ಟಿ ಚಿನ್ನ, ವಿ.ಪ್ರೀತಾ ಬೆಳ್ಳಿ, ಬೆಳಗಾವಿಯ ವೈಶಾಲಿ ಸಂಜಯ್ ಇಕಂಚು ಗೆದ್ದರು.

ಪುರುಷರ ವಿಭಾಗದ ಬಟರ್‌ಫ್ಲೈ–100 ಮೀಟರ್ ಈಜು ಸ್ಪರ್ಧೆಯಲ್ಲಿ ಎಲ್. ಮಣಿಕಂಠ ಚಿನ್ನ, ದರ್ಶನ್ ಬೆಳ್ಳಿ, ಸ್ವಯಂ ಅಮಿತ್ ಕಾರೇಕರ್ ಕಂಚು ಜಯಿಸಿದರೆ, ಮಹಿಳಾ ವಿಭಾಗದಲ್ಲಿ ಬೆಂಗಳೂರಿನ ನೈಶಾ ಶೆಟ್ಟಿ ಚಿನ್ನ, ವಿ.ಹಿತಾಶಿ ಬೆಳ್ಳಿ, ಚಿಕ್ಕಬಳ್ಳಾಪುರದ ಲಿಪಿಕಾ ದೇವ್ ಕಂಚಿನ ಪದಕ ಜಯಿಸಿದರು.

ವೈಯಕ್ತಿಕ ಪದಕ ಪುರುಷ ವಿಭಾಗದ ಈಜು ಸ್ಪರ್ಧೆಯಲ್ಲಿ ದಾವಣಗೆರೆ ಎಲ್. ಮಣಿಕಂಠ ಚಿನ್ನ, ಬೆಂಗಳೂರಿನ ಎನ್. ಧೋನೀಶ್ ಬೆಳ್ಳಿ, ಬೆಳಗಾವಿಯ ಸ್ಮರಣ್ ಸುಜಿತ್ ಮಂಗಳೂರಕರ್ ಕಂಚು ಗೆದ್ದರೆ, ಮಹಿಳಾ ವಿಭಾಗದಲ್ಲಿ ಬೆಂಗಳೂರಿನ ವಿ.ಹಿತಾಶಿ, ಚಿಕ್ಕಬಳ್ಳಾಪುರದ ಲಿಪಿಕಾ ದೇವ್ ಬೆಳ್ಳೀ ಹಾಗೂ ಧಾರವಾಡದ ಸಾಕ್ಷಿ ಸಂಗಮೇಶ ಶಿರಳ್ಳಿ ಕಂಚಿನ ಪದಕ ತಮ್ಮದಾಗಿಸಿಕೊಂಡರು. ದಾವಣಗೆರೆಯ ಎಲ್.ಮಣಿಕಂಠ ಮೂರು ವಿಭಾಗದಲ್ಲಿ ಚಿನ್ನ ಗೆಲ್ಲುವ ಮೂಲಕ ಗಮನ ಸೆಳೆದರು.

ಪುರುಷರ ವಿಭಾಗದ 100 ಮೀಟರ್ ಓಟದಲ್ಲಿ ಬೆಂಗಳೂರಿನ ಗಗನ್ ಎಲ್. ಗೌಡ ಚಿನ್ನ, ಶಿವಮೊಗ್ಗ ಎಂ.ಗೌತಮ್ ಬೆಳ್ಳಿ, ಮೈಸೂರಿನ ಎಂ.ಮಂಜು ಕಂಚು ಗೆದ್ದರೆ, **400 ಮೀಟರ್ ಓಟದಲ್ಲಿ** ಬೆಂಗಳೂರಿನ ತುಷಾರ್ ಭೇಕನೆ ಚಿನ್ನ, ದಕ್ಷಿಣ ಕನ್ನಡದ ದಯಾನಂದ ಹನಮಂತ್ ಬೆಳ್ಳಿ, ಬೆಂಗಳೂರು ಗ್ರಾಮಾಂತರದ ಎಂ.ನಿತಿನ್‌ಗೌಡ ಕಂಚು ಗೆದ್ದರು. **1500 ಮೀಟರ್ ಓಟದಲ್ಲಿ** ಶಿವಮೊಗ್ಗದ ಎಂ. ಎಸ್.ಆಶ್ರಿತ್ ಚಿನ್ನ, ಬೆಂಗಳೂರಿನ ಜಿಆರ್. ಕಲ್ಯಾಣ್, ರಾಮನಗರದ ಇ.ಸುದೀಪ್ ಕಂಚಿನ ಪದಕ ಗೆದ್ದರು.

ಎತ್ತರ ಜಿಗಿತ: ಬೆಂಗಳೂರಿನ ಬಿ.ಚೇತನ್ ಚಿನ್ನ, ದಕ್ಷಿಣ ಕನ್ನಡದ ಭವಿತ್ ಕುಮಾರ್ ಬೆಳ್ಳಿ, ಉಡುಪಿಯ ಸಿನಾನ್ ಕಂಚು ಜಯಿಸಿದರೆ, **ಟ್ರಿಪಲ್ ಜಂಪ್‌ನಲ್ಲಿ:** ಬೆಳಗಾವಿಯ ಜಫರ್ಖಾನ್ ಎಂ ಸರ್ವರ್ ಚಿನ್ನ, ಮಂಡ್ಯದ ಆರ್.ಯಶಸ್ ಬೆಳ್ಳಿ, ಕೊಡಗಿನ ಎಸ್.ಪುನೀತ್ ಕಂಚು ಜಯಿಸಿದರು. **ಡಿಸ್ಕಸ್ ಥ್ರೋನಲ್ಲಿ:** ಮೈಸೂರಿನ ಮಹಮ್ಮದ್ ಸಕ್ಲೈನ್ ಅಹ್ಮದ್ ಚಿನ್ನ, ಮೋಹಿತ್ ಎನ್ ರಾಜ್ ಬೆಳ್ಳಿ, ವಿಜಯಪುರದ ಪ್ರೀತಮ್ ರಾಜ್‌ಪುತ್ ಕಂಚಿನ ಪದಕ ಗೆದ್ದರೆ, **ಜಾವೆಲಿನ್ ಥ್ರೋನಲ್ಲಿ:** ಬೆಳಗಾವಿಯ ಶಶಾಂಕ್ ಜಿ ಪಾಟೀಲ್ ಚಿನ್ನ, ಬೆಂಗಳೂರಿನ ಶಾರುಖ್ ತಾರಿಹಾಳ್ ಬೆಳ್ಳಿ ಉಡುಪಿಯ ಸಿದ್ದಪ್ಪ ದಂಡಿನ ಕಂಚಿಗೆ ಮುತ್ತಿಕ್ಕಿದರು. ಹಾಗೆಯೇ ಮಹಿಳಾ ವಿಭಾಗದ ಅಥ್ಲೆಟಿಕ್ ಕ್ರೀಡೆಗಳು ನಡೆದವು.

ಅ.8, ಮೈಸೂರಲ್ಲಿ ರಾಜ್ಯ ಮಟ್ಟದ ದಸರಾ ಕರಾಟೆ ಪಂದ್ಯಾವಳಿ

ದಸರಾ ಕರಾಟೆಗೆ ಬಿಡುಗಡೆಯಾಗದ ಅನುದಾನ, ಸಂಸ್ಥೆ ವತಿಯಿಂದಲೇ ನಡೆಸಲು ತೀರ್ಮಾನ



ಮೈಸೂರು, ಅ.4(ಜಿಎ)–ಮೈಸೂರು ಕರಾಟೆ ಅಸೋಸಿಯೇಷನ್ ವತಿಯಿಂದ ಅ.8ರಂದು ಮೈಸೂರು ವಿವಿಯ ಯುವರಾಜ ಕಾಲೇಜು ಒಳಾಂಗಣ ಕ್ರೀಡಾಂಗಣದಲ್ಲಿ 14ನೇ ರಾಜ್ಯ ಮಟ್ಟದ ದಸರಾ ಕರಾಟೆ ಪಂದ್ಯಾವಳಿಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಕರಾಟೆ ಅಸೋಸಿಯೇಷನ್ ಖಜಾಂಚಿ ಸೋಸಲೆ ಸಿದ್ದರಾಜು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ಕರಾಟೆ ಅಸೋಸಿಯೇಷನ್ ಸಂಸ್ಥೆಯು ದಸರಾ ಕ್ರೀಡಾ ಸಮಿತಿಯ ವತಿಯಿಂದ ನಡೆಯುವ ದಸರಾ ಕ್ರೀಡೆಯಲ್ಲಿ 14 ವರ್ಷಗಳಿಂದ ಜಿಲ್ಲಾ , ವಿಭಾಗ ಮತ್ತು ರಾಜ್ಯಮಟ್ಟದ ಪಂದ್ಯಾವಳಿಯನ್ನು ನಡೆಸುತ್ತಾ ಬಂದಿದೆ.

ಈ ವರ್ಷವೂ ಕರಾಟೆ ಪಂದ್ಯಾವಳಿಯನ್ನು ನಡೆಸಲು 1 ತಿಂಗಳಿಂದ ಹಿಂದೆಯೇ ಸಹಾಯಕ ನಿರ್ದೇಶಕರಿಗೆ ಮನವಿ ಕೊಟ್ಟಿದ್ದೇವೆ. ಆದರೆ ಸಹಾಯಕ ನಿರ್ದೇಶಕರು ಯಾವುದೇ ಅನುದಾನ ಬಿಡುಗಡೆ ಮಾಡದೆ ನಮ್ಮ ಬಳಿ ಹಣ ಇಲ್ಲ ಎಂದು ಹೇಳುತ್ತಾರೆ. ಇದರಿಂದ ನಮಗೆ ಬೇಸರವಾಗಿದೆ. ಈ ಹಿನ್ನೆಲೆಯಲ್ಲಿ ಮೈಸೂರು ಕರಾಟೆ ಅಸೋಸಿಯೇಷನ್ ವತಿಯಿಂದಲೇ ದಸರಾ ಕರಾಟೆ ಪಂದ್ಯಾವಳಿ ಆಯೋಜಿಸಲಾಗುತ್ತಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಕರಾಟೆ ಅಸೋಸಿಯೇಷನ್ ಅಧ್ಯಕ್ಷ ಎನ್.ಜಿ.ಶಿವದಾಸ್ ಪೈ, ಉಪಾಧ್ಯಕ್ಷ ಎನ್.ಶಂಕರ್, ಕಾರ್ಯದರ್ಶಿ ದೀಪಕ್ ಕುಮಾರ್, ಸಹ ಕಾರ್ಯದರ್ಶಿ ಮಹದೇವಸ್ವಾಮಿ, ನಿರ್ದೇಶಕರಾದ ಭಾರತಿ ಆನಂದ್, ಸದಾನಂದ ಉಪಸ್ಥಿತರಿದ್ದರು.

ಮನಮೋಹಕ ನೃತ್ಯರೂಪಕದ ಸೊಗಸಿಗೆ ಮನಸೋತ ಪ್ರೇಕ್ಷಕರು

● ದುರ್ಗೆಯ ಒಂಭತ್ತು ಅವತಾರಗಳ ಅನಾವರಣ ● ಬಿವಿಬಿ ಕಲಾಭಾರತೀ ವಿಭಾಗದಿಂದ ಶಾಸ್ತ್ರೀಯ ಸಂಗೀತದ ಹೊನಲು ● ಜನಪದ ಗೀತೆಯ ಘಮಲು





ಅರಮನೆ ವೇದಿಕೆಯಲ್ಲಿ ಶುಕ್ರವಾರ ಕನ್ನಡ ಕಲಾಲಯ ಟ್ರಸ್ಟ್‌ನ ಕಲಾವಿದರಿಂದ ನಡೆದ ನವದುರ್ಗಾ ವೈಭವ ನೃತ್ಯರೂಪಕ ದೃಶ್ಯ.



ಅರಮನೆ ವೇದಿಕೆಯಲ್ಲಿ ಶುಕ್ರವಾರ ಮೈಸೂರಿನ ಬಿವಿಬಿ ಕಲಾಭಾರತೀ ವಿಭಾಗದ ವಿದುಷಿ ಜಯಶ್ರೀ ಜನಗದೀಶ್, ವಿದುಷಿ ಸುಮಾ ಹರಿನಾಥ್ ಮತ್ತು ವಿದುಷಿ ಶ್ರೀರಂಜಿನಿಸಿಂಹ ಅವರು ಶಾಸ್ತ್ರೀಯ ಗಾಯನ ಕಾರ್ಯಕ್ರಮ ನಡೆಸಿಕೊಟ್ಟರು.

ಮೈಸೂರು,ಅ.4(ಪಿಎಂ)– ನೃತ್ಯರೂಪಕದಲ್ಲಿ ನವದುರ್ಗಾ ವೈಭವವು ಮೂಡಿಬಂದು ಮಹಿಷಾಸುರನ ಸಂಹಾರದ ದೃಶ್ಯಕಾವ್ಯ ಅನಾವರಣಗೊಳಿಸಿತು. ಇಂತಹ ಮನಮೋಹಕ ನೃತ್ಯರೂಪಕದ ಸೊಗಸಿಗೆ ಪ್ರೇಕ್ಷಕರು ಮನಸೋತರು. ಅಲ್ಲದೆ, ಕರ್ನಾಟಕ ಶಾಸ್ತ್ರೀಯ ಸಂಗೀತ, ನಾದಸ್ವರ, ತತ್ವಪದ, ಜನಪದ ಗಾಯನ ಸೇರಿದಂತೆ ವಿವಿಧ ಕಲಾಪ್ರಕಾರಗಳು ಸಭಿಕರು ತಲೆದೂಗುವಂತೆ ಮಾಡಿದವು.

ದಸರಾ ಮಹೋತ್ಸವ ಪ್ರಯುಕ್ತ ಸಾಂಸ್ಕೃತಿಕ ಉಪಸಮಿತಿ ವತಿಯಿಂದ ಅರಮನೆ ವೇದಿಕೆಯಲ್ಲಿ ಹಮ್ಮಿಕೊಂಡಿರುವ ಸಾಂಸ್ಕೃತಿಕ ಕಾರ್ಯಕ್ರಮ ಅಂಗವಾಗಿ ಎರಡನೇ ದಿನವಾದ ಶುಕ್ರವಾರ ಸಂಜೆ ಇಂತಹ ನೃತ್ಯ, ಸಂಗೀತದ ಕಲಾತ್ಮಕ ಲೋಕ ನೆರೆದವರ ಮನಸೂರೆಗೊಂಡಿತು.

ದುಷ್ಟ ಸಂಹಾರಕ್ಕಾಗಿ ಆದಿಶಕ್ತಿಯು ನವರೂಪಗಳ ತಾಳಿ ಮಹಿಷಾಸುರನನ್ನು ಸಂಹರಿಸುವ ದೃಶ್ಯಾವಳಿಯನ್ನು ಕನ್ನಡ ಕಲಾಲಯ ಟ್ರಸ್ಟ್‌ನ ಕಲಾವಿದರು ನೃತ್ಯರೂಪಕದಲ್ಲಿ ಅನಾವರಣಗೊಳಿಸಿ ಸಭಿಕರಿಂದ ಅಭಿಮಾನದ ಚಪ್ಪಾಳೆ ಗಿಟ್ಟಿಸಿದರು. ನವದುರ್ಗೆಯರನ್ನು ಸ್ತುತಿಸುವ ಸಂಸ್ಕೃತ ಶ್ಲೋಕಗಳನ್ನು ಒಳಗೊಂಡ ಕನ್ನಡ ಗಾಯನ, ಸಂಗೀತಕ್ಕೆ ಹೆಜ್ಜೆ ಹಾಕಿದ ಕಲಾವಿದರ ಕಲಾಕೌಶಲ್ಯಕ್ಕೆ ಸಭಿಕರು ಬೆರಗಾಗಿ ಚಪ್ಪಾಳೆಯ ಮಳೆ ಸುರಿಸಿದರು.

ದುರ್ಗೆಯ ಒಂಭತ್ತು ಅವತಾರಗಳ ವೇಷಭೂಷಣದಲ್ಲಿ ಕಲಾವಿದರಿಂದ ನೃತ್ಯ ಮೂಡಿಬರುತ್ತಿದ್ದರೆ ಪ್ರೇಕ್ಷಕರು ಕೌತುಕದ ಕಣ್ಣುಗಳಿಂದ ನೋಡಿ ಸಂಭ್ರಮಿಸಿದರು. ಶೈಲಪುತ್ರಿ, ಬ್ರಹ್ಮಚಾರಿಣಿ, ಚಂದ್ರಘಂಟ ದೇವಿ, ಕೂಷ್ಮಾಂಡ ದೇವಿ, ಸ್ಕಂದ ಮಾತೆ, ಕಾತ್ಯಾಯಿನಿ, ಕಾಳರಾತ್ರಿ, ಮಹಾಗೌರಿ, ಸಿದ್ಧಿಧಾತ್ರಿ ಒಳಗೊಂಡ 9 ಅವತಾರಗಳು ಅನಾವರಣಗೊಂಡವು. ನವದುರ್ಗೆಯರ ವೇಷಧಾರಿ ಕಲಾವಿದರೊಂದಿಗೆ ಸಹ ನೃತ್ಯ ಕಲಾವಿದರೂ ಹೆಜ್ಜೆ ಹಾಕಿ ದೃಶ್ಯಕಾವ್ಯವನ್ನೇ ಮೂಡಿಸಿದರು.

ನವದುರ್ಗೆಯರ ಒಂದೊಂದೇ ಅವತಾರಗಳು ಪ್ರತ್ಯೇಕವಾಗಿ ಮೂಡಿಬಂದರೆ, ಕೊನೆಯಲ್ಲಿ ನವದುರ್ಗೆಯರು ಒಟ್ಟಾಗಿ ಪ್ರತ್ಯೇಕ್ಷವಾಗಿ ಮಹಿಷಾಶೂರನ ಸಂಹಾರದ ಮಾಡುವ ದೃಶ್ಯಾವಳಿ ಅನಾವರಣಗೊಂಡಿತು. ಈ ದೃಶ್ಯಾವಳಿಗೆ ಪ್ರೇಕ್ಷಕರಿಂದ ಚಪ್ಪಾಳೆ ಶಿಳ್ಳೆ ಮುಗಿಲು ಮುಟ್ಟುವಂತೆ ಕೇಳಿಬಂದವು. ಭರತನಾಟ್ಯ ಶೈಲಿಯ ಭಾವ–ಭಂಗಿ ಸೇರಿದಂತೆ ವಿವಿಧ ರೀತಿಯಲ್ಲಿ ನೃತ್ಯ ಪ್ರಸ್ತುತಪಡಿಸಿದ ಕಲಾವಿದರು ಶೋತೃಗಳನ್ನು ಸಡಗರಲ್ಲಿ ತೇಲಿಸಿದರು.

ಅಲ್ಲದೆ, ಇದಕ್ಕೂ ಮುನ್ನ ಈ ಹಿಂದೆ ಹಲವು ಬಾರಿ ಅಂಬಾರಿ ಹೊತ್ತು, ಕಳೆದ ವರ್ಷ ದುರಂತ ಸಾವಿಗೀಡಾದ ಅರ್ಜುನ ಆನೆಯ ಸ್ಮರಣೆಯ ನೃತ್ಯವನ್ನೂ ಇದೇ ಟ್ರಸ್ಟ್‌ನ ತಂಡ ಸಾದರಪಡಿಸಿತು. ಗಣಪತಿಯ 21 ಹೆಸರುಗಳನ್ನು ಒಳಗೊಂಡ ಗಾಯನಕ್ಕೆ ನೃತ್ಯ ಪ್ರಸ್ತುತಪಡಿಸಿ ಅರ್ಜುನ ಆನೆಗೆ ನೃತ್ಯ ಸಮರ್ಪಣೆ ಮಾಡಿದರು. ವಿದುಷಿ ಎಲ್.ಪ್ರಿಯಾಂಕಾ ನೇತೃತ್ವದಲ್ಲಿ ಸುಮಾರು 35ಕ್ಕೂ ಹೆಚ್ಚು ಕಲಾವಿದೆಯರು ನೃತ್ಯ ಸಾದರಪಡಿಸಿದರು.

ಬಿವಿಬಿ ಕಲಾಭಾರತೀ ವೃಂದದಿಂದ ಗಾಯನ: ಮೈಸೂರಿನ ಭಾರತೀಯ ವಿದ್ಯಾಭವನದ (ಬಿವಿಬಿ) ಕಲಾಭಾರತೀ ವಿಭಾಗದ ವೃಂದವು ಕರ್ನಾಟಕ ಶಾಸ್ತ್ರೀಯ ಸಂಗೀತ ಸಾದರಪಡಿಸಿ ಸಭಿಕರನ್ನು ಮಂತ್ರಮುಗ್ಧರನ್ನಾಗಿಸಿತು. ಕಲಾಭಾರತೀಯ ಸಂಗೀತ ಶಿಕ್ಷಕರಾದ ವಿದುಷಿ ಜಯಶ್ರೀ ಜನಗದೀಶ್, ವಿದುಷಿ ಸುಮಾ ಹರಿನಾಥ್ ಮತ್ತು ವಿದುಷಿ ಶ್ರೀರಂಜಿನಿಸಿಂಹ ಅವರ ಶಾಸ್ತ್ರೀಯ ಗಾಯನಕ್ಕೆ ಕೇಳುಗರು ತಲೆದೂಗಿದರು.

ಪುರಂದರ ದಾಸರ 'ಗಜವದನ ಬೇಡುವೆ ಗೌರೀತನಯ...' ಗೀತೆಯನ್ನು ಆದಿ ತಾಳ ಹಾಗೂ ಹಂಸಧ್ವನಿ ರಾಗದಲ್ಲಿ ಸುಶ್ರಾವ್ಯವಾಗಿ ಸಾದರಪಡಿಸಿ ಸಭಿಕರಲ್ಲಿ ಭಕ್ತಿಭಾವ ಮೂಡಿಸಿದರು. ಬಳಿಕ ಮೈಸೂರು ವಾಸುದೇವಾಚಾರ್ಯರ ರಚನೆಯ ಕನ್ನಡ ಗೀತೆ 'ಶ್ರೀ ಚಾಮುಂಡೇಶ್ವರಿ ಪಾಲಯಮಾಂ... ಕೃಪಾಕರೀ ಶಂಕರಿ...' ಗೀತೆಯನ್ನು ಬಿಲಹರಿ ರಾಗ ಮತ್ತು ಆದಿ ತಾಳದಲ್ಲಿ ಹಾಡಿ ರಂಜಿಸಿ ಭಕ್ತಿಯ ಸಿಂಚನ ಉಂಟು ಮಾಡಿದರು. ನಂತರ 'ಮಹಿಷಾಶುರ ಮರ್ದಿನಿ...' ಸಂಸ್ಕೃತದ ಭಕ್ತಿಗೀತೆ ಹಾಡಿ, ಸಭಿಕರು ಭಕ್ತಿಯಲ್ಲಿ ತೇಲುವಂತೆ ಮಾಡಿದರು.

ಅಲ್ಲದೆ, ಲಾಲ್‌ಗುಡಿ ಜಯರಾಮನ್ ರಚನೆಯ 'ಶ್ರೀ ಜಗದೀಶ್ವರಿ ದುರ್ಗಾಮಾತ ಸ್ವಾಗತಂ ಸುಸ್ವಾಗತಂ...' ಗೀತೆಯನ್ನು ಚಕ್ರವಾಕ ರಾಗ ಹಾಗೂ ಆದಿ ತಾಳದಲ್ಲಿ ಸಾದರಪಡಿಸಿ ಶೋತೃಗಳನ್ನು ಸಂಗೀತದ ಸುಧೆಯಲ್ಲಿ ತೇಲುವಂತೆ ಮಾಡಿದರು. ಪಕ್ಕವಾದ್ಯದಲ್ಲಿ ರಮೇಶ್ ಧನ್ನೂರ್, ಪ್ರವೀಣ್, ಟಿಟಿಬಾ ಮತ್ತು ಗೌತಮ್ ಸಹಕಾರ ನೀಡಿದರು.

ಇದಕ್ಕೂ ಮುನ್ನ ಕಲಬುರಗಿಯ ಶಿವಶರಣಯ್ಯ ಎಸ್.ಸ್ವಾಮಿ ಮತ್ತು ತಂಡ ತಮ್ಮ ತತ್ವಪದ ಗಾಯನದಲ್ಲಿ ಮಾನವನ ಬದುಕಿನ ಪಾಠ ಹಾಗೂ ಮೈಸೂರು ದಸರಾದ ವೈಭವ ಮೂಡಿ ಬಂದಿತು. ಪ್ರಾರಂಭದಲ್ಲಿ ಎಂ.ಎಸ್.ಗಣೇಶ್ ಮತ್ತು ತಂಡವು ನಾದಸ್ವರದಲ್ಲಿ ಕೇಳುವರು ತಲೆದೂಗುವಂತೆ ಮಾಡಿತು. ಪಂಡಿತ್ ನರಸಿಂಹಲು ವಡವಾಟಿ ಅವರ ಕ್ಲಾರಿಯೋನೆಟ್ ಮತ್ತು ವಿದ್ವಾನ್ ಕದ್ರಿ ರಮೇಶ್‌ನಾಥ್ ಅವರ ಸ್ಯಾಕ್ಸೋಫೋನ್ ಜುಗಲ್‌ಬಂದಿ ವಾದ್ಯ ಸಂಗೀತ ಸಭಿಕರನ್ನು ಸಂಗೀತ ಅಲೆಯಲ್ಲಿ ತೇಲಿಸಿತು. ಅಲ್ಲದೆ, ಮೈಸೂರು ರಂಗಾಯಣದ ಮಾಜಿ ನಿರ್ದೇಶಕ ಹೆಚ್.ಜನಾರ್ಧನ್ (ಜನ್ನಿ) ಮತ್ತು ತಂಡದ ಜನಪದ ಗಾಯನ ಸೇರಿದಂತೆ ವಿವಿಧ ಸಂಗೀತ ಪ್ರಕಾರಗಳು ಶೋತೃಗಳನ್ನು ಮಂತ್ರಮುಗ್ಧರಾಗಿಸಿ ಮೈಮರೆಯುವಂತೆ ಮಾಡಿದವು. ಬೆಂಗಳೂರಿನ ಸೌಮ್ಯ ಕಾರ್ಯಕ್ರಮ ನಿರೂಪಿಸಿದರು.

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು